ಸಂಪುಟ 22 ಸಂಚಿಕೆ 6
ಫೆಬ್ರವರಿ 6, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಪೆರ್ಯಾರರಗ



ಭಾರತದ ಸಂವಿಧಾನ

ಸಾಧಿಸಬೇಕಾದ ಆಶಯಗಳು

ಕೊಜೆಂಟ್ರಿಕ್ಸ್: ಕೆಟ್ಟ ಮೇಲೆ ಬುದ್ಧಿ ಬಂದೀತೆ?



ಅಸ್ಪೃಶ್ಯತೆ ವಿರುದ್ಧ ಸಮರ

ವ್ಯವಸ್ಥೆಯನ್ನು ತಮ್ಮ ಹರಿತ ನಾಲಗೆಯಿಂದ
ಟೀಕೆಗೊಳಪಡಿಸಿದ ಲಂಕೇಶ್ ಇನ್ನಿಲ್ಲ



ಕೊಳೆ ತೊಳೆಯದ ಶೃಂಗಸಭೆ

ಬೆಂಗಳೂರು ನಗರವನ್ನು ಸಿಂಗರಿಸಲೆಂದೇ ಶೃಂಗಸಭೆ ನಡೆಯಿತು. ಬೆಂಗಳೂರನ್ನು ಸಿಂಗಪುರವನ್ನಾಗಿಸುವ 'ಘನಧ್ಯೇಯ'ಕ್ಕಾಗಿ ನಡೆದ ಈ ಸಭೆಯು ಕೇವಲ ಠಾಕು-ಠೀಕಿನ, ಝಣಝಣ ಕಾಂಚಣದ ಕಂಪನಿಯ ಮಾಲೀಕರು ಅಥವಾ ಅವರ ಪ್ರತಿನಿಧಿಗಳು ಔಪಚಾರಿಕತೆಗಾಗಿ ಕೆಲವು ಗಣ್ಯರನ್ನು ಒಳಗೊಂಡು ಬಾಗಿಲು ಭದ್ರಪಡಿಸಿಕೊಂಡು 'ಕಾರ್ಯಯೋಜನೆ'ಯನ್ನು ರೂಪಿಸಿತು. ರಾಜ್ಯದ ಅಭಿವೃದ್ಧಿಯನ್ನು ಕಂಪನಿಗಳ ಧಣಿಗಳಿಗೆ 'ದತ್ತು' ನೀಡಿರುವ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರ ಕನಸಿನ ಕೂಸೆಂದು, ಅದಕ್ಕೆ ನೇಮಿಸಿರುವ 'ಟಾಸ್ಕ್ ಫೋರ್ಸ್‌ಗಳೆಂಬ' ಸೂಪರ್ ಸರ್ಕಾರದ ನೇತೃತ್ವದಲ್ಲಿನ ಈ ಸಭೆಗೆ ನಗರವನ್ನು ಸುಂದರವಾಗಿಸುವ ಸಾಮಾನ್ಯ ಜನರ ಪ್ರತಿನಿಧಿಗಳಾಗಲೀ ಅಥವಾ ಹಂದಿ - ನಾಯಿಗಳಿಗಿಂತಲೂ ನಿಕೃಷ್ಟವಾಗಿ ಬದುಕುವ ಕೊಳೆಗೇರಿಗಳ ದುಡಿಯುವ ಜನ ಪ್ರತಿನಿಧಿಗಳು, ಪ್ರಜಾಸತ್ತೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುವ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಆಹ್ವಾನಿಸದೇ ಇದ್ದುದು ಗಮನಾರ್ಹ. ಅತ್ಯಂತ ಸಿರಿವಂತ ಧಣಿಗಳ ಜೊತೆಗೆ ಇಂತಹವರನ್ನು ಕೂಡಿಸುವುದು ಎಂದರೇನು? ಎನ್ನಿಸಿರಬೇಕು.

ಈ ಶೃಂಗಾರದ ಶೃಂಗಸಭೆ ಯಾಕೋ ಇತ್ತೀಚೆಗಿನ ದಿನಗಳಲ್ಲಂತೂ ವಿದೇಶಿ ಬಂಡವಾಳವನ್ನು ಸೆಳೆಯಲು ಸರ್ಕಾರ ನಡೆಸುತ್ತಿರುವ ಕಸರತ್ತು ಗಣನೀಯ. ವಿದೇಶಿ ಸರ್ಕಾರಗಳ ಮುಖ್ಯಸ್ಥರು, ಕೈಗಾರಿಕೋದ್ಯಮಿಗಳು ಬೆಂಗಳೂರಿಗೆ ನೀಡುತ್ತಿರುವ ಭೇಟಿಗಳು ಹೆಚ್ಚುತ್ತಿವೆ. ಈ

ಸಂಪಾದಕೀಯ

ಕಂಪನಿಗಳನ್ನು ಆಕರ್ಷಿಸಲು ಹಿಂದಿನ ಕಸರತ್ತುಗಳು ಸಾಕಾಗಲಿಲ್ಲವೆನ್ನಿಸಿಯೇ, ಈಗ ಸಿಂಗಾಪುರವನ್ನು ಮಾದರಿಯನ್ನಾಗಿ ಇಡಲಾಗುತ್ತಿದೆ. ಉತ್ಪಾದನಾ ರಂಗದಲ್ಲಿ ಹಣ ಹೂಡದ ಕೇವಲ 'ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯನ್ನೇ ಆಧರಿಸಿದ ಉದ್ಯೋಗರಹಿತ ಅಭಿವೃದ್ಧಿ' ಬಯಸುವ ಕಂಪನಿಗಳು ಸರಕಾರಗಳನ್ನು ತಮ್ಮ ತಾಳಕ್ಕೆ ಕುಣಿಯುವಂತೆ ಒತ್ತಡ ಬೀರುತ್ತಿವೆ. ಹೀಗಾಗಿ ಸರಕಾರ ಕಾಲಕಾಲಕ್ಕೆ ವೇಷ ಧರಿಸಿ, ಸ್ತುತಿಗೀತೆ ಹಾಡುತ್ತಿದೆ.


ಈ ಶೃಂಗಸಭೆಯಲ್ಲಿ ಭಾರೀ ಮಹತ್ವದ ಯೋಜನೆಗಳನ್ನು ರೂಪಿಸಿಲ್ಲ. ನಗರದ ರಸ್ತೆಗಳ ಸುಧಾರಣೆಯೇ 'ಶೃಂಗಾರ ಸೂತ್ರದ' ಬಹುತೇಕ ಅಂಶವಾಗಿದೆ. ಬೆಂಗಳೂರು ನಗರದಲ್ಲಿನ ಪರಿಸರಮಾಲಿನ್ಯ, ಕುಡಿಯುವ ನೀರು, ಶೌಚಾಲಯಗಳ ಕೊರತೆ, ವಾಸಿಸಲು ಯೋಗ್ಯವಾಗಿರುವ ಮನೆಗಳು, ಶುಚಿತ್ವ, ಆಸ್ಪತ್ರೆ, ನಾಗರೀಕ ಸೌಲಭ್ಯಗಳು, ಕೊಳಗೇರಿಗಳು, ಮುಂತಾದ ಸುಧಾರಣೆಯತ್ತ ಗಮನವೇ ಇಲ್ಲವಾಗಿದೆ. ನಗರದ ಜೀವನಾಡಿಯಾಗಿರುವ ಈ ವಿಭಾಗಗಳತ್ತ ದಿವ್ಯ ನಿರ್ಲಕ್ಷ್ಯವು ಎದ್ದು ಕಾಣುತ್ತದೆ. ಅಂತಹ ಯೋಜನೆಯೆಂದರೆ ಈ ಜನಸಮೂಹಗಳನ್ನೂ ನಗರದಿಂದ ದೂರ ಓಡಿಸುವುದೂ ಆಗಬಹುದು.



ಇಂದು ಕೇವಲ ಬೆಂಗಳೂರು ಮಾತ್ರವಲ್ಲ ಹಾಗೂ ಇತರೆ ನಗರಗಳೂ ಒಟ್ಟಾರೆ ಕರ್ನಾಟಕವೇ ಶುಚಿ ಸುಂದರವಾಗಬೇಕು. ಆದರೆ ಸರ್ಕಾರದ ಚಿಂತನೆ ಹಾಗೂ ಕ್ರಮಗಳು ಅಭಿವೃದ್ಧಿಯ ಕಲ್ಪನೆಗಳು, ಅದನ್ನು ನಿರ್ವಹಣೆಗೆ ಅವಲಂಬಿಸಲಾದ ಖಾಸಗೀ ಧಣಿಗಳು, ಮುಂಬರುವ ಗಂಭೀರ ಅಸಮತೋಲನ ಮತ್ತು ಅಭಿವೃದ್ಧಿಯ ನಿರಾಕರಣೆಯನ್ನು, ಎತ್ತಿ ತೋರಿಸುತ್ತದೆ. ಚುನಾಯಿತ ಪ್ರತಿನಿಧಿಗಳ ಪಾತ್ರವನ್ನು ಗೌಣಗೊಳಿಸಿ, ಕಾರ್ಪೋರೇಟ್ ಸಂಸ್ಥೆಗಳ ಬಾಯಿಗೆ ಎಲ್ಲವನ್ನೂ ದೂಡಲಾಗುತ್ತಿದೆ.

ಭಾರತದ ಸಂವಿಧಾನಕ್ಕೆ ೫೦ ವರುಷಗಳು ತುಂಬುತ್ತಿರುವಾಗ ಸರ್ಕಾರದಲ್ಲಿರುವ ಕೋಮುವಾದಿ - ಫ್ಯಾಸಿಸ್ಟ್ ಮನೋಭಾವದ ಶಕ್ತಿಗಳು ಸಂವಿಧಾನದ ಮೂಲ ಆಶಯಗಳ ಪ್ರಜಾತಂತ್ರದ ವ್ಯವಸ್ಥೆ ಮೇಲೆ ಧಾಳಿ ನಡೆಸುತ್ತಿರುವ ಮತ್ತು ಅಭಿವೃದ್ಧಿಯ ಸೂತ್ರ ಮತ್ತು ಶಕ್ತಿಯನ್ನು ಪೂರ್ಣವಾಗಿ ಕಂಪನಿಗಳಿಗೆ ಧಾರೆ ಎರೆದು ಅವರ ಕೃಪೆಯಲ್ಲೇ ಬದುಕಲು ಒತ್ತಾಯಿಸುತ್ತಿರುವುದು ಮುಂಬರುವ ದಿನಗಳಲ್ಲಿ ಗಂಭೀರ ಅಪಾಯ ತರಲಿದೆ ಎಂಬುದನ್ನು ಗಮನಿಸಬೇಕು.

ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್



ಖಾಸಗೀಕರಣದ ವಾಜಪೇಯಿ ಸರಕಾರದಿಂದ

ದೇಶೀ-ವಿದೇಶೀ ಬಂಡವಾಳಿಗರಿಗೆ 'ಗಣತಂತ್ರ ದಿನದ ಕೊಡುಗೆ'!

ಕಳೆದ ವಾರ ವಾಜಪೇಯಿ ಸರಕಾರ ಜನಸಾಮಾನ್ಯರು ಹೊಟ್ಟೆ-ಬಟ್ಟೆ ಕಟ್ಟಿ ಮಾಡಿದ ಉಳಿತಾಯಗಳ ಮೇಲಿನ ಬಡ್ಡಿದರವನ್ನು ಇಳಿಸಿ ಹೊಸವರ್ಷದ, ಸಂಕ್ರಾಂತಿಯ 'ಉಡುಗೊರೆ' ನೀಡಿದ ಬಗ್ಗೆ ಓದಿರುವಿರಿ. ಈ ವಾರ ಅದೇ ಸರಕಾರ ಜನರಿಗೆ ಮತ್ತು ಇಡೀ ದೇಶಕ್ಕೆ ಇನ್ನೂ ಭೀಕರ 'ಉಡುಗೊರೆ' ನೀಡಿದೆ. ಗಣತಂತ್ರದ ಸುವರ್ಣೋತ್ಸವದ ಆಚರಣೆಯ ಹಿಂದಿನ ದಿನ ಎರಡು ದೊಡ್ಡ ಸಾರ್ವಜನಿಕ ವಲಯದ ಉದ್ದಿಮೆಗಳನ್ನು-ಇಂಡಿಯನ್ ಏರ್‌ಲೈನ್ಸ್ ಮತ್ತು ಮಾಡರ್ನ್ ಫುಡ್ ಕಂಪನಿಯನ್ನು-ದೇಶೀ-ವಿದೇಶಿ ಬಂಡವಾಳಿಗರಿಗೆ ತಟ್ಟೆಯಲ್ಲಿಟ್ಟು ಆರತಿಯೆತ್ತಿ ಕೊಟ್ಟಿದೆ-ಯಾವುದೇ ನಾಚಿಕೆಯಿಲ್ಲದೆ, 'ಸ್ವದೇಶಿ' ಮುಜುಗರವಿಲ್ಲದೆ.

ಇಂಡಿಯನ್ ಏರ್‌ಲೈನ್ಸ್ ಇತ್ತೀಚೆಗೆ ಸರಕಾರದ ಅಸಮರ್ಥತೆಯನ್ನು ಪ್ರದರ್ಶಿಸಿದ ವಿಮಾನ ಅಪಹರಣದ ಸಂದರ್ಭದಲ್ಲಿ ಸುದ್ದಿಯಲ್ಲಿತ್ತು. ಮತ್ತೆ ಸುದ್ದಿಯಲ್ಲಿದೆ - ಈ ಬಾರಿ ಆರ್ಥಿಕ ರಂಗದಲ್ಲಿ ದೇಶದ ಹಿತಾಸಕ್ತಿಗಳನ್ನೇ ಮಾರಾಟಕ್ಕಿಡುವ ವಾಜಪೇಯಿ ಸರಕಾರದ ಅಕ್ಷಮ್ಯ ಹೊಣೆಗೇಡಿತನದ ಪ್ರದರ್ಶನ ನಡೆದಿದೆ.

ಇಂಡಿಯನ್ ಏರ್‌ಲೈನ್ಸ್ ಸಾರ್ವಜನಿಕ ವಲಯದ ಒಂದು ಪ್ರಮುಖ ಕಂಪನಿ. ಆಂತರಿಕ ವಿಮಾನ ಯಾನದ 65% ಪಾಲು ಗಿಟ್ಟಿಸಿರುವ ಈ ಕಂಪನಿ ಹಿಂದೆ ನಷ್ಟದಲ್ಲಿತ್ತು. ಆದರೆ ಕಳೆದ ಮೂರು ವರ್ಷಗಳಿಂದ ಸತತವಾಗಿ ಲಾಭದಲ್ಲಿದೆ. ಆದರೂ 'ದಕ್ಷತೆ' ಹೆಚ್ಚಿಸುವ ಹೆಸರಿನಲ್ಲಿ ಸರಕಾರ ಅದನ್ನು ಖಾಸಗೀಕರಿಸಲು ನಿರ್ಧರಿಸಿದೆ. ಇಂಡಿಯನ್ ಏರ್‌ಲೈನ್ಸಿನಲ್ಲಿರುವ ತನ್ನ ಪಾಲಿನ 51% ರಷ್ಟು ಅಂದರೆ ಅರ್ಧಕ್ಕಿಂತ ಹೆಚ್ಚು ಶೇರುಗಳನ್ನು ಮಾರಲು ನಿರ್ಧರಿಸಿದೆ. ಬಹಳ ಮಹತ್ವದ ಸಂಗತಿಯೆಂದರೆ ಇದರಲ್ಲಿ ಅರ್ಧಕ್ಕಿಂತ ಹೆಚ್ಚನ್ನು ಅಂದರೆ 26% ದಷ್ಟು ಯಾರೋ ಒಬ್ಬರಿಗೆ ಅಥವಾ ಒಂದು ಕಂಪನಿಗೆ ಮಾರಲಾಗುತ್ತಿದೆ. ಉಳಿದ 25% ವನ್ನು ಮಾತ್ರ ಹಣಕಾಸು ಸಂಸ್ಥೆಗಳು, ಇಂಡಿಯನ್ ಏರ್‌ಲೈನ್ಸ್ ಇತ್ಯಾದಿಯವರಿಗೆ ಮಾರಲಾಗುತ್ತಿದೆ. ಈ ವ್ಯವಹಾರ ಇಷ್ಟಕ್ಕೆ ನಿಲ್ಲುವುದಿಲ್ಲ. 26% ಶೇರು ಕೊಳ್ಳುವ ಪಾಲುದಾರನಿಗೆ/ಕಂಪನಿಗೆ ಇಂಡಿಯನ್ ಏರ್‌ಲೈನ್ಸ್‌ನ ನಿರ್ವಹಣೆಯನ್ನು ವಹಿಸಿ ಕೊಡಲಾಗುವುದು. ಸರಕಾರದ ಬಳಿ ಅದಕ್ಕಿಂತ ಹೆಚ್ಚು ಶೇರುಗಳಿದ್ದರೂ, ಆ ಖಾಸಗಿಯವರಿಗೆ ಇಂಡಿಯನ್ ಏರ್‌ಲೈನ್ಸ್‌ನ ಮ್ಯಾನೇಜ್‌ಮೆಂಟಿನಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡುವುದಾಗಿ ವಾಜಪೇಯಿ ಸರಕಾರ ಯಾವುದೇ ನಾಚಿಕೆಯಿಲ್ಲದೆ ಪ್ರಕಟಿಸಿದೆ. ಹೀಗೆ 26% ಶೇರು ಪಡೆಯುವ ಕಂಪನಿಯಲ್ಲಿ 40% ಕ್ಕಿಂತ ಹೆಚ್ಚು ವಿದೇಶಿ ಬಂಡವಾಳ ಇರಬಾರದು ಎಂದು ಬಾಯಿಯಲ್ಲೇನೋ ಹೇಳಲಾಗಿದೆ. ಇದು ಸಂಪೂರ್ಣ ಅರ್ಥಹೀನ ಮಾತು. ಏಕೆಂದರೆ 100% ಅನಿವಾಸಿ ಬಂಡವಾಳವಿರುವ ಕಂಪನಿಗೆ ಅವಕಾಶವಿದೆಯಂತೆ. ಅಂದರೆ ವಿದೇಶಿ ಕಂಪನಿಗಳು 'ಅನಿವಾಸಿ ಭಾರತೀಯ' ಎಂಬ ಬೋರ್ಡ್ ತಗಲಿಸಿಕೊಂಡು ಈ ಬೃಹತ್ ಕಂಪನಿಯನ್ನು ಅಗ್ಗ ಬೆಲೆಯಲ್ಲಿ ತನ್ನ ಹತೋಟಿಯೊಳಗೆ ತರಬಹುದು. 2000 ಕೋಟಿ ರೂ. ಬೆಲೆ ಬಾಳುವ ಇಂಡಿಯನ್ ಏರ್‌ಲೈನ್ಸ್‌ನ್ನು ಕೇವಲ 27 ಕೋಟಿ ರೂ. ಬಂಡವಾಳ ತೊಡಗಿಸುವ (ಈಗ ಸರಕಾರದ ಬಳಿಯಿರುವ ಶೇರುಗಳ ಮೊತ್ತ 105 ಕೋಟಿರೂ) ವಿದೇಶಿ ಅಥವಾ 'ದೇಶಿ' ಬೋರ್ಡಿನ ವಿದೇಶಿ ಕಂಪನಿಗೆ ಮಾರಿ ಬಿಡಲು ಈ ಸರಕಾರ ನಿರ್ಧರಿಸಿದೆ.! ಈ ಮೂಲಕ ದೇಶದ ವಿಮಾನ ಸಾರಿಗೆಯ ಮೇಲೆ ಒಮ್ಮೆಲೇ ಗುತ್ತೇದಾರಿಕೆ ಹೊಂದಲು ವಾಜಪೇಯಿ ಸರಕಾರ ಬಾಗಿಲು ತೆರೆದು ಕೊಟ್ಟಿದೆ.

ಅಂಕಲ್ ಚಿಪ್ಸ್‌ನೊಂದಿಗೆ ಇನ್ನು ಮುಂದೆ ಕ್ವೀನ್ಸ್ ಬ್ರೆಡ್ ಕೂಡಾ!

ಸಂಘ ಪರಿವಾರದ 'ಸ್ವದೇಶಿ ಜಾಗರಣ ಮಂಚ್'ನ 'ಸ್ವದೇಶಿ' ಬೊಬ್ಬೆ ನಿಮಗೆ ನೆನಪಿರಬಹುದು. ಎರಡು ವರ್ಷಗಳ ಹಿಂದೆ ಯಾವ್ಯಾವ 'ಸ್ವದೇಶಿ' ಸಾಬೂನು, ಟೂತ್ ಪೇಸ್ಟ್, ಪೌಡರ್ ಇತ್ಯಾದಿಗಳನ್ನು ಉಪಯೋಗಿಸಬೇಕು, ಯಾವ್ಯಾವ 'ವಿದೇಶಿ' ಸೋಪು, ಟೂತ್‌ಪೇಸ್ಟ್, ಪೌಡರ್ ಇತ್ಯಾದಿಗಳನ್ನು ಉಪಯೋಗಿಸ ಬಾರದು ಎಂಬ ಪಟ್ಟಿಯನ್ನೇ ಅದು ಪ್ರಕಟಿಸಿತ್ತು. ಉದಾಹರಣೆಗೆ ಹಿಂದೂಸ್ತಾನ್ ಲೀವರ್ ಕಂಪನಿಯ ಇಂತಹ 'ವಿದೇಶಿ' ಉತ್ಪನ್ನಗಳನ್ನು ಬಳಸಬೇಡಿ, ಟಾಟಾ ಕಂಪನಿಗಳ ಇಂತಹ 'ಸ್ವದೇಶಿ' ಉತ್ಪನ್ನಗಳನ್ನು ಬಳಸಿ ಎಂದು ಸಲಹೆ ಮಾಡಿತ್ತು. ಈ ಸಲಹೆ ಬಂದ ಕೆಲವೇ ದಿನಗಳಲ್ಲಿ ಟಾಟಾ ಗುಂಪಿಗೆ ಸೇರಿದ ಟಾಮ್ಕೋ ಸೋಪು ಕಾರ್ಖಾನೆಯನ್ನು, ಲಕ್ಮೆ ಪೌಡರ್ ಕಂಪನಿಯನ್ನು ಇದೇ ಹಿಂದೂಸ್ತಾನ್ ಲೀವರ್ ಕಂಪನಿಯೇ ವಹಿಸಿಕೊಂಡಿತು. ಈ 'ಮಂಚ್' ಚಕಾರವೆತ್ತಲಿಲ್ಲ. ಈಗ ಅವರ 'ಪರಿವಾರ'ದ 'ಮುಖವಾಡ'ದ ಸರಕಾರ ಅವರ ಮುಖವಾಡವನ್ನೇ ಸಂಪೂರ್ಣ ಬಯಲುಗೊಳಿಸುವ ಕೆಲಸ ಮಾಡಿದೆ. ಮಾಡರ್ನ್ ಬ್ರೆಡ್ ಖ್ಯಾತಿಯ, ಇತರ ಉತ್ತಮ ಬೇಕರಿ ಪದಾರ್ಥಗಳನ್ನು ಉತ್ಪನ್ನ ಮಾಡುವ ಮಾಡರ್ನ್ ಫುಡ್ ಇಂಡಸ್ಟ್ರೀಸ್ ಲಿಮಿಟೆಡ್ 75% ಪಾಲನ್ನು ಅದೇ ಹಿಂದೂಸ್ತಾನ್ ಲೀವರ್ ಕಂಪನಿಗೆ ವಹಿಸಿಕೊಡುವುದಾಗಿ ಪ್ರಕಟಿಸಿದೆ. ಇನ್ನು ಮುಂದೆ ಈ ಕಂಪನಿಯ ಏಳು ನಿರ್ದೇಶಕರಲ್ಲಿ ಇಬ್ಬರು ನಿರ್ದೇಶಕರು ಮಾತ್ರ ಸರಕಾರದ ವತಿಯಿಂದ ಇರುತ್ತಾರೆ, ಉಳಿದ ಐದು ಮಂದಿ ಹಿಂದುಸ್ತಾನ್ ಲೀವರ್ ಕಂಪನಿಯವರಿರುತ್ತಾರೆ.

ಈ 'ಹಿಂದುಸ್ತಾನ್ ಲೀವರ್' ಕಂಪನಿಯ ಹೆಸರಲ್ಲಿ ಮಾತ್ರ 'ಹಿಂದೂಸ್ತಾನ್' ಎಂಬ ಪದವಿದೆ. ವಾಸ್ತವ ವಾಗಿ ಇದು ಇಂಗ್ಲೆಂಡಿನ 'ಯೂನಿಲಿವರ್' ಕಂಪನಿಯ ಸಂಪೂರ್ಣ ಒಡೆತನದಲ್ಲಿರುವ ವಿದೇಶಿ ಕಂಪನಿ. ಈಗಾಗಲೇ ನಮ್ಮ ದೇಶದ ಸೋಪು ಮತ್ತು ಸೌಂದರ್ಯವರ್ಧಕಗಳ ಮಾರುಕಟ್ಟೆಯಲ್ಲಿ ಗುತ್ತೇದಾರಿಕೆ ಸ್ಥಾಪಿಸಿರುವ ಈ ವಿದೇಶಿ ಕಂಪನಿಗೆ ಈಗ ಪ್ರಮುಖ ಆಹಾರ ಉತ್ಪನ್ನ ವಲಯದಲ್ಲೂ ಸಂಪೂರ್ಣ ಹತೋಟಿ ನೀಡಲು ವಾಜಪೇಯಿ ಸರಕಾರ ಕಂಕಣಬದ್ಧವಾಗಿ ನಿಂತಿದೆ. ಕೆಲವೇ ತಿಂಗಳ ಹಿಂದೆ 'ನಮಗೆ ಕಂಪ್ಯೂಟರ್ ಚಿಪ್ಸ್‌ಗಳಿಗೆ ವಿದೇಶಿ ತಂತ್ರಜ್ಞಾನ, ಬಂಡವಾಳ ಬೇಕು, ಅಂಕಲ್ ಚಿಪ್ಸ್‌ಗಳಿಗಲ್ಲ' ಎಂದು ತನ್ನ ಬೆನ್ನು ತಾನೇ ಚಪ್ಪರಿಸಿಕೊಳ್ಳುತ್ತಾ ಹೇಳಿದ ಮುರಳಿಮನೋಹರ ಜೋಷಿ, ಪ್ರಮೋದ್ ಮಹಾಜನ್ ಇತ್ಯಾದಿ ಈಗಲೂ ಇದೇ ವಾಜಪೇಯಿ ಸರಕಾರದಲ್ಲಿ ಮಂತ್ರಿಗಳಿದ್ದಾರೆಯಲ್ಲವೇ? ವಾಜಪೇಯಿ ಸರಕಾರದ ಬೂಟಾಟಿಕೆಗೆ ಪಾರವೇ ಇದ್ದಂತಿಲ್ಲ. 14 ಉತ್ಪಾದನಾ ಘಟಕಗಳು, 4 ಶಕ್ತಿ ವರ್ಧಕ ಆಹಾರ ಉತ್ಪನ್ನ ಘಟಕಗಳು, 17 ಏಜೆನ್ಸಿಗಳು ಹಾಗೂ 8 ಪೂರಕ ಘಟಕಗಳಿರುವ ಈ ಮಾಡರ್ನ್ ಫುಡ್ ಇಂಡಸ್ಟ್ರೀಸ್ ಲಿಮಿಟೆಡ್‌ನ್ನು ವಾಜಪೇಯಿ ಸರಕಾರ ಕೇವಲ 105.45 ಕೋಟಿ ರೂ.ಗಳಿಗೆ ಮಾರಿ ತಿನ್ನಲು ಮುಂದಾಗಿದೆ. 15 ವರ್ಷಗಳ ಹಿಂದೆ ರಾಜೀವ್ ಗಾಂಧಿ ಸರಕಾರ ಮಾಡಲು ಹಿಂಜರಿದ ಈ ನಾಚಿಕೆಗೇಡಿ ಕೆಲಸವನ್ನು ಈಗ ವಾಜಪೇಯಿ ಸರಕಾರ ಮಾಡಿ ಹಿಂದೂಸ್ತಾನ್ ಲೀವರ್ ಕಂಪನಿಯೆದುರು ತಲೆಬಾಗಿ ಕೃತಾರ್ಥವಾಗಿದೆ.

ಏಕೆ ಈ ಶೇರು ಮಾರಾಟ? ಖಾಸಗೀಕರಣ?

ಸಾರ್ವಜನಿಕ ವಲಯದಲ್ಲಿ ದಕ್ಷತೆಯೆಂಬುದು ಇರಲು ಸಾಧ್ಯವಿಲ್ಲ, ಆದ್ದರಿಂದ ಖಾಸಗೀಕರಣ ಅಗತ್ಯ ಎಂಬುದು ವಿಶ್ವದ
ಉದಾರೀಕರಣವಾದಿಗಳ, ಅವರ
ಉಪದೇಶಗಳನ್ನು ಶಿರಸಾವಹಿಸಲು
ಕಾತುರವಾಗಿರುವ ನಮ್ಮ ಸರಕಾರದ ವಾದ
ಆದರೆ 1991 ರಿಂದ ಉದಾರೀಕರಣದ
ಪ್ರಕ್ರಿಯೆ ಆರಂಭವಾದಂದಿನಿಂದ
ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು
ಮಾರಾಟ, ಖಾಸಗೀಕರಣ ದೇಶದ
ಸಂಪನ್ಮೂಲಗಳ ದಕ್ಷ ಬಳಕೆ ಹೆಚ್ಚಿಸಿ ದೇಶ
ಒಳಿತು ಮಾಡಿದ ಉದಾಹರಣೆಗಳಿಲ್ಲ
ವಾಸ್ತವವಾಗಿ ಖಾಸಗೀಕರಣದ ಮುಖ
ಉದ್ದೇಶ ದಕ್ಷತೆ ಹೆಚ್ಚಿಸುವುದಲ್ಲ, ಸರಕಾರ
ಹಣಕಾಸು ಕೊರತೆಯನ್ನು ತುಂಬಿ
ಕೊಳ್ಳುವುದೇ ಅದರ ಮುಖ್ಯ ಉದ್ದೇ
ಎಂದು ಈಗ ಸ್ಪಷ್ಟವಾಗಿದೆ. ಇಲ್ಲವಾದ
ಕೇಂದ್ರ ಸರಕಾರದ ಬಜೆಟ್ಟಿನಲ್ಲಿ 1991-9
ರಲ್ಲಿ 2500 ಕೋಟಿ ರೂ.ಗಳಷ್ಟು ಶೇರು
ಮಾರಾಟದ ಅಂದಾಜು ಹಾಕಿದ್ದರು
1999-2000 ರಲ್ಲಿ ಅದು 10000 ಕೋ
ರೂ.ಗಳಿಗೇರಿತು. ಈ ಗುರಿ ತಲುಪಲು ಈ
ವರ್ಷ ಸಾಧ್ಯವಿಲ್ಲ ಎಂದು ಹಣಕಾ
ಮಂತ್ರಿಗಳು ಹತಾಶೆಯಿಂದ ಹೇಳಿದ್ದ
ಎಂಬುದು ಬೇರೆ ಮಾತು. ಇನ್ನು ಮೂ
ತಿಂಗಳಲ್ಲಿ ಉಳಿದಿರುವ ಈ ಹಣಕಾ
ವರ್ಷದಲ್ಲಿ 10 ಸಾವಿರ ಕೋಟಿ ರೂ.
ಗುರಿಗೆದುರಾಗಿ ಸರಕಾರಕ್ಕೆ ಇದುವರೆ
ಸಾಧ್ಯವಾದದ್ದು 1500 ಕೋಟಿ ರೂ.ಗ
ಮಾತ್ರ - ಅದೂ ಗೇಲ್ (ಅನಿ
ಪ್ರಾಧಿಕಾರ) ನ ಶೇರುಗಳನ್ನು ಕಮ್ಮಿ ಬೆಲೆ
ಮಾರುವ ಕ್ರಮದಿಂದಾಗಿ.

ಕಳೆದ 9 ವರ್ಷಗಳಲ್ಲಿ ಮೂರು ಬಾ
ಮಾತ್ರ ಸರಕಾರಕ್ಕೆ ಗಮನಾರ್ಹ ರೀತಿಯ
ಶೇರು ಮಾರಾಟದ ಗುರಿಯತ್ತ ಬರ
ಸಾಧ್ಯವಾಗಿದೆ. ಈ ಮೂರು ವರ್ಷಗಳ
ಈ ಮೂಲಕ ತನ್ನ ಹಣಕಾಸು ಕೊರತೆಯ
10% ರಷ್ಟು ಕಮ್ಮಿ ತೋರಿಸಲು ಅದ
ಸಾಧ್ಯವಾಯಿತು. ಆದರೆ ಇದು ದೇಶ
ಜನರಿಗೆ ಕೊಟ್ಟದ್ದೇನು? ದೇಶದ ಜನ
ಬೆವರು ಸುರಿಸಿ, ಹೊಟ್ಟೆ ಬಟ್ಟೆ ಕಟ್ಟಿ ಸೃಷ್ಟಿ
ಆಸ್ತಿ ಖಾಸಗೀಯವರ ಕೈಗಳಿಗೆ ಹೋದ
ಇದು ಸದ್ಯದ ಹಣಕಾಸು ಮುಗ್ಗಟ್ಟಿನಿ
ಹೇಗೋ ಪಾರಾಗಲು ನಿರಂತರ ಪ್ರತಿಫ
ನೀಡುವ ಕಾಮಧೇನುವಿನಂತಹ ಆಸ್ತಿಗಳ
ಮಾರಾಟ ಮಾಡಿ ಭವಿಷ್ಯದಲ್ಲಿ ತಲೆ
ಮೇಲೆ ಕೈ ಹೊತ್ತು ಕೂತುಕೊಳ್ಳು
ಹುಂಬತನದ ಕ್ರಮವಲ್ಲದೆ ಬೇರೇನು?

ಆದರೆ ವಾಜಪೇಯಿ ಸರಕಾರ ಇನ್ನ
ಇಂತಹ ಈ ನಾಚಿಕೆಗೇಡಿನ ಕೃತ್ಯಗಳ
ಎಸಗಲು ಸಿದ್ಧತೆ ನಡೆಸುತ್ತಿದೆ. ಅದಕ್ಕಾಗಿಯ
ಒಂದು ಪ್ರತ್ಯೇಕ ಇಲಾಖೆಯನ್ನು ಸೃಷ್ಟಿ
ಅದಕ್ಕೊಂದು ಮಂತ್ರಿಯನ್ನು ನೇಮಿಸಿರು
ಸರಕಾರ ಇದು ಹಿಂದೆ ಕಾಂಗ್ರೆಸ್ ಸರಕಾ
ಶೇರುಗಳಲ್ಲಿ ಸ್ವಲ್ಪ ಭಾಗವನ್ನು ಮಾರಾ
ಮಾಡುತ್ತಿದ್ದರೆ ಈಗ ಅದನ್ನು ಒಂದೇ ಕಂಪ
ಅಥವಾ ಗುಂಪಿಗೆ ಮಾರಿ ಉದ್ದಿಮೆ
ನಿರ್ವಹಣೆಯನ್ನೇ ಅವರಿಗೆ ವಹಿಸಿಕೊಡ
ಮಟ್ಟಕ್ಕೆ ಈ ಸರಕಾರ ಇಳಿದಿದೆ. ದಾವೋಸ
ನಲ್ಲಿ ವಿಶ್ವ ಆರ್ಥಿಕ ವೇದಿಕೆಯ ಸಭ
ಹೋಗುವ ಮೊದಲು ವಿದೇಶಿ ಬಂಡವಾ
ವನ್ನು ಸಂತುಷ್ಟಿಗೊಳಿಸಲು ಕೈಗೊಂಡಿರು
ಈ ರಾಷ್ಟ್ರ-ವಿರೋಧಿ ಕ್ರಮವನ್ನು ಎ
ದೇಶಪ್ರೇಮಿಗಳು ಪ್ರತಿಭಟಿಸಬೇಕು, ಇ
ದೇಶವನ್ನು ಕಂತು-ಕಂತಿನಲ್ಲಿ ಮಾರಾ
ಮಾಡುವ ಈ ಕ್ರಮಕ್ಕೆ ಬಲವಾ
ಪ್ರತಿರೋಧ ಒಡ್ಡಬೇಕು ಎಂದು ಸಿಐಟಿ
ಕರೆ ನೀಡಿದೆ. ಐದು ಪ್ರಮುಖ ವಿಮಾ
ನಿಲ್ದಾಣಗಳನ್ನು ಖಾಸಗೀಯವರಿಗೆ ಲೀ
ಕೊಡುವ ನಿರ್ಧಾರದ ಬೆನ್ನಲ್ಲೇ ಬಂದಿರ
ಈ ಪ್ರಕಟಣೆ ಅತ್ಯಂತ ಆಘಾತಕಾರಿ ಹಾ
ದೇಶದ ಹಿತಾಸಕ್ತಿಗಳಿಗೆ ಸಂಪೂ
ವಿರೋಧವಾದದ್ದು ಎಂದು ಖಂಡಿಸಿ
ಸಿಪಿಐ(ಎಂ) ಪೊಲಿಟ್‌ಬ್ಯೂರೊ
ಖಾಸಗೀಕರಣದ ...

ಭಾರತದಲ್ಲಿ ಒಂದು ಪಿಡುಗಾಗಿರುವ ಜಾತೀಯತೆ, ಅಸ್ಪೃಶ್ಯತೆಗಳನ್ನು ನಿರ್ಮೂಲನೆಗೊಳಿಸಿ, ಸಾಮಾಜಿಕ ಸಮಾನತೆಯನ್ನು ತರುವ ಕನಸನ್ನು ಸ್ವಾತಂತ್ರ್ಯ ಹೋರಾಟಗಾರರು ಕಂಡಿದ್ದರು. ಸಂವಿಧಾನ ಅಂಗೀಕಾರವಾಗುವಾಗ ಇಡೀ ದೇಶದ ಪ್ರಜ್ಞಾವಂತ ಜನಸಮುದಾಯ ಅಂದುಕೊಂಡಿದ್ದು ಕೂಡಾ ಇದನ್ನೇ.

ಆದರೆ ಸಂವಿಧಾನ ಅಂಗೀಕಾರವಾಗಿ 50 ವರ್ಷಗಳಾದರೂ ಇಂದು ದೇಶದ ಒಂದು ಸಮುದಾಯದ ಜನರನ್ನು ಅಮಾನವೀಯವಾಗಿ ನಡೆದುಕೊಳ್ಳುವ ಪದ್ಧತಿ ಮುಂದುವರೆಯುತ್ತಿರುವುದು ದುರದೃಷ್ಟಕರ. ಇದನ್ನು ತೊಡೆದು ಹಾಕಲು ಒಂದು ಗಂಭೀರ ಪ್ರಯತ್ನವನ್ನು 'ಸಂವಿಧಾನ'ದ ಹೆಸರಲ್ಲಿ ಆಡಳಿತ ಮಾಡಿದ ಸರ್ಕಾರಗಳಿಂದ ಆಗಿದೆಯೇ ಎಂಬ ಸಂಶಯ ಮೂಡುತ್ತದೆ. **ನಮ್ಮಲ್ಲಿ ಅನೇಕ ಕಾನೂನುಗಳಿದ್ದರೂ ದಲಿತರ ಮೇಲಿನ ದೌರ್ಜನ್ಯ, ದಬ್ಬಾಳಿಕೆಗಳನ್ನು ತಡೆಯಲು ಅಸ್ತ್ರಗಳಾಗಲಿಲ್ಲ, ಹಾಗಾಗಿ ಈ ಕಾನೂನುಗಳೆಲ್ಲವು ಹಲ್ಲುಕಿತ್ತ ಹಾವಿನಂತಾಗಿವೆ.**


ಈ ನಿಟ್ಟಿನಲ್ಲಿ ಜನಜಾಗೃತಿ ನಡೆಸಿ, ಆಂದೋಲನಗಳ ಮೂಲಕ ದಲಿತ ಸಮುದಾಯಕ್ಕೆ ನ್ಯಾಯ ಒದಗಿಸಿಕೊಡುವ ಪ್ರಯತ್ನವನ್ನು ದೇಶದಲ್ಲಿ ಅನೇಕ ಸಂಘ-ಸಂಸ್ಥೆಗಳು ಕಳೆದ ಅನೇಕ ದಶಕಗಳಿಂದ ನಡೆಸಿವೆ.

ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಅಲ್ಲದೇ ನಗರಗಳಲ್ಲಿಯೂ ತನ್ನ ಹಿಡಿತ ಸಾಧಿಸಿರುವ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಅತ್ಯಂತ ದೊಡ್ಡ ಆಂದೋಲನ ನಡೆಯಬೇಕಾಗಿದೆ. ರಾಜ್ಯದ ಗ್ರಾಮೀಣ ಭಾಗದ ದುಡಿಯುವ ವರ್ಗವನ್ನು ಸಂಘಟಿಸುತ್ತಿರುವ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಈ ನಿಟ್ಟಿನಲ್ಲಿ ಒಂದು ಸೃಜನಾತ್ಮಕ ಕಾರ್ಯಕ್ರಮದ ಮೂಲಕ ರೂಪಿಸಿ ಇದನ್ನು ಒಂದು ಸವಾಲನ್ನಾಗಿ ಸ್ವೀಕರಿಸಿ ಬೆಂಗಳೂರಿನಲ್ಲಿ ಜನವರಿ-24 ರಂದು, 'ಅಸ್ಪೃಶ್ಯತೆ ಮತ್ತು ದೌರ್ಜನ್ಯದ' ವಿರುದ್ಧ ಕಾರ್ಯಕ್ರಮ ರೂಪಿಸಲು ರಾಜ್ಯ ಮಟ್ಟದ ಕಾರ್ಯಾಗಾರವನ್ನು ಸಂಘಟಿಸಿತ್ತು.

AIKS-DYFI-SFI-AIJMS-AILU ಸಂಘಟನೆಗಳ ಪ್ರತಿನಿಧಿಗಳು, ವಿವಿಧ ದಲಿತ ಸಂಘಟನೆಗಳ ಮುಖಂಡರುಗಳು, ಪ್ರಗತಿಪರ ಸಾಹಿತಿಗಳು-ಚಿಂತಕರು ಭಾಗವಹಿಸಿದ್ದ ಈ ಕಾರ್ಯಾಗಾರದಲ್ಲಿ ಅಸ್ಪೃಶ್ಯತೆಯ ಅಸ್ತಿತ್ವ, ಹೋರಾಟದ ರೂಪುರೇಷೆ ಕುರಿತಂತೆ ಚರ್ಚಿಸಿ, ಹಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಈ ಕುರಿತು ವಿವರವಾದ ವರದಿ.

ವರದಿ: **ಕೆ.ಮಹಾಂತೇಶ್**

ಅಸ್ಪೃಶ್ಯತೆ ವಿರುದ್ಧ ಸಮರ



'ಅಸ್ಪೃಶ್ಯತೆ ವಿರುದ್ಧದ' ಹೋರಾಟದಲ್ಲಿ ಎಲ್ಲ ವರ್ಗಗಳು ಪಾಲ್ಗೊಳ್ಳಬೇಕು

- ಪ್ರೊ. ಬರಗೂರು ರಾಮಚಂದ್ರಪ್ಪ


ಮಾಜದಲ್ಲಿ ಬೇರು ಬಿಟ್ಟಿರುವ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ವಿರುದ್ಧ ನಡೆಯುತ್ತಿರುವ ಹೋರಾಟ ಯಾವುದೇ ಒಂದು ಜಾತಿ, ಸಮೂಹಕ್ಕೆ ಸೀಮಿತವಾಗದೆ ಇಂತಹ ಹೋರಾಟದಲ್ಲಿ ಎಲ್ಲಾ ವರ್ಗಗಳ ಜನರೂ ಭಾಗವಹಿಸುವಂತಾಗ ಬೇಕೆಂದು ಬಂಡಾಯ ಸಾಹಿತಿಗಳು ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಬರಗೂರು ರಾಮಚಂದ್ರಪ್ಪ ಹೇಳಿದರು.

ಸಮಾಜದಲ್ಲಿ ಸಾಮರಸ್ಯದ ಮಾತುಗಳು ಕೇಳಿ ಬರುತ್ತಿದ್ದರೂ ಜಾತಿ ಮತ್ತು ಉಪಜಾತಿಯ ಹೆಸರಿನಲ್ಲಿ ವಿಘಟನೆಯ ಕೆಲಸಗಳು ನಡೆಯುತ್ತಿವೆ. **ಎಲ್ಲಾ ಜಾತಿಗಳನ್ನು ಒಂದುಗೂಡಿಸುವ ವಿಶಾಲ ತಳಹದಿಯ ಹೋರಾಟವನ್ನು ಜಾತಿವಾಸ್ತವಿಕತೆಯನ್ನು ಒಳಗೊಂಡು ವರ್ಗಪ್ರಜ್ಞೆ ಮೂಲಕ ನಡೆಯಬೇಕಾಗಿದೆ ಎಂದು** 'ಅಸ್ಪೃಶ್ಯತೆ ಮತ್ತು ದೌರ್ಜನ್ಯದ ವಿರುದ್ಧ' ನಡೆದ ರಾಜ್ಯ ಕಾರ್ಯಾಗಾರವನ್ನು ಉದ್ಘಾಟಿಸುತ್ತಾ ಅಭಿಪ್ರಾಯ ಪಟ್ಟರು.

ಅಸ್ಪೃಶ್ಯತೆ ವಿರುದ್ಧ ಹೋರಾಟವೆಂದರೆ ಒಂದು ಜನ ವರ್ಗವನ್ನು ಮತ್ತೊಂದು ಜನವರ್ಗದ ಬಳಿಗೆ ಒಬ್ಬ ಮನುಷ್ಯನನ್ನು ಮತ್ತೊಬ್ಬ ಮನುಷ್ಯನ ಬಳಿಗೆ ತರುವ ಪ್ರಯತ್ನವಾಗಬೇಕು. ಇದೇ ನಿಜವಾದ ಪ್ರಜಾಪ್ರಭುತ್ವದ ಮಾನದಂಡ ಎಂದರು.

ಸಮಾಜದಲ್ಲಿ ಇವತ್ತು ಕೆಳಜಾತಿಯ ಜನರಲ್ಲಿ ಬೆಳೆಯುತ್ತಿರುವ ಜಾಗೃತಿಯೊಂದಿಗೆ ಮೇಲ್ವರ್ಗದ ಜನರಲ್ಲಿ ಪಾಪ ಪ್ರಜ್ಞೆಯೂ ಬೆಳೆಯಬೇಕೆಂದು ವಿಶ್ಲೇಷಿಸಿದ ಅವರು ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರಿಗೆ ಕಾಡಿದ ಪಾಪಪ್ರಜ್ಞೆಯೇ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟಕ್ಕೆ ಅವರಿಗೆ ಪ್ರೇರಣೆ ನೀಡಿತು. ಇದರಿಂದಾಗಿ ಸಮಾಜ, ಭಾಷೆ, ಸಾಹಿತ್ಯ ಕ್ಷೇತ್ರಕ್ಕೂ ಒಳ್ಳೆಯದಾಯಿತು ಎಂದರು.

ಶತಶತಮಾನಗಳಿಂದಲೂ ಕೆಳವರ್ಗದವರ ಸೃಜನಶೀಲತೆಗೆ ಅಡ್ಡಿಯಾಗಿರುವ ಜಾತಿಯತೆ ಮತ್ತು ಅಸ್ಪೃಶ್ಯತೆ ವಿರುದ್ಧ ಪ್ರಬಲ ಹೋರಾಟ ನೆಡೆಸಲು ಸಾಮಾಜಿಕ ಮತ್ತು ರಾಜಕೀಯ ಸಂಕಲ್ಪದ ಅಗತ್ಯವಿದ್ದು, ಆ ನಿಟ್ಟಿನಲ್ಲಿ ಎಲ್ಲಾ ಪ್ರಗತಿಪರರು ಚಿಂತನೆ ನಡೆಸಿ ಕಾರ್ಯೋನ್ಮುಖರಾಗುವ ಅನಿವಾರ್ಯತೆ ಈಗ ಎದುರಾಗಿದೆ ಎಂದರು.



"ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ಹಳ್ಳಿಗಳಿಂದ ಬೆಳೆದು ಬರಲಿ"

ಸುನೀತ್ ಚೋಪ್ರಾ

ಭಾರತದಲ್ಲಿ ಸ್ವಾತಂತ್ರ್ಯ ನಂತರದಲ್ಲೂ ಈ ಅನಿಷ್ಟ ಜಾತಿಪದ್ಧತಿ ಮುಂದುವರೆಯಲು, ಆಳುವ ವರ್ಗಗಳು, ಭೂಮಾಲಿಕ ಮತ್ತು ಪಾಳೇಗಾರಿ ವ್ಯವಸ್ಥೆಯೊಂದಿಗೆ ರಾಜಿಮಾಡಿಕೊಂಡಿದ್ದರಿಂದ, ಗ್ರಾಮೀಣ ಪ್ರದೇಶಗಳಲ್ಲಿ ಜಾತಿಬೇಧ ಮತ್ತು ಅಸ್ಪೃಶ್ಯತೆ ತೀವ್ರರೀತಿಯಲ್ಲಿದೆ.

ಭಾರತೀಯ ಸಮಾಜದಲ್ಲಿ ವಿಭಜನಾತ್ಮಕವಾಗಿ ಕೆಲಸ ಮಾಡುತ್ತಿರುವ ಈ ಜಾತಿವ್ಯವಸ್ಥೆ ವಾಸ್ತವವಾಗಿ ಶ್ರೀಮಂತ ವರ್ಗದ ಮೇಲೆ ಹೆಚ್ಚು ಪರಿಣಾಮ ಬೀರದೆ, ಬಹುಪಾಲು ಉತ್ಪಾದನಾ ಕೇಂದ್ರಗಳಾದ ಹಳ್ಳಿಗಳಲ್ಲಿ ಕೆಳವರ್ಗದ ಬಡಜನರ ಮೇಲೆ ನೇರ ಪರಿಣಾಮ ಬೀರುತ್ತಿದೆ. ಆದ್ದರಿಂದ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ಹಳ್ಳಿಗಳಿಂದ ಬೆಳೆದು ಬರಬೇಕಿದೆ ಎಂದು ಕೃಷಿಕೂಲಿಕಾರರ ಸಂಘದ ಅಖಿಲ ಭಾರತ ಸಹಕಾರ್ಯದರ್ಶಿ ಮತ್ತು ಹೆಸರಾಂತ ಕಲಾ ವಿಮರ್ಶಕರೂ ಆದ ಕಾಂ. ಸುನಿತ್ ಚೋಪ್ರಾ ಹೇಳಿದರು.

ವರ್ಣಾಶ್ರಮ ಧರ್ಮವನ್ನು, ಅಸ್ಪೃಶ್ಯತೆಯನ್ನು [illegible] ಭೂಮಾಲಿಕ ಮತ್ತು ... ಅನುಸಾರವಾಗಿ ಅವರವರ ಕಲ್ಪನೆಯಲ್ಲಿ ಪೋಷಿಸಿಕೊಂಡು ಬಂದಿವೆ. ಈ ವ್ಯವಸ್ಥೆಯ ಪ್ರಮುಖ ಸೂತ್ರದಾರನಾಗಿ ಬ್ರಾಹ್ಮಣಶಾಹಿ ಬೆಳೆದುಬಂದಿದೆ. ಬ್ರಿಟಿಷ್ ಆಡಳಿತದಲ್ಲಿ ಪಂಡಿತರನ್ನು ಬಳಸಿಕೊಂಡು ಇಂತಹ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಪ್ರಯತ್ನಿಸಲಾಯಿತು ಎಂದರು.

ಸಮಾಜದ ಪ್ರಗತಿಗೆ ಯಾವತ್ತೂ, ಯಾವುದೇ ರೀತಿಯ ಕೊಡುಗೆಯನ್ನು ನೀಡದ ಜಾತಿ, ಇದು ಪವಿತ್ರವಾದ ಅಂಶವೇನಲ್ಲ ಎಂದು ವಿಶ್ಲೇಷಿಸಿದ ಕಾಂ. ಚೋಪ್ರಾ ಮೇಲ್ವರ್ಗದವರು ಹಳ್ಳಿಗಳಲ್ಲಿ 'ಹಿಂಸೆ ಮತ್ತು ಭಯ'ವನ್ನು ತೋರಿಸುತ್ತಾ ಈ ಜಾತಿಯ ಆಧಾರದಲ್ಲಿ ಕೆಳವರ್ಗದವರನ್ನು ತುಳಿಯುತ್ತಾ ಬಂದಿದ್ದಾರೆ. ಬ್ರಹ್ಮನ ತಲೆಯಿಂದ ಬ್ರಾಹ್ಮಣ, ಭುಜದಿಂದ ಕ್ಷತ್ರಿಯ, ತೊಡೆಯಿಂದ ವೈಶ್ಯ, ಪಾದದಿಂದ ಶೂದ್ರ ಹುಟ್ಟಿದನೆಂದು ಹೇಳುವ ವರ್ಣ ವ್ಯವಸ್ಥೆ ಚಂಡಾಲ ಮಾತ್ರ ಎಲ್ಲೂ ಹುಟ್ಟಲಿಲ್ಲ ಎನ್ನುತ್ತದೆ. ಸಮಾಜದ ಆರ್ಥಿಕತೆಗೆ ಮತ್ತು ಅಭಿವೃದ್ಧಿ ಯಾವುದೇ ಕೊಡುಗೆ ನೀಡದ ಈ ಅಸ್ಪೃಶ್ಯತೆ ಮಾನವೀಯತೆಗೆ ವಿರುದ್ಧವಾಗಿದೆ ಎಂದರು.

ವ್ಯವಸ್ಥೆ ನಾಶಹೊಂದಬೇಕಿತ್ತು. ಆದರೆ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ವ್ಯವಸ್ಥೆ, ತನ್ನ ಆಡಳಿತದ ಅನುಕೂಲತೆಗಾಗಿ, ಹಿಂದು-ಮುಸ್ಲಿಂ-ವೈಯಕ್ತಿಕ ಕಾನೂನುಗಳನ್ನು ಜಾರಿಮಾಡಿ, ಪ್ರತಿ 10 ವರ್ಷಗಳಿಗೊಮ್ಮೆ ಹೊಸ ಜಾತಿಗಳನ್ನು ಸೃಷ್ಟಿಸಿ, ಜಾತಿ ಅಂತಃಕರಣಗಳನ್ನು ಕಾನೂನುಗಳನ್ನಾಗಿ ಪರಿವರ್ತಿಸಿದರು. ಮಾತ್ರವಲ್ಲ, ಪೋಲೀಸ್, ಸೈನ್ಯ, ಉನ್ನತ ಆಡಳಿತಗಳಲ್ಲಿ ಭೂಮಾಲಿಕರ ಹಿತಾಸಕ್ತಿ ರಕ್ಷಣೆಗಾಗಿ ಜಾತಿ ಸಂಕೀರ್ಣತೆಯನ್ನು ಮುಂದುವರಿಸಿಕೊಂಡು ಬಂದರು. ಈ ಕಾರಣದಿಂದಾಗಿ ಉತ್ಪಾದನಾ ಪ್ರಕ್ರಿಯೆಯಲ್ಲಿ ಜಾತಿ ಅಡ್ಡಿ ಬರದಿದ್ದರೂ ಆ ಉತ್ಪಾದನೆಗೊಂಡ ವಸ್ತು ಮಾರುಕಟ್ಟೆಗೆ ಬಂದಾಗ ಅಥವಾ ಕಲ್ಲಾಗಿದ್ದ ವಸ್ತು ವಿಗ್ರಹರೂಪ ಪಡೆದಾಗ ಜಾತಿ ಅಡ್ಡ ಬರುತ್ತದೆ. ಅದು ಮಾರುಕಟ್ಟೆ ವ್ಯವಸ್ಥೆಯನ್ನು ಸಹ ಸಂಕುಚಿತಗೊಳಿಸುತ್ತದೆ.

ವಿಪರ್ಯಾಸದ ಸಂಗತಿ ಎಂದರೆ ಉತ್ಪಾದನಾ ಸಂಬಂಧದಲ್ಲಿ ಯಾವುದೇ ಪಾತ್ರವಹಿಸದ ಮತ್ತು ಉತ್ಪಾದನಾ ಸಂಬಂಧಗಳಿಗೆ ಅಡ್ಡಿಯಾಗಿದ್ದರೂ ಈ

ಭಾರತದಲ್ಲಿ ರಾಷ್ಟ್ರೀಯ ಚಳುವಳಿ ಬೆಳೆದು ಇದನ್ನು ಬಡಿದು ಹಾಕಲು ಪ್ರಯತ್ನಿಸಿತು. ಸಾಮ್ರಾಜ್ಯಶಾಹಿ ಪೋಷಣೆಯೊಂದಿಗೆ ಬೆಳೆದ ಈ ಜಾತಿ ವ್ಯವಸ್ಥೆ ವಿರುದ್ಧ ತೀವ್ರ ಹೋರಾಟದ ಅಗತ್ಯವಿತ್ತು. ಈ ಹಿನ್ನೆಲೆಯೊಂದಿಗೆ ಮಹಾತ್ಮಗಾಂಧಿ, ಇ.ಎಂ.ಎಸ್., ಎ.ಕೆ.ಗೋಪಾಲನ್, ದೇವಸ್ಥಾನಗಳಿಗೆ ನುಗ್ಗುವ ಚಳುವಳಿಗಳನ್ನು ನಡೆಸಿದರು. ಇವತ್ತು ಆ ಹೋರಾಟ ಮುನ್ನಡೆಯಬೇಕಿದೆ.

ಸ್ವಾತಂತ್ರ್ಯ ನಂತರದಲ್ಲಿ ಅಧಿಕಾರಕ್ಕೆ ಬಂದ ಆಳುವ ವರ್ಗಗಳು ಈ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡಿದ್ದರಿಂದ, ಭೂ ಸುಧಾರಣೆಗಾಗಿ ಮತ್ತು ಜಾತಿ ವ್ಯವಸ್ಥೆ ವಿರುದ್ಧ ಹೋರಾಟ ನಡೆಸದ ಕಾರಣ ಈ ಅಮಾನವೀಯ ಪದ್ಧತಿ ಜೀವಂತವಾಗಿದೆ.

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವ ಕುಂದಾಪುರ

ಧಾರಾವಾಹಿ: 23

ಕಳೆದ ಸಂಚಿಕೆಯಲ್ಲಿ ಜ್ಯೋತಿಬಸುರವರು ಪ್ರತಿಪಕ್ಷದ ಪ್ರತಿನಿಧಿಯಾಗಿ ಆಯ್ಕೆಗೊಂಡು ಸನದಲ್ಲಿ ಸರಕಾರವನ್ನು ನಡುಗಿಸಿದ್ದನ್ನು ಓದಿರುವಿರಿ. ಈ ಸಂಚಿಕೆಯಲ್ಲಿ ಮಂತ್ರಿಗಳು, ಶಾಸಕರು, ಅಧಿಕಾರಿಗಳ ವೇತನ ಹೆಚ್ಚಳ ಮಸೂದೆ ಹಾಗೂ 1952 ರ ಕರಾಳ ಮಸೂದೆಯಾದ ಟ್ರಿಬ್ಯೂನಲ್ ಆಫ್ ಕ್ರಿಮಿನಲ್ಸ್ ಜ್ಯೂರಿಸ್ಡಿಕ್ಷನ್‌ಗೆ ವಿರೋಧ ರೂಪಿಸಿದ್ದರ ಬಗ್ಗೆ ಓದಿ.........

ಆಂದೋಲನಗಳಿಗೆ ನವಚೇತನ

1952 ರ ನಂತರ ಸಾಮೂಹಿಕ ಸಂಘಟನೆಗಳು ಮತ್ತು ಚಳುವಳಿಗೆ ಹೊಸ ಜೀವ ಬಂತು. ಕಾಂಗ್ರೆಸ್ ಸರಕಾರದ ದಬ್ಬಾಳಿಕೆಯಿಂದಾಗಿ ಈ ಸಂಘಟನೆಗಳು ಸ್ವಲ್ಪ ಮಟ್ಟಿಗೆ ನಿಸ್ತೇಜಗೊಂಡಿದ್ದವು. ಆದರೆ 1952 ರ ಸಾರ್ವತ್ರಿಕ ಚುನಾವಣೆಗಳ ನಂತರ ಅವು ಪುನಃ ತುಂಬಾ ಸಕ್ರಿಯಗೊಂಡವು. 1952 ಮತ್ತು 53 ರಲ್ಲಿ ಎಡ ಸಂಘಟನೆಗಳು ಅನೇಕ ಸಾಮೂಹಿಕ ಆಂದೋಲನಗಳನ್ನು ನಡೆಸಿದವು. ವಿಧಾನಸಭೆಯ ಸುತ್ತಮುತ್ತ ಮೆರವಣಿಗೆ ಮತ್ತು ರ್‍ಯಾಲಿಗಳು ಮಾಮೂಲಿ ನೋಟವಾಗಿತ್ತು.

ಆಹಾರ ಬಿಕ್ಕಟ್ಟು ಪ್ರತಿಭಟಿಸಿ ಹಾಗೂ ನಿರುದ್ಯೋಗ ಭತ್ಯೆಗಾಗಿ ಒತ್ತಾಯಿಸಿ ಸುಮಾರು 25 ಸಾವಿರ ಜನರು 1955 ಮಾರ್ಚ್ 13 ರಂದು ಅಸೆಂಬ್ಲಿ ಮುಂದೆ ಜಮಾಯಿಸಿದರು. ನಾನು ಸ್ಪೀಕರರನ್ನು ಉದ್ದೇಶಿಸಿ ಮಾತನಾಡಿ ಮುಖ್ಯಮಂತ್ರಿ ಪ್ರದರ್ಶನಕಾರರನ್ನು ಭೇಟಿ ಮಾಡಬೇಕು ಎಂದು ಹೇಳಿದೆ ಡಾ. ರಾಯ್ ನಿರಾಕರಿಸಿದರು. ನಾವು ಸಭಾತ್ಯಾಗ ಮಾಡಿದೆವು. ಅದೇ ಮಾರ್ಚ್ 21 ರಂದು ಬಂಗಾಳ ಪ್ರಾಂತೀಯ ಟ್ರೇಡ್‌ಯೂನಿಯನ್ ಕಾಂಗ್ರೆಸ್‌ನ (ಬಿಪಿಟಿಯುಸಿ) ಐತಿಹಾಸಿಕ ಸಮ್ಮೇಳನ ಆರಂಭವಾಯಿತು. ಹಿಂದಿನ ಸಮ್ಮೇಳನ 1947 ರಲ್ಲಿ ನಡೆದಿತ್ತು. ಕಾಂಗ್ರೆಸ್ ಸರಕಾರದ ಭಯೋತ್ಪಾದನೆ ತಂತ್ರದ ವಿರುದ್ಧ ಇಡೀ ಸಮ್ಮೇಳನ ಗಮನವನ್ನು ಕೇಂದ್ರೀಕರಿಸಿತು. ಬಿಪಿಟಿಯುಸಿ ಅಧ್ಯಕ್ಷ ಸತ್ಯಪ್ರಿಯ ಬ್ಯಾನರ್ಜಿ ಸಮ್ಮೇಳನವನ್ನು ನಿರ್ವಹಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ನಾನು ಕಾರ್ಯದರ್ಶಿ ವರದಿಯನ್ನು ಸಮ್ಮೇಳನದಲ್ಲಿ ಮಂಡಿಸಿದೆ ಎಂಬುದನ್ನು 'ಸ್ವಾಧೀನತಾ' ದ 1953 ಮಾರ್ಚ್ 22 ರ ಸಂಚಿಕೆ ನನಗೆ ನೆನಪಿಸುತ್ತದೆ. ದುರದೃಷ್ಟವಶಾತ್ ನಾನು ಆ ಹುದ್ದೆಗೆ ಆಯ್ಕೆಯಾದ ನಿರ್ದಿಷ್ಟ ದಿನ ನನಗೆ ನೆನಪಿಲ್ಲ. 1947 ರ ಸಮ್ಮೇಳನದ ನಂತರ, ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಮತ್ತು ನಂತರ ಕಾಂಗ್ರೆಸ್ ಆಡಳಿತಗಾರರ ನಾನಾ ಸಮಯಸಾಧಕತನ ಹಾಗೂ ಅಪಪ್ರಚಾರ ತಂತ್ರಗಳಿಂದಾಗಿ ಟ್ರೇಡ್ ಯೂನಿಯನ್ ಚಳುವಳಿ ತಾತ್ಕಾಲಿಕವಾಗಿ ದುರ್ಬಲಗೊಂಡಿತ್ತು ಎನ್ನುವುದನ್ನು ಅದೇ ವರದಿಯಿಂದ ನಾನು ಗಮನಿಸಿದೆ.

ಹೊಸ ಜಾಗೃತಿ

ಕಾರ್ಮಿಕ ವರ್ಗದಲ್ಲಿ ಹೊಸ ಜಾಗೃತಿ ಕಂಡು ಬರುತ್ತಿರುವುದನ್ನು ಕಾರ್ಯದರ್ಶಿ ವರದಿಯಲ್ಲಿ ಗಮನಿಸಲಾಗಿತ್ತು. ಹೆಚ್ಚಿನ ಒಗ್ಗಟ್ಟಿಗಾಗಿ ಕರೆ ನೀಡಲಾಗಿತ್ತು ಹಾಗೂ ರಿಟ್ರೆಂಚ್‌ಮೆಂಟ್ ಮತ್ತು ನಿರುದ್ಯೋಗದಂಥ ವಿಚಾರಗಳಲ್ಲಿ ಇತರ ಟ್ರೇಡ್ ಯೂನಿಯನ್‌ಗಳನ್ನು ಬಿಪಿಟಿಯುಸಿ ಯಶಸ್ವಿಯಾಗಿ ತನ್ನ ಜತೆ ಹೋರಾಟದಲ್ಲಿ ತೊಡಗಿಸಿಕೊಳ್ಳುತ್ತಿತ್ತು. ಒಂದೇ ಏಕೀಕೃತ ಸಂಘವನ್ನು ರಚಿಸುವ ದಿಸೆಯಲ್ಲಿ ನೇತೃತ್ವ ವಹಿಸಲು ತಾನು ಸಿದ್ಧ ಮತ್ತು ಹೆಚ್ಚಿನ್ನು ಹೋರಾಟಕ್ಕಿದು ಸಕಾಲ ಎಂದು ಬಿಪಿಟಿಯುಸಿ ಸ್ಪಷ್ಟಪಡಿಸಿತ್ತು.

ಯುಟಿಯುಸಿ ಅಧ್ಯಕ್ಷ ಮೃಣಾಲ್ ಕಾಂತಿ ಬೋಸ್ ಸಮ್ಮೇಳನಕ್ಕೆ ಅಭಿನಂದನೆ ಸಂದೇಶ ಕಳಿಸಿದ್ದರು. ಸತ್ಯಪ್ರಿಯ ಬ್ಯಾನರ್ಜಿ ಅಧ್ಯಕ್ಷರಾಗಿ ಪುನರಾಯ್ಕೆಗೊಂಡರು. ನಾನು ಪ್ರಧಾನ ಕಾರ್ಯದರ್ಶಿ ಆದೆ. ಬಿಪಿಟಿಯುಸಿ ಯ 523 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. 125 ಸಂಘಗಳು ಬಿಪಿಟಿಯುಸಿ ಗೆ ಸಂಯೋಜಿತವಾಗಿದ್ದವು. ಸದಸ್ಯರ ಸಂಖ್ಯೆ 1,55,178 ಆಗಿತ್ತು. ಮಾರ್ಚ್ 29 ರಂದು ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಯಿತು.

1953 ರಲ್ಲಿ ಬಜೆಟ್ ಅಧಿವೇಶನ ಮುಗಿದ ಐದು ತಿಂಗಳ ನಂತರ ವಿಧಾನಸಭೆಯ ಚಳಿಗಾಲದ ಅಧಿವೇಶನ ಆರಂಭವಾಯಿತು. ಮೊದಲ ದಿನವೇ ಫಾರ್ವರ್ಡ್ ಬ್ಲಾಕ್ ಮತ್ತು ನಮ್ಮ ಪಕ್ಷ ಐದು ನಿಲುವಳಿ ಗೊತ್ತುವಳಿಗಳನ್ನು ಪ್ರಸ್ತಾಪಿಸಿದೆವು. ಆದರೆ ಅವೆಲ್ಲವನ್ನು ತಿರಸ್ಕರಿಸಲಾಯಿತು. ಟ್ರಾಮ್ ಪ್ರಯಾಣದರ ಏರಿಕೆ, ಆಹಾರ ಬಿಕ್ಕಟ್ಟು, ಬೋನಸ್ ಹೋರಾಟ ಮತ್ತು ಚಳುವಳಿಯನ್ನು ದಮನಿಸುವಲ್ಲಿ ಸರಕಾರದ ಪಾತ್ರ ಕುರಿತಂತೆ ಒಂದು ನಿಲುವಳಿ ಗೊತ್ತುವಳಿ ಮಂಡಿಸಲು ನಾನು ಯತ್ನಿಸಿದೆ.

ಸರಕಾರದ ಅಸಮರ್ಪಕ ಪಡಿತರ ಪದ್ಧತಿಯತ್ತ ಗಮನಸೆಳೆಯುವುದು ಗಣೇಶ್ ಘೋಷ್ ಮಂಡಿಸಿದ ಗೊತ್ತುವಳಿಯ ಉದ್ದೇಶವಾಗಿತ್ತು. ಸೆಣಬು ಕಾರ್ಮಿಕರಿಗೆ ಬೋನಸ್ ನೀಡುವ ವಿಷಯಕ್ಕೆ ಸಂಬಂಧಿಸಿ ಬಿನಯ್ ಚೌಧರಿ ನೋಟಿಸ್ ನೀಡಿದರು. ದೇವವ್ರತ್ ಕೊಲೆಗಳು ಮತ್ತು ಅಲ್ಲಿನ ಆಹಾರ ಬಿಕ್ಕಟ್ಟು ಕುರಿತು ಚರ್ಚೆಯಾಗಬೇಕೆಂದು ಫಾರ್ವರ್ಡ್ ಬ್ಲಾಕ್‌ನ ಹೇಮಂತ ಬೋಸ್ ಬಯಸಿದರು. ಆಹಾರ ಬಿಕ್ಕಟ್ಟಿನ ಬಗ್ಗೆ ಮಣಿಕುಂತಲ ಸೆನ್ ಕೂಡ ಸೆಪ್ಟೆಂಬರ್ 29 ರಂದು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದರು.

ನಾನು ತಂದೆಯಾದೆ..

1952 ಸೆಪ್ಟೆಂಬರ್‌ನಲ್ಲಿ ನಾನು ಒಂದು ಗಂಡು ಮಗುವಿನ ತಂದೆಯಾದೆ. ಮಗುವಿಗೆ ಚಂದನ ಎಂದು ಹೆಸರಿಟ್ಟೆವು. ನನ್ನ ಪತ್ನಿ ಕಮಲ್ ಬಸು ನಾನು ಜೈಲಿನಲ್ಲಿದ್ದಾಗ ಅಥವಾ ಭೂಗತನಾಗಿದ್ದಾಗ ಹೆಚ್ಚಿನ ವೇಳೆ ತನ್ನ ತಾಯಿಯ ಮನೆಯಲ್ಲಿ ಇರುತ್ತಿದ್ದರು. ನನ್ನ ಮಾವ ಬೀರೇನ್ ಬೋಸ್ ಬ್ರಿಟಿಷ್ ಆಡಳಿತದಲ್ಲಿ ಬಂಗಾಳ ಸಿವಿಲ್ ಸರ್ವಿಸ್‌ನಲ್ಲಿ ಒಬ್ಬ ಅಧಿಕಾರಿ ಆಗಿದ್ದರು. ಚಂದನ್ ಹುಟ್ಟುವ ವೇಳೆ ಅವರು ನಿವೃತ್ತರಾಗಿದ್ದರು. ಅವರು ಯಾವುದೇ ಪಕ್ಷ ರಾಜಕಾರಣದಲ್ಲಿ ಇರಲಿಲ್ಲ, ಆದರೆ ಅವರೊಬ್ಬ ಅಪೂರ್ವ ಮಾನವತಾವಾದಿಯಾಗಿದ್ದರು. ಆ ಬಗ್ಗೆ ಅನೇಕ ಉದಾಹರಣೆಗಳು ನನಗೆ ನೆನಪಿವೆ.

ಮಂತ್ರಿಗಳ ಸಂಬಳ - ಸಾರಿಗೆ ಏರಿಸಲು ಪ್ರಬಲ ವಿರೋಧ

1952 ರ ಚುನಾವಣೆಗಳ ನಂತರ ಜೂನ್ 21 ರಂದು ಆರಂಭವಾದ ವಿಧಾನಸಭೆಯ ಪ್ರಥಮ ಅಧಿವೇಶನದಲ್ಲಿ ಕಾಂಗ್ರೆಸ್ ಸರಕಾರ ಪಶ್ಚಿಮ ಬಂಗಾಲ ವೇತನ ಮತ್ತು ಸಂಬಳ ಮಸೂದೆ 1952 ಅನ್ನು ಮಂಡಿಸಿತು. ಶಾಸಕರು ಅಥವಾ ಸರಕಾರಿ ಅಧಿಕಾರಿಗಳ ವೇತನವನ್ನು ಹೆಚ್ಚಿಸದಿರುವುದು ಮಸೂದೆಯ ಉದ್ದೇಶವಾಗಿತ್ತು. ಆದರೆ ಕ್ಯಾಬಿನೆಟ್ ಸಚಿವರು, ರಾಜ್ಯ ಸಚಿವರು, ಉಪಸಚಿವರು ಮತ್ತು ಸ್ವತಃ ಮುಖ್ಯಮಂತ್ರಿಯವರ ವೇತನ ಅದರ ವ್ಯಾಪ್ತಿಗೆ ಬರುತ್ತಿರಲಿಲ್ಲ!

ಈ ಮಸೂದೆಯ ವಿರುದ್ಧ ಪ್ರತಿಪಕ್ಷ ಸಿಡಿದೆದ್ದಿತು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆಹಾರ ಬಿಕ್ಕಟ್ಟು ಪರಾಕಾಷ್ಠೆಗೆ ಏರಿರುವಾಗ, ಮಕ್ಕಳಿಗೆ ಹಾಲು ಇಲ್ಲದಿರುವಾಗ ಮತ್ತು ಹಸಿವಿನಿಂದ ಜನರು ಬೀದಿ ಬೀದಿಗಳಲ್ಲಿ ಸಾಯುತ್ತಿರುವಾಗ ಮಂತ್ರಿಗಳ ಸಂಬಳ ಏರಿಸಿದ್ದು ತೀರಾ ಅಸಮರ್ಥನೀಯವಾಗಿತ್ತು. ಈ ಕ್ರಮ ತೀರಾ ಖಂಡನಾರ್ಹವಾಗಿತ್ತು.

ಡಾ. ರಾಯ್ ಮಂಡಿಸಿದ ಮಸೂದೆ ಸ್ವತಃ ಅವರ, ಅಂದರೆ ಮುಖ್ಯಮಂತ್ರಿಯವರ ಸಂಬಳವನ್ನು ಆಗಿನ ಮಾಸಿಕ 1250 ರೂಪಾಯಿಯಿಂದ 2400 ಕ್ಕೆ ಏರಿಸಲು ಆದೇಶಿಸಿತ್ತು. ಜತೆಗೆ ಅವರ ಮನೆ ಬಾಡಿಗೆ ಮತ್ತು ಇತರ ಭತ್ಯೆಗಳ ಮೊತ್ತ 2650 ರೂಪಾಯಿ ಆಗಿತ್ತು. ಅಷ್ಟು ಮಾತ್ರವಲ್ಲದೆ ಎರಡನೇ ಅಧಿಕೃತ ನಿವಾಸವನ್ನು ಹೊಂದಲು ಮುಖ್ಯಮಂತ್ರಿಗೆ ಅವಕಾಶವಿತ್ತು. ಅದಕ್ಕಾಗಿ ಸಾರ್ವಜನಿಕ ಬೊಕ್ಕಸದಿಂದ ಪ್ರತಿತಿಂಗಳು 250 ರೂಪಾಯಿ ಖರ್ಚು. ಒಟ್ಟಿನಲ್ಲಿ ಮುಖ್ಯಮಂತ್ರಿಯವರ ವೇತನವನ್ನು ಎರಡು ಪಟ್ಟಿಗಿಂತಲೂ ಹೆಚ್ಚು ಮಾಡುವ ಕ್ರಮವಾಗಿತ್ತು!

ಮಸೂದೆ ಮಂಡನೆಗೆ ಮುಂಚೆ ಒಬ್ಬ ರಾಜ್ಯದ ಕ್ಯಾಬಿನೆಟ್ ಸಚಿವರ ವೇತನ ತಿಂಗಳಿಗೆ 1200 ರೂಪಾಯಿ. ಹೊಸ ಮಸೂದೆ ನಂತರ ಅದು 2100 ಕ್ಕೆ ಏರಿತು. ಅದೇ ಪ್ರಮಾಣದಲ್ಲಿ ರಾಜ್ಯದ ಸ್ಟೇಟ್ ಸಚಿವರು, ಉಪಸಚಿವರು ಮತ್ತು ಸಂಸದೀಯ ಕಾರ್ಯದರ್ಶಿಗಳ ಸಂಬಳವನ್ನು ಏರಿಸಲಾಯಿತು. ಜಾರುಚಂದ್ರ ಭಂಡಾರಿ ಈ ಮಸೂದೆಯನ್ನು ವಿರೋಧಿಸಿದರು. ಈ ವಿಚಾರದಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯಬೇಕು ಎಂದು ಹೇಳಿದರು.

ಮಸೂದೆ ಮೇಲೆ ಸದನದಲ್ಲಿ ಚರ್ಚೆ ನಡೆಯುತ್ತಿರುವಾಗಲೇ ವಿಧಾನಸಭೆಯ ಬಳಿ ಬೃಹತ್ ಮೆರವಣಿಗೆಯೊಂದು ಆಗಮಿಸಿರುವ ಸುದ್ದಿ ತಲುಪಿತು. 'ನಮಗೆ ಆಹಾರ, ವಸತಿ ಮತ್ತು ಬಟ್ಟೆ ಬೇಕು; ನಮಗೆ ಗೌರವಯುತ ಜೀವನ ಬೇಕು' ಎಂಬ ಘೋಷಣೆ ಒಳಗಿದ್ದ ನಮಗೂ ಕೇಳಿಸುತ್ತಿತ್ತು.

ಈ ವಿಷಯದ ಬಗ್ಗೆ ನಾನು ಸ್ಪೀಕರ್ ಗಮನಸೆಳೆದು ಮೆರವಣಿಗೆಕಾರರು ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಬಯಸಿದ್ದಾರೆ ಎಂದು ಹೇಳಿದೆ. ಪ್ರತಿಭಟನಾಕಾರರನ್ನು ಭೇಟಿ ಮಾಡುವುದು ಮುಖ್ಯಮಂತ್ರಿಯ ಕರ್ತವ್ಯ ಎಂದೂ ಹೇಳಿದೆ. ಆದರೆ ಡಾ. ರಾಯ್ ತಮ್ಮ ಮಾಮೂಲಿ ಗುಣಕ್ಕೆ ಅನುಗುಣವಾಗಿ ಜನರನ್ನು ಎದುರುಗೊಳ್ಳಲು ನಿರಾಕರಿಸಿದರು, ಆದರೆ ಜನರ ನಿಯೋಗದ ಜತೆ ಮಾತುಕತೆ ನಡೆಸಲು ಒಪ್ಪಿಕೊಂಡರು.

ಇತರ ಪ್ರತಿಪಕ್ಷಗಳ ಕೆಲವು ಸದಸ್ಯರ ಜತೆ ಸೇರಿ ನಾನು ಪ್ರತಿಭಟನಕಾರರನ್ನು ಭೇಟಿ ಮಾಡಿ ನಮ್ಮ ನಿಲುವನ್ನು ವಿವರಿಸಿದೆ. ಅವರು ನಿಧಾನವಾಗಿ-ಶಾಂತಿಯುತವಾಗಿ ಚದುರಿದರು.

ಪ್ರತಿಪಕ್ಷಗಳ ಸದಸ್ಯರು ಸಂಸದೀಯ ಕ್ರಮಗಳ ಮೂಲಕ ಮಸೂದೆಯನ್ನು ತಡೆಯಲು ಪ್ರಯತ್ನಿಸಿದರು. ಲೆಕ್ಕವಿಲ್ಲದಷ್ಟು ತಿದ್ದುಪಡಿಗಳನ್ನು ಮಂಡಿಸಲಾಯಿತು, ಪ್ರತಿಯೊಂದರ ಮೇಲೆ ಮತದಾನ ನಡೆಸಲಾಯಿತು. ಅಧಿವೇಶನದ ಆರಂಭದ ದಿನವೇ ಮಸೂದೆ ಅಂಗೀಕಾರವಾಗುತ್ತದೆ ಎಂದು ಸರಕಾರ ಭಾವಿಸಿತ್ತು. ಆದರೆ ಹಾಗಾಗಲಿಲ್ಲ. ಜೂನ್ 27 ರಂದು 139-75 ಮತಗಳಿಂದ ಅದು ಅಂಗೀಕಾರವಾಯಿತು.

ಕರಾಳ ಮಸೂದೆ

ಕಾನೂನು ಸಚಿವ ಎಸ್.ಕೆ.ಬೋಸ್ ಜುಲೈ ಒಂದರಂದು ಒಂದು ಕರಾಳ ಮಸೂದೆಯನ್ನು ಮಂಡಿಸಿದರು. ಟ್ರಿಬ್ಯುನಲ್ಸ್ ಆಫ್ ಕ್ರಿಮಿನಲ್ ಜ್ಯುರಿಸ್ಡಿಕ್ಷನ್ ಬಿಲ್ 1952 - ಇದು ಮಸೂದೆಯ ಹೆಸರು. 1950 ರಿಂದ ರಾಜ್ಯದಲ್ಲಿ ಹಿಂಸೆ ಅನೇಕ ಪಟ್ಟು ಹೆಚ್ಚಿದೆ ಮತ್ತು ಸ್ಥಳೀಯ ಶಾಂತಿ ಹದಗೆಡುತ್ತಿದೆ. ಹೀಗಾಗಿ ಶೀಘ್ರ ನ್ಯಾಯ ಒದಗಿಸುವ ಉದ್ದೇಶದಿಂದ ಈ ಟ್ರಿಬ್ಯುನಲ್‌ನ ಅಗತ್ಯವಿದೆ ಎಂದು ಮಸೂದೆಯನ್ನು ಮಂಡಿಸಿದ ಬೋಸ್ ಹೇಳಿದರು.

ಈ ಮಸೂದೆ ತೀರಾ ಅಪಾಯಕಾರಿ ಎಂದು ನಾವು ಅಭಿಪ್ರಾಯಪಟ್ಟೆವು. ರೈತರು ಮತ್ತು ಮಧ್ಯಮವರ್ಗದ ಮಧ್ಯದಲ್ಲಿ ಬಲು ವೇಗವಾಗಿ ಪ್ರಭಾವ ಹರಡುತ್ತಿರುವ, ಬೆಳೆಯುತ್ತಿರುವ ಕಾರ್ಮಿಕ ಚಳುವಳಿಯನ್ನು ದಮನಿಸುವುದು ಅದರ ಉದ್ದೇಶ ಎನ್ನುವುದು ಸ್ಪಷ್ಟವಾಗಿತ್ತು. ಎಲ್ಲಾ ಶಕ್ತಿಯನ್ನು ಒಗ್ಗೂಡಿಸಿ ಅದರ ವಿರುದ್ಧ ಹೋರಾಡಲು ಪ್ರತಿಪಕ್ಷ ನಾಯಕತ್ವ ನಿರ್ಧರಿಸಿತು.

ತನಗಿರುವ ಬಹುಮತದ ಬಲದಿಂದ ಮಸೂದೆಯನ್ನು ಪಾಸ್ ಮಾಡಲು ಕಾಂಗ್ರೆಸ್ ಸಮರ್ಥವಾಗುತ್ತದೆ ಎಂದು ನಮಗೆ ಗೊತ್ತಿತ್ತು. ಆದರೆ ಅದರ ಅಂಗೀಕಾರವೇ ಅಂತಿಮವಾದುದಲ್ಲ, ಅದರ ಅಂಗೀಕಾರ ವಿಳಂಬಗೊಳಿಸಬೇಕೆನ್ನುವುದು ಹಾಗೂ ಮಸೂದೆಯ ಎಲ್ಲ ಪರಿಚ್ಛೇದಗಳಿಗೆ ತಿದ್ದುಪಡಿ ಮಂಡಿಸಿ ಪ್ರತಿಯೊಂದರ ಮೇಲೆ ಮತದಾನ ಆಗುವಂತೆ ಮಾಡಬೇಕೆನ್ನುವುದು ನಮ್ಮ ಬಯಕೆಯಾಗಿತ್ತು.

"ಡಕಾಯಿತರು ಮತ್ತು ಕೊಲೆಗಾರರ ವಿರುದ್ಧ

ರೈತರು, ಕಾರ್ಮಿಕರು ಮತ್ತು ಮಧ್ಯಮವರ್ಗದ ವಿರುದ್ಧ ಬಳಸುವುದು ಅದರ ಉದ್ದೇಶ ಎಂದು ನಮಗೆ ಗೊತ್ತು. ಸೂಕ್ತ ವಿಚಾರಣೆ ಅಥವಾ ನ್ಯಾಯವಿಲ್ಲದೆ ಅವರನ್ನು ಸೆರೆಮನೆಗೆ ತಳ್ಳಲಾಗುತ್ತದೆ. ಒಂದು ಭ್ರಷ್ಟ, ಸರ್ವಾಧಿಕಾರಿ ಮತ್ತು ಅಧಿಕಾರಶಾಹಿ ಸರಕಾರವಷ್ಟೆ ಇಂಥ ಒಂದು ಮಸೂದೆಯನ್ನು ಮಂಡಿಸುತ್ತದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ನಾವು ಪ್ರತಿಪಕ್ಷದವರು ಮಸೂದೆ ಮೇಲಿನ ಮತದಾನದಲ್ಲಿ ಪಾಲ್ಗೊಳ್ಳುವುದಿಲ್ಲ. ಯಾಕೆಂದರೆ ಹಾಗೆ ಮಾಡುವುದರಿಂದ ಅರಣ್ಯ ನಿಯಮಗಳನ್ನು ಕಾನೂನುಬದ್ಧಗೊಳಿಸಿದಂತೆ ಹಾಗೂ ಅಂಗೀಕರಿಸಿದಂತೆ 'ಆಗುತ್ತದೆ' ಎಂದು ವಿಧಾನಸಭೆಯಲ್ಲಿ ನಾನು ಹೇಳಿದೆ.

1952 ಜುಲೈ 10 ರಂದು 138-64 ಮತಗಳ ಅಂತರದಿಂದ ಈ ಕರಾಳ ಕಾನೂನು ಅಂಗೀಕೃತವಾಯಿತು. ಅಂತಿಮ ಮತದಾನ ನಡೆಯುವ ಮುನ್ನ ನಮ್ಮ ಪಕ್ಷ ಹಾಗೂ ಇಡೀ ಪ್ರತಿಪಕ್ಷದ ಪ್ರತಿನಿಧಿಯಾಗಿ ನಾನು ಮಾತನಾಡಿ ಈ ಕಾನೂನಿನ ವಿರುದ್ಧ ನಮ್ಮ ಚಳುವಳಿ ಮುಂದುವರಿಯುತ್ತದೆ ಎಂದು ಪ್ರಬಲವಾಗಿ ಹೇಳಿದೆ.

ಪ್ರತಿನಿತ್ಯವೂ ಪ್ರತಿಭಟನೆ

ವಿಧಾನಸಭೆಯ ಅಧಿವೇಶನ ನಡೆಯುತ್ತಿದ್ದ ವೇಳೆ ಬಹುತೇಕ ಪ್ರತಿದಿನ ಜನರು ಮೆರವಣಿಗೆಯಲ್ಲಿ ಬರುತ್ತಿದ್ದರು. ಆಹಾರ, ಉದ್ಯೋಗ, ನಿರಾಶ್ರಿತರು ಮತ್ತಿತರ ಅನೇಕ ತಕ್ಷಣದ ಬೇಡಿಕೆಗಳನ್ನು ಈಡೇರಿಸುವಂತೆ ಅವರು ಒತ್ತಾಯಿಸುತ್ತಿದ್ದರು. ಪ್ರತಿಪಕ್ಷದವರು ಪ್ರತಿಭಟನಾಕಾರರನ್ನು ಭೇಟಿಯಾಗಿ ಅವರ ಬೇಡಿಕೆಗಳನ್ನು ಸದನದಲ್ಲಿ ಎತ್ತುತ್ತಿದ್ದೆವು.

ಜನತೆಯ ಭಾರಿ ಪ್ರತಿರೋಧ ಆಂದೋಲನದಿಂದ ಆರ್ತತೆಗೊಂಡ ಕಾಂಗ್ರೆಸ್ ಸರಕಾರ ಪ್ರತಿದಿನ ಬೆಳಿಗ್ಗೆ ಅಸೆಂಬ್ಲಿ ಆವರಣದಲ್ಲಿ 144 ನೇ ಸೆಕ್ಷನ್ ಜಾರಿ ಮಾಡಿತು. ಮೆರವಣಿಗೆಗಾರರನ್ನು ಎಸ್ಪ್ಲನೇಡ್ ಈಸ್ಟ್‌ನಲ್ಲಿ ತಡೆಯಲಾಯಿತು. ಜನರನ್ನು ತಡೆದ ಸುದ್ದಿ ತಲುಪುತ್ತಿದ್ದಂತೆ ನಾವು ಧಾವಿಸಿ ಹೋಗಿ ಅವರ ಭೇಟಿ ಮಾಡುತ್ತಿದ್ದೆವು. ಪ್ರತಿದಿನವೂ ಹೀಗೆ ಆಗುತ್ತಿತ್ತು.

ವಿಧಾನಸಭೆಯ ಕಟ್ಟಡದ ಹೊರಗೆ ಸತತವಾಗಿ ರೂಪುಗೊಳ್ಳುತ್ತಿದ್ದ ಸಾಮೂಹಿಕ ಆಂದೋಲನದ ಜತೆ ನಮ್ಮ ಸಂಪರ್ಕ ಇಟ್ಟುಕೊಳ್ಳಲು ನಾವು ಸದಾ ಕಾತರರಾಗಿದ್ದೆವು. ವಿಚಾರಗಳನ್ನು ಜನತೆಯ ಬಳಿ ಒಯ್ಯುವುದು, ಅವರನ್ನು ನಮ್ಮ ಕೆಲಸದಲ್ಲಿ ತೊಡಗಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿತ್ತು. ಕಾಂಗ್ರೆಸ್ ಸರಕಾರದ ಅಸಮರ್ಥ ಕಾರ್ಯನಿರ್ವಹಣೆಯನ್ನು ಟೀಕಿಸುವುದು ಮತ್ತು ಅನ್ಯಾಯ ಕಂಡಾಗಲೆಲ್ಲ ಅದಕ್ಕೆ ಪ್ರತಿಭಟನೆಯ ಧ್ವನಿ ಎತ್ತುವುದೂ ನಮ್ಮ ಕರ್ತವ್ಯವಾಗಿತ್ತು. ನಾವು ಯಶಸ್ವಿಯಾದೆವು ಎಂದು ಹೇಳುವುದು ಅತಿಶಯೋಕ್ತಿ ಖಂಡಿತ ಅಲ್ಲವೇ ಅಲ್ಲ.

(ಮುಂದುವರಿಯುವುದು)

ಕಾರ್ಮಿಕ-ವಿರೋಧಿ ಸರಕಾರವನ್ನು ನಡುಗಿಸಿದ ಎರಡು ಮುಷ್ಕರಗಳು

ತಾವು ಅಧಿಕಾರಕ್ಕೆ ಬಂದಿರುವುದೇ ೇಶಿ-ವಿದೇಶಿ ಹಣದ ಥೈಲಿಗಳಿಗಾಗಿ, ಈ ಡ್ಡ ದೇಶ ಇರುವುದೇ ಅವರಿಗಾಗಿ, ಅವರ ಮಾರುಕಟ್ಟೆಗಾಗಿ ಎಂಬಂತೆ ಕಳೆದ ನೂರು ನಗಳಿಂದಲೂ ವರ್ತಿಸುತ್ತಿರುವ ಎರಡನೇ ಲೆವಾರಿನ ಸುಧಾರಣೆ ಆರಂಭಿಸಿಯೇ ಟ್ಟಿದ್ದೇವೆ ನೋಡಿ ಎಂದು ಹಾರಾಡುತ್ತಿರುವ, ಠಿಣ ಕ್ರಮಗಳಿಗೆ ಸಿದ್ಧರಾಗಿ ಎಂದು ದಿನ ಳಗಾದರೆ ಜನಸಾಮಾನ್ಯರನ್ನು ದರಿಸುತ್ತಿರುವ ಕೇಂದ್ರದ ಬಿಜೆಪಿ ನೇತೃತ್ವದ ರಕಾರವನ್ನು ಕೊನೆಗೂ ಕಾರ್ಮಿಕರು ಡುಗಿಸಲಾರಂಭಿಸಿದ್ದಾರೆ. ಬಂದರು ಾರ್ಮಿಕರ' ಐದು ದಿನಗಳ ದೇಶದ ತಾಸಕ್ತಿಗಳ ರಕ್ಷಣೆಗಾಗಿ ಹೋರಾಡದೆ ರ್ಮಿಕ ವರ್ಗ ಸನ್ನದ್ಧವಾಗುತ್ತಿರುವುದನ್ನು ದು ಸೂಚಿಸಿದೆ. ಮುಷ್ಕರ ಈ ಸರಕಾರವನ್ನು ಣಿಸಿದ್ದರೆ, ಉತ್ತರ ಪ್ರದೇಶದ ವಿದ್ಯುತ್ ರ್ಮಿಕರ ಹನ್ನೊಂದು ದಿನಗಳ ಮುಷ್ಕರ ಜೆಪಿಗೆ ದೇಶವೆಂದರೆ ಮಾಲಕರು, ಂಡವಾಳಶಾಹಿಗಳು ಮಾತ್ರವೇ, ಅಷ್ಟೇ ಅಲ್ಲ, ವರಿಗಾಗಿ ಈ ಪಕ್ಷ ಸಾಮ್ರಾಜ್ಯಶಾಹಿಗಳ ಜೆಂಟರಂತೆ ವರ್ತಿಸಲೂ ಸಿದ್ಧ ಎಂಬುದನ್ನು ಂಪೂರ್ಣ ಬಯಲಿಗೆಳೆದಿದೆ.

ಣಿದ ಕೇಂದ್ರ ಸರ್ಕಾರ

ಹಿಂದಿನ ಸಂಚಿಕೆಯಲ್ಲಿಯೇ ಗಮನಿಸಿದಂತೆ ಂದರು ಕಾರ್ಮಿಕರ ಮುಷ್ಕರವನ್ನು ಮುರಿಯಲು ಜಪೇಯಿ ಸರಕಾರ ಎಂತಹ ಹೀನ ಮಟ್ಟ ಳಿಯಲೂ ಹೇಸಲಿಲ್ಲ. ದೇಶದ ಗಡಿಗಳ, ಕಡಲ ಡಿಗಳ ರಕ್ಷಣೆಗಾಗಿ ಇರುವ ಸೇವಾ ತುಕಡಿಗಳನ್ನು ಮ್ಮದೇ ದೇಶಬಾಂಧವರ ನ್ಯಾಯಬದ್ಧ ೋರಾಟವನ್ನು ಮುರಿಯಲು ದುರುಪಯೋಗ ಡಿಸಿಕೊಳ್ಳಲೂ ಅದು ಹಿಂಜರಿಯಲಿಲ್ಲ. ಆದರೆ ೇಶಾದ್ಯಂತ ಹನ್ನೊಂದು ಪ್ರಮುಖ ಬಂದರುಗಳಲ್ಲಿ ಡಿಯುತ್ತಿರುವ ಒಂದು ಲಕ್ಷದಷ್ಟು ಬಂದರು ರ್ಮಿರು ಹೆದರಲಿಲ್ಲ. ತಮ್ಮ ಅನಿರ್ದಿಷ್ಟ ಕಾಲದ ುಷ್ಕರವನ್ನು ದೃಢತೆಯಿಂದ, ಒಗ್ಗಟ್ಟಿನಿಂದ ುಂದುವರೆಸಿದರು. ಕೊನೆಗೂ ಕೇಂದ್ರ ಸರಕಾರ ಣಿಯಲೇ ಬೇಕಾಗಿ ಬಂತು. ಬಂಡವಾಳಶಾಹಿ ಳನ್ನು ತೃಪ್ತಿ ಪಡಿಸಲು ತುದಿಗಾಲ ಮೇಲೆ ಂತಿರುವ ಈ ಸರಕಾರ ಅದಕ್ಕೆ ಪ್ರತಿಯಾಗಿ ರ್ವಜನಿಕ ವಲಯದ ಕಾರ್ಮಿಕರು ಮಾತ್ರ ೇತನ ಪರಿಷ್ಕರಣೆಗೆ ಇದುವರೆಗಿನ ಐದು ರ್ಷಗಳ ಅವಧಿಯ ಬದಲು ಹತ್ತು ವರ್ಷ ಯುವಂತೆ ಮಾಡಬೇಕು ಎಂದು ಪಣ ೊಟ್ಟಂತಿತ್ತು. ಅದನ್ನೀಗ ಕೈಬಿಡಲೇಬೇಕಾಗಿ ಂದಿದೆ.

ಜನವರಿ 22 ರಂದು ಕೇಂದ್ರ ಸರಕಾರ ಐದು ರ್ಷಗಳ ಅವಧಿಯ ವೇತನ ಒಪ್ಪಂದ ಜನವರಿ 98 ರಿಂದಲೇ ಮನೆ ಬಾಡಿಗೆ ಹೆಚ್ಚಳ ಹಾಗು ತರ ಬೇಡಿಕೆಗಳನ್ನು ಅತ್ಯಂತ ಸಹಾನುಭೂತಿ ಂದ ಪರಿಶೀಲಿಸುವುದಾಗಿ ಲಿಖಿತ ಭರವಸೆ ನೀಡಿದ ಮೇಲೆಯೇ ಬಂದರು ಕಾರ್ಮಿಕರು ತಮ್ಮ ಮುಷ್ಕರವನ್ನು ನಿಲ್ಲಿಸಿದರು.

ಉತ್ತರ ಪ್ರದೇಶದಲ್ಲಿ

ಆದರೆ ಅತ್ತ ಉತ್ತರ ಪ್ರದೇಶದ ವಿದ್ಯುತ್ ಕಾರ್ಮಿಕರ ಮುಷ್ಕರ ನಿಲ್ಲಲಿಲ್ಲ. ಕಾರ್ಮಿಕ ಮುಖಂಡರನ್ನು ಜನವರಿ 22 ರ ರಾತ್ರಿ ಸರಕಾರ ರಾಷ್ಟ್ರೀಯ ಭದ್ರತಾ ಶಾಸನದಡಿ ಬಂಧಿಸಿತು. 120 ಇಂಜಿನಿಯರುಗಳನ್ನು ವಜಾ ಮಾಡಿತು. ಸುಮಾರು 6000 ಕಾರ್ಮಿಕರನ್ನು ಜೈಲಿಗೆ ತಳ್ಳಿತು. ವಜಾ ಮುಂದುವರಿಸಿ ಹೊಸಬರನ್ನು ನೇಮಿಸಿಕೊಳ್ಳುವುದಾಗಿ ಹೆದರಿಸಿತು. ಅಷ್ಟೇ ಅಲ್ಲ ಕಾರ್ಮಿಕರ ಕಾಲನಿಗಳಲ್ಲಿ ಅವರ ಮನೆಗಳಿಗೆ ನುಗ್ಗಿ ಹೆಂಗಸರು- ಮಕ್ಕಳನ್ನು ಬೆದರಿಸಲೂ ಹೇಸಲಿಲ್ಲ ಈ ಬಿಜೆಪಿ ನೇತೃತ್ವದ ರಾಜ್ಯ ಸರಕಾರ. ಇದಕ್ಕೆಲ್ಲಾ ಕೇಂದ್ರ ಬಿಜೆಪಿ ವಿದ್ಯುತ್ ಮಂತ್ರಿಯ ಅಹಂಕಾರಪೂರ್ಣ ಬೆಂಬಲ. ಆದರೂ ವಿದ್ಯುತ್ ಕಾರ್ಮಿಕರು ಧೃತಿಗೆಡಲಿಲ್ಲ. ಮುಷ್ಕರ ನಿಲ್ಲಿಸಿದರೆ ಖಾಸಗೀಕರಣ ಬಿಟ್ಟು ಕಾರ್ಮಿಕ ಇತರ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಉತ್ತರ ಪ್ರದೇಶದ ವಿದ್ಯುತ್ ಮಂತ್ರಿ ನರೇಶ್ ಅಗರ್‌ವಾಲ್ ಆಮಿಷವೊಡ್ಡಿದರೂ ಪ್ರಯೋಜನವಾಗಲಿಲ್ಲ. ಮುಷ್ಕರ ಮುಂದುವರೆಯಿತು. ಜನವರಿ 24 ರಂದು ದೇಶಾದ್ಯಂತ ಇತರ ರಾಜ್ಯಗಳ ವಿದ್ಯುತ್ ಮಂಡಳಿಗಳ ನೌಕರರು ಸೌಹಾರ್ದ ಮುಷ್ಕರ ನಡೆಸಿ ಕೇಂದ್ರ ಸರಕಾರವನ್ನು, ಉತ್ತರಪ್ರದೇಶ ಸರ್ಕಾರವನ್ನು ಎಚ್ಚರಿಸಿದರು. ಉತ್ತರ ಪ್ರದೇಶದ ವಿದ್ಯುತ್ ನೀತಿಯು ತ್ತ, ದೇಶ-ವಿರೋಧಿ ಸ್ವರೂಪದತ್ತ ಗಮನ ಸೆಳೆಯಲು ಈ ಮುಷ್ಕರ ನಡೆಸುತ್ತಿದ್ದಾರೆ ಎಂದು ಈ ಸರ್ಕಾರಗಳನ್ನು ಎಚ್ಚರಿಸಿದರು. ನವದೆಹಲಿಯಲ್ಲಿ ವಿದ್ಯುತ್ ಮಂತ್ರಾಲಯದ ಎದುರು ಭಾರೀ ಮತಪ್ರದರ್ಶನ ನಡೆಸಿದರು.

ಸರ್ಕಾರದ ನೀತಿಗಳನ್ನು ಕಾರ್ಮಿಕರು ಪ್ರಶ್ನಿಸಬಾರದು, ತಮಗೆ ಹೇಳಿದಷ್ಟು ಮಾಡುವುದಷ್ಟೇ ಅವರ ಕೆಲಸ ಎಂದು ಅಹಂಕಾರದಿಂದ ಹೇಳುತ್ತಿದ್ದ (ಉತ್ತರ ಪ್ರದೇಶದಲ್ಲಿ ಕೇವಲ ಅಧಿಕಾರದಾಸೆಗಾಗಿ ಪಕ್ಷಾಂತರಕ್ಕೆ ನೇತೃತ್ವ ನೀಡಿದ್ದಕ್ಕೆ ಕುಖ್ಯಾತವಾಗಿದ್ದ) ವಿದ್ಯುತ್ ಮಂತ್ರಿ ಕೊನೆಗೂ ಬಂಧಿಸಿದ್ದ ಕಾರ್ಮಿಕ ಮುಖಂಡರನ್ನು ಬಿಡುಗಡೆ ಮಾಡಿ ಮಾತುಕತೆ ನಡೆಸಬೇಕಾಯಿತು.

ನಿಜ, ಉತ್ತರ ಪ್ರದೇಶ ವಿದ್ಯುತ್ ಮಂಡಳಿಯನ್ನು ಮೂರು ನಿಗಮಗಳಾಗಿ ವಿಭಜಿಸುವ ಸರ್ಕಾರದ ನಿರ್ಧಾರವನ್ನು ಕೈಬಿಡುವಂತೆ ಮಾಡಲಾಗಲಿಲ್ಲ. ಆದರೆ ಈ ವಿಭಜನೆಯ ಮೂಲಕ ಈ ಮೂರು ವಿಭಾಗಗಳನ್ನು ಖಾಸಗೀಕರಿಸುವ ಕ್ರಮವನ್ನು ಸದ್ಯಕ್ಕೆ ಕೈಬಿಡಲು ಸರ್ಕಾರ ಒಪ್ಪಬೇಕಾಯಿತು. ಬೇರೆ ಬೇರೆ ರಾಜ್ಯಗಳಲ್ಲಿ ಇಂತಹ ಕ್ರಮಗಳ ಅನುಭವದ ಅಧ್ಯಯನ ನಡೆಸಿ ಅಗತ್ಯವಾದರೆ ವಿದ್ಯುತ್ ಮಂಡಳಿಯ ವಿಭಜನೆಯನ್ನು ಕೈಬಿಡಲಾಗುವುದು ಎಂದೂ ಸರಕಾರ ಹೇಳಿದೆ. ತಕ್ಷಣವೇ ಖಾಸಗೀಕರಿಸ ಬೇಕೆಂದಿದ್ದ ಖಾನಪುರದ ವಿದ್ಯುತ್ ಪೂರೈಕೆ ಇತ್ಯಾದಿಗಳನ್ನು ಸದ್ಯಕ್ಕೆ ಕೈಗೆತ್ತಿಕೊಳ್ಳುವುದಿಲ್ಲ ಎಂದೂ ಉತ್ತರ ಪ್ರದೇಶದ ಸರಕಾರ ಹೇಳಿದೆ. ಜತೆಗೆ ಕಾರ್ಮಿಕರ ವಿರುದ್ಧ ಕೈಗೊಂಡಿರುವ ಎಲ್ಲಾ ಶಿಸ್ತಿನ ಕ್ರಮಗಳನ್ನು ಹಿಂತೆಗೆದುಕೊಳ್ಳಲಾಗುವುದು ಎಂದೂ ಅದು ಭರವಸೆ ನೀಡಿದೆ. ಈ ಹಿನ್ನೆಲೆಯಲ್ಲಿ ಗಣತಂತ್ರದಿನದ ಹಿಂದಿನ ರಾತ್ರಿ ಉತ್ತರ ಪ್ರದೇಶದ 87 ಸಾವಿರ ವಿದ್ಯುತ್ ಕಾರ್ಮಿಕರ 11 ದಿನಗಳ ಮಹತ್ವಪೂರ್ಣ ಮುಷ್ಕರ ಕೊನೆಗೊಂಡಿತು.

ಹೋರಾಟದ ಹೊಸ ಹಂತ


ಆದರೆ ಖಾಸಗೀಕರಣ ನೀತಿಯ ವಿರುದ್ಧ ಹೋರಾಟ ಮುಂದುವರೆಯುತ್ತಿದೆ. ಉತ್ತರ ಪ್ರದೇಶದ ವಿದ್ಯುತ್ ನೌಕರರ ಮುಷ್ಕರ ಉದಾರೀಕರಣದ ಆರಂಭದ ದಿನಗಳಿಂದಲೇ ಹುಟ್ಟಿಬಂದ ಖಾಸಗೀಕರಣ-ವಿರೋಧಿ ಹೋರಾಟವನ್ನು ಈಗ ಹೊಸ ಹಂತಕ್ಕೆ ಒಯ್ದಿದೆ. ದೇಶದ ಕಾರ್ಮಿಕರು ಇನ್ನು ಮುಂದೆ ಕೇವಲ ಪ್ರತಿಭಟನೆಗಳಿಗೇ ನಿಲ್ಲದೆ, ಕಾರ್ಯಾಚರಣೆಗಳಿಗೆ ಇಳಿಯಲು, ತೀವ್ರ ಕಾರ್ಯಾಚರಣೆಗಳನ್ನು ನಡೆಸಲು ಸಿದ್ಧರಾಗುತ್ತಿದ್ದಾರೆ ಎಂಬುದನ್ನು ಈ ಮುಷ್ಕರ ತೋರಿಸಿಕೊಟ್ಟಿದೆ. ಕೇಂದ್ರ ವಿದ್ಯುತ್ ಮಂತ್ರಿಗಳು ಕೂಡಾ ಉತ್ತರ ಉತ್ತರ ಪ್ರದೇಶದ ಈ ಮುಷ್ಕರ ತಮಗೂ, ಅಂದರೆ ಐ.ಎಂ.ಎಫ್.-ವಿಶ್ವಬ್ಯಾಂಕ್ ಆದೇಶಗಳಂತೆ ರೂಪಿಸಿದ ತಮ್ಮ ನೀತಿಗಳ ಜಾರಿಗೆ ಸಂಬಂಧಪಟ್ಟಂತೆ ಬಹಳ ಮಹತ್ವದ ಘಟನೆ ಎಂದು ಬಹಿರಂಗವಾಗಿಯೇ ಹೇಳಿದ್ದರು. ಅದರಿಂದಾಗಿ ಈ ಮುಷ್ಕರವನ್ನು ಸಂಪೂರ್ಣ ವಿಫಲಗೊಳಿಸಲು ಸರ್ವಪ್ರಯತ್ನ ನಡೆಸಿದರು. ಜನಸಾಮಾನ್ಯರಿಂದ ಎನ್ರೋನ್, ಕೊಜೆಂಟ್ರಿಕ್ಸ್‌ಗಳಿಗೆ 5 ಪಟ್ಟು ಹೆಚ್ಚು ವಿದ್ಯುತ್ ದರ ವಸೂಲಿ ಮಾಡಲು ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಮುಂದೆ ಬಂದ ಈ ಮಂತ್ರಿಗೆ ವಿದ್ಯುತ್ ನೌಕರರು ಮುಷ್ಕರ ನಡೆಸಿದಾಗ ಮಾತ್ರ ಜನಸಾಮಾನ್ಯರ ಹಿತಾಸಕ್ತಿಗಳ ನೆನಪಾಯಿತು: ಆ ಮೂಲಕ ಜನಸಾಮಾನ್ಯರನ್ನು ವಿದ್ಯುತ್ ನೌಕರರ ವಿರುದ್ಧ ಎತ್ತಿಕಟ್ಟಲು ಪ್ರಯತ್ನಿಸಿದರು. ಈ ಮುಷ್ಕರಕ್ಕೆ ಮಾಫಿಯ ಹಣ ಸಹಾಯ ಮಾಡಿದೆ ಎಂಬ ಹೀನ ಹೇಳಿಕೆ ನೀಡಿದರು. ಆದರೆ ಈ ಪ್ರಯತ್ನಗಳಲ್ಲಿ ಯಾರು ಯಾರ ಏಜೆಂಟರು ಎಂದು ಎಲ್ಲರ ಗಮನಕ್ಕೆ ಬಂತು. ವಿದ್ಯುತ್ ಮಂಡಳಿಗಳ ಸಮಸ್ಯೆಗಳಿಗೆ ಸರ್ಕಾರದ ನೀತಿಗಳೇ ಕಾರಣ, ಬ್ಯಾಂಕ್ ವಲಯದಲ್ಲಾಗಿರುವಂತೆ ಅತೀ ಹೆಚ್ಚು ಬಾಕಿಗಳನ್ನು ಇಟ್ಟುಕೊಂಡು ವಿದ್ಯುತ್ ಮಂಡಳಿಗಳ ದುರವಸ್ಥೆಗೆ ಕಾರಣರಾದವರು ನಿಜವಾಗಿ ಸರಕಾರಗಳ ನೀತಿಗಳು ಹಾಗೂ ದೊಡ್ಡ ಉದ್ದಿಮೆದಾರರು ಎಂಬ ಅಂಶವೂ ಹಲವರ ಗಮನಕ್ಕೆ ಬಂತು. ರಾಜ್ಯದ ವಿದ್ಯುತ್ ಮಂಡಳಿಗಳನ್ನು ಉತ್ಪಾದನೆ, ವಿತರಣೆ ಮತ್ತು ವಸೂಲಿ ಎಂದು ಪ್ರತ್ಯೇಕ ಕಂಪನಿಗಳಾಗಿ ಮಾಡಿ ಖಾಸಗೀಕರಿಸ ಬೇಕೆಂಬ ಐ.ಎಂ.ಎಫ್.-ವಿಶ್ವಬ್ಯಾಂಕ್ ನೀತಿಗಳನ್ನು ತರಾತುರಿಯಿಂದ ಜಾರಿಗೆ ತರುತ್ತಿರುವ ರಾಜ್ಯಗಳಲ್ಲಿ ಒಂದಾದ ಒರಿಸ್ಸಾದ ಅನುಭವವೂ ಬೆಳಕಿಗೆ ಬಂತು. ಅಲ್ಲಿ ನಗರ ಪ್ರದೇಶದ ಸಿರಿವಂತರಿಗೇನೋ ವಿದ್ಯುತ್ ಸೌಕರ್ಯ ಸುಧಾರಿಸಿದೆಯಂತೆ, ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ಇನ್ನೂ ಹದಗೆಟ್ಟಿದೆಯಂತೆ. ಅದನ್ನು ಸುಧಾರಿಸಬೇಕಾದರೆ ಸರ್ಕಾರದ ಸಬ್ಸಿಡಿ ಅಗತ್ಯ ಎಂದು ಹೇಳಲಾಗುತ್ತಿದೆಯಂತೆ. ಜನಸಾಮಾನ್ಯರಿಗೆ ಸಬ್ಸಿಡಿಗಳೆಂದರೆ ಹೌಹಾರುವ ಐ.ಎಂ.ಎಫ್. ನೀತಿಯನ್ನು ರಕ್ತಗತ ಮಾಡಿಕೊಂಡಿರುವ ಬಾಯಿಬಡುಕ ಕೇಂದ್ರ ವಿದ್ಯುತ್ ಮಂತ್ರಿಗಳು ಈ ವಿಷಯದಲ್ಲಿ ಮಾತ್ರ ದಿವ್ಯ ಮೌನ ತಾಳಿದ್ದಾರೆ. ಉತ್ತರ ಪ್ರದೇಶದ ವಿದ್ಯುತ್ ನೌಕರರ 11 ದಿನಗಳ ಮುಷ್ಕರ ಈ ಎಲ್ಲಾ ಮಹತ್ವಪೂರ್ಣ ಪ್ರಶ್ನೆಗಳನ್ನು ಮತ್ತೆ ದೇಶದ ಮುಂದೆ ತಂದಿಟ್ಟಿದೆ.

ಹೋರಾಟದ ಸಾಗರದತ್ತ......

ಎಂದಿನಂತೆ ಗುತ್ತೇದಾರಿಗಳ ಹಿಡಿತದಲ್ಲಿರುವ ಮಾಧ್ಯಮಗಳ ಪಕ್ಷಪಾತದ ಪ್ರದರ್ಶನ ಈ ಬಾರಿಯೂ ನಡೆಯಿತು. ಉತ್ತರ ಪ್ರದೇಶದ, ಕೇಂದ್ರದ ವಿದ್ಯುತ್ ಮಂತ್ರಿಗಳ, ಸಾರಿಗೆ ಮಂತ್ರಿಗಳ ಅಹಂಕಾರದ ಮಾತುಗಳಿಗೆ ಅವು ಚಪ್ಪಾಳೆ ತಟ್ಟಿ ಶಿಳ್ಳೆ ಹಾಕಿದವು. ಒಂದೆರಡು ಪತ್ರಿಕೆಗಳಂತೂ ಹಿಂದಿನ ಸರಕಾರಗಳಂತೆ ಕಾರ್ಮಿಕರ 'ಬೆದರಿಕೆ'ಗಳಿಗೆ ತಲೆಬಾಗಿ 'ಸುಧಾರಣಾ ಪ್ರಕ್ರಿಯೆ'ಗೆ ತಡೆ ತರಬೇಡಿ ಎಂದು ವಾಜಪೇಯಿ ಸರಕಾರವನ್ನು ಹುರಿದುಂಬಿಸಿದವು.

ಆದರೆ ದೇಶದ ಕಾರ್ಮಿಕ ವರ್ಗ ಇವು ಯಾವುದಕ್ಕೂ ಸೊಪ್ಪು ಹಾಕದೆ ತನ್ನ ಹೋರಾಟವನ್ನು ಮುಂದುವರೆಸಲು ನಿರ್ಧರಿಸಿದೆ. ಫೆಬ್ರವರಿ 2 ರಂದು ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕರು ದೇಶವ್ಯಾಪಿ ಮುಷ್ಕರದ ಮೂಲಕ ಉತ್ತರ ಪ್ರದೇಶದ ವಿದ್ಯುತ್ ಕಾರ್ಮಿಕರು ಮತ್ತು ಬಂದರು ಕಾರ್ಮಿಕರು ತಮ್ಮ ಮುಷ್ಕರಗಳ ಮೂಲಕ ಆರಂಬಿಸಿದ ಹೋರಾಟವನ್ನು ಮುಂದಕ್ಕೊಯ್ಯುತ್ತಿದ್ದಾರೆ. ಕಾರ್ಮಿಕ ವರ್ಗದ ಈ ಹೋರಾಟಗಳಿಂದ ಸ್ಫೂರ್ತಿ ಪಡೆದು ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಮಾರ್ಚ್ ತಿಂಗಳಲ್ಲಿ ಒಂದು ಬೃಹತ್ 'ಸಂಸತ್ ಚಲೋ' ನಡೆಸಲು ನಿರ್ಧರಿಸಿದೆ.

ಬಂದರು ಕಾರ್ಮಿಕರು, ಉತ್ತರ ಪ್ರದೇಶದ ವಿದ್ಯುತ್ ಕಾರ್ಮಿಕರು, ಅದಕ್ಕೆ ಮೊದಲು ವಿಮಾ ನೌಕರರು ನಡೆಸಿದ ಪ್ರತಿಭಟನೆಯ ಅಲೆಗಳು ಒಂದು ಐತಿಹಾಸಿಕ ಹೋರಾಟದ ಸಾಗರದ ರೂಪ ಪಡೆಯುತ್ತಿವೆ.




ಸಾಮೂಹಿಕ ಸಂಘಟನೆಗಳ
ರಾಷ್ಟ್ರೀಯ ವೇದಿಕೆ(ಎನ್‌ಪಿಎಂಓ) ನೇತೃತ್ವದಲ್ಲಿ
ಬೃಹತ್ ಸಂಸತ್ ಚಲೋ - ಮಾರ್ಚ್ 9, 2000

ಜನವರಿ 20, 2000 ರಂದು ನವದೆಹಲಿಯಲ್ಲಿ ಜರುಗಿದ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯು ಮಾರ್ಚ್ 9 ರಂದು ಹತ್ತು ಲಕ್ಷ ಜನರ ಬೃಹತ್ ಸಂಸತ್ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

23 ಅಂಶಗಳ ಬೇಡಿಕೆಗಳನ್ನು ಸಿದ್ಧಪಡಿಸಿದ ಸಮಾವೇಶವು ಅದನ್ನು ಪಡೆದುಕೊಳ್ಳಲು ಮಾರ್ಚ್ 9 ರ ಸಂಸತ್ ಚಲೋ ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ.

1. ಫೆಬ್ರವರಿ ಅಂತ್ಯದೊಳಗೆ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಾವೇಶಗಳನ್ನು ನಡೆಸುವುದು.
2. ಮಾರ್ಚ್ 9, 2000 - ಸಂಸತ್ ಚಲೋ
3. ಕೇಂದ್ರ ಬಜೆಟ್ ಅಧಿವೇಶನದ ಸಂದರ್ಭದಲ್ಲಿ ದೇಶಾದ್ಯಂತ ಮುಷ್ಕರ, ಅದರ ಮೊದಲು ಪಾದಯಾತ್ರೆ, ಸತ್ಯಾಗ್ರಹ, ಧರಣಿ ಇತ್ಯಾದಿ ಕಾರ್ಯಕ್ರಮ(ಮುಷ್ಕರಣದ ದಿನಾಂಕವನ್ನು ರ್‍ಯಾಲಿಯಂದು ತಿಳಿಸಲಾಗುವುದು)



ಭಾರತದ ಸ
ಸಾಧಿಸಬೇಕಾದ

ಇದೇ ಜನವರಿ ೨೬ ರಂದು ನಮ್ಮ ಗಣತಂತ್ರದ ಸುವರ್ಣೋತ್ಸವವನ್ನು ನೋಡಿ ಕಳೆದ ೫೦ ವರ್ಷಗಳ ಸಾಧನೆ ವಿಫಲತೆಗಲ ವಿಮರ್ಶೆ ನಡೆಸು ಸಾಗುವುದು ಹೇಗೆ ಎಂದು ಯೋಚಿಸುವ ಸಮಯ ಇದು. ಬಿಜೆಪಿ ನೇತೃತ್ವ ಬದಲಾವಣೆಯ ಮಾತುಗಳು ಬಹಳವಾಗಿ ಕೇಳಬರುತ್ತಿರುವ ಈ ಸಮಯ ಅಧ್ಯಯನ ವಿಶೇಷ ಮಹತ್ವ ಪಡೆದಿದೆ. ಹಿರಿಯ ಮಾರ್ಕ್ಸ್‌ವಾದಿ ಮುತ್ಸ ಲೇಖನ ಇಲ್ಲಿ ಅದನ್ನೇ ಮಾಡಿದೆ.

ನಮ್ಮ ಗಣತಂತ್ರದ ಸ್ಥಾಪನೆಯ 50ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಇದು ಕಳೆದ 50 ವರ್ಷಗಳ ಬಗ್ಗೆ ಮಂಥನ ನಡೆಸಬೇಕಾದ ಸಮಯ ಕೂಡಾ. ನಮ್ಮ ಈ ಗಣತಂತ್ರದ ಸಾಧನೆಗಳೇನು, ಈಡೇರಿದ ಭರವಸೆಗಳು, ಆಕಾಂಕ್ಷೆಗಳು ಯಾವವು, ಎಲ್ಲಕ್ಕೂ ಮುಖ್ಯವಾಗಿ ಸಂವಿಧಾನವನ್ನು ಬುಡಮೇಲು ಮಾಡುವ, ಬದಿಗೊತ್ತುವ ಪ್ರಯತ್ನಗಳು ಏನೇನು ನಡೆದಿವೆ ಎಂದು ಪರೀಕ್ಷಿಸಬೇಕಾದ ಸಮಯವೂ ಇದೇ. ಸಂವಿಧಾನವನ್ನು ಪುನರ್ವಿಮರ್ಶಿಸಬೇಕು ಎಂಬ ಕರೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಇಂತಹ ಪರೀಕ್ಷಣೆಗೆ ವಿಶೇಷ ಮಹತ್ವವಿದೆ.

ಕಳೆದ ಐವತ್ತು ವರ್ಷಗಳಲ್ಲಿ ನಕಾರಾತ್ಮಕ ಅಂಶಗಳೂ ಕಂಡುಬಂದಿವೆ, ಸಕಾರಾತ್ಮಕ ಅಂಶಗಳೂ ಕಂಡು ಬಂದಿವೆ. ಸಕಾರಾತ್ಮಕ ಅಂಶವೆಂದರೆ ಎಷ್ಟೇ ಬುಡಮೇಲು ಪ್ರಯತ್ನಗಳೂ ನಡೆದರೂ ಗಣತಂತ್ರದ ವಿವಿಧ ಅಂಗಸಂಸ್ಥೆಗಳು ಬದುಕುಳಿದಿವೆ ಎಂಬುದು ನಿಜಕ್ಕೂ ಗಮನಾರ್ಹ. ನಮ್ಮ ನೆರೆ ದೇಶಗಳು ಮತ್ತು ಇತರ ಹೊಸದಾಗಿ ವಿಮೋಚನೆಗೊಂಡ ದೇಶಗಳಿಗೆ ಹೋಲಿಸಿದಾಗ ಇದು ಎದ್ದು ಕಾಣುವ ಸಾಧನೆ. ಏಕೆಂದರೆ ಅಲ್ಲೆಲ್ಲಾ ಪ್ರಜಾಪ್ರಭುತ್ವದ ಸಂಸ್ಥೆಗಳ ಸತತವಾಗಿ ಲೂಟಿಕೋರರ ಧಾಳಿಗಳಿಗೆ ಒಳಗಾಗಿವೆ ಎಂಬುದನ್ನು ನಾವು ನೋಡಿದ್ದೇವೆ.

ನಮ್ಮ ಸಂವಿಧಾನ ಮೂಲಭೂತ ಹಕ್ಕುಗಳು ಹಾಗೂ ಜನಪ್ರಿಯ ಚುನಾವಣೆಗಳ ಬಗ್ಗೆ ಹೇಳಿದೆ. ಇದು ಬಂಡವಾಳಶಾಹಿ-ಭೂಮಾಲಕ ಕೂಟದ ಆಳ್ವಿಕೆಯೆಂಬುದು ಬೇರೆ ಮಾತು. ಆದರೂ ವಸಾಹತುಶಾಹಿ ಆಳ್ವಿಕೆಯಲ್ಲಿ ಸಿಗದ ಸ್ವಾತಂತ್ರ್ಯವನ್ನು, ಹಕ್ಕುಗಳನ್ನು ಇದು ಕೊಟ್ಟಿತು. ನಂತರ ಈ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಮಿತಿಗಳು ಬಂದರೂ, ಅವುಗಳ ಉಲ್ಲಂಘನೆಯಾದರೂ ಕೂಡಾ ವಯಸ್ಕ ಮತದಾನ, ಚುನಾವಣೆಗಳು, ಚುನಾಯಿತ ಮಂತ್ರಿಮಂಡಲಗಳ ರಚನೆ ಇವೆಲ್ಲಾ ಕೋಟ್ಯಾಂತರ ಜನಗಳನ್ನು ಪ್ರಜಾಪ್ರಭುತ್ವ ಹೋರಾಟದತ್ತ ಸೆಳೆದಿವೆ, ಅವರ ಪ್ರಜ್ಞೆಯನ್ನು ಎತ್ತರಿಸಿವೆ.

ಬೂರ್ಜ್ವಾ ವರ್ಗಕ್ಕೆ ತನ್ನ ವರ್ಗ ಆಳ್ವಿಕೆಯನ್ನು ಶಾಶ್ವತಗೊಳಿಸಲು ಅನುವು ಮಾಡಿಕೊಡುವ ಒಂದು ಉತ್ತಮ ಸಾಧನ ಎಂದು ಕಂಡಿದ್ದರಿಂದ ಸಂವಿಧಾನದ ಮೂಲಭೂತ ಸ್ವರೂಪವನ್ನು, ಗಣತಂತ್ರವನ್ನು ಅದು ಉಳಿಸಿಕೊಂಡಿದೆ. ಆದರೆ ಅಸಂತೃಪ್ತಿ ಹೆಚ್ಚುತ್ತಿರುವಂತೆ, ಭ್ರಮನಿರಸನ ತ್ವರಿತವಾಗಿ ಹರಡುತ್ತಿರುವಂತೆ, ಜನಗಳು ಪ್ರಮುಖ ರಾಜಕೀಯ ಪಕ್ಷಗಳ ಬಗ್ಗೆ ತಮ್ಮ ಅಸಂತೃಪ್ತಿಯನ್ನು ಹೆಚ್ಚೆಚ್ಚು ಸ್ಪಷ್ಟವಾಗಿ (ಅಪೂರ್ಣ ತೀರ್ಪುಗಳ ಒಂದು ಸರಣಿ ಮೂಲಕ) ತೋರಲಾರಂಭಿಸಿದಂತೆ ಆಳುವ ವರ್ಗದ ವಕ್ತಾರರು ಸಂವಿಧಾನವನ್ನು ಬದಲಿಸಬೇಕು ಎಂದು ಹೇಳಲಾರಂಭಿಸಿದ್ದಾರೆ. ಈ ಸಂವಿಧಾನ ಹೊಸ ಸನ್ನಿವೇಶವನ್ನು ಎದುರಿಸುವಂತೆ ಅನುವು ಮಾಡಿಕೊಳ್ಳುವುದರೊಂದಿಗೆ ತಮ್ಮ ವರ್ಗ ಆಳ್ವಿಕೆಯನ್ನು ಮುಂದುವರೆಸುವಂತಿರಬೇಕು ಎಂಬುದು ಅವರ ಹುನ್ನಾರ.

ಸ್ವಾತಂತ್ರ್ಯ ಆಂದೋಲನದ ಆಕಾಂಕ್ಷೆಗಳ ಪ್ರತೀಕ

ಒಂದು ಗಣತಂತ್ರ ಸಂವಿಧಾನವನ್ನು ಅಂಗೀಕರಿಸಿದ್ದೇ ಸ್ವಾತಂತ್ರ್ಯ ಆಂದೋಲನದ ವಿವಿಧ ಪ್ರವಾಹಗಳ ಆಕಾಂಕ್ಷೆಗಳ ಪ್ರತಿಫಲನವಾಗಿತ್ತು.

ಗಾಂಧೀಜಿಯ ಪ್ರವೇಶದೊಂದಿಗೆ ಕಾಂಗ್ರೆಸ್ ಮುಖಂಡರು ಜನಸಮೂಹಗಳನ್ನು ದೂರವಿಡುವ ನೀತಿಗಳನ್ನು ತ್ಯಜಿಸಿದ್ದರಿಂದ ಸ್ವಾತಂತ್ರ್ಯ ಆಂದೋಲನ ತೀವ್ರ ಮುನ್ನಡೆ ಕಂಡಿತು. ಸ್ವಾತಂತ್ರ್ಯ ಹೋರಾಟದ ಮುಖಂಡತ್ವವನ್ನು ಬೂರ್ಜ್ವಾ ವರ್ಗ ವಹಿಸಿಕೊಂಡಿದ್ದರೂ ಕಮ್ಯುನಿಸ್ಟರು ಮತ್ತು ಅವರ ಮೊದಲು ಅನುಶೀಲನ್, ಯುಗಾಂತರ್ ಮುಂತಾದ ಇತರ ಕ್ರಾಂತಿಕಾರಿ ಗುಂಪುಗಳು, ಗದರ್ ವೀರರು, ಭಗತ್ ಸಿಂಗ್ ಮತ್ತು ಅವರ ಸಹಯೋಗಿಗಳು, ದೇಶದ ವಿವಿಧ ಭಾಗಗಳಲ್ಲಿ ಇನ್ನೂ ಹಲವು ಗುಂಪುಗಳು ಈ ಆಂದೋಲನದಲ್ಲಿ ಮಹತ್ವದ ಪಾತ್ರ ವಹಿಸಿದ್ದವು. ಕಾರ್ಮಿಕರ, ರೈತರ, ತೀವ್ರಗಾಮಿ ವಿದ್ಯಾರ್ಥಿಗಳ, ಯುವಜನರ ಸಂಘಟನೆಗಳು ವಹಿಸಿದ ಪಾತ್ರವೂ ಕಮ್ಮಿಯೇನಲ್ಲ. ಇವು ಜನಸಮೂಹಗಳನ್ನು ಹುರಿದುಂಬಿಸಿದವು. ಕಾಂಗ್ರೆಸ್‌ನ ಅಹಮದಾಬಾದ್ ಅಧಿವೇಶನದಲ್ಲಿ 1922 ರಲ್ಲಿ 'ಸಂಪೂರ್ಣ ಸ್ವಾತಂತ್ರ್ಯ'ದ ಘೋಷಣೆಯನ್ನು ಮೊದಲ ಬಾರಿಗೆ ಎತ್ತಿದವರು ಕಮ್ಯುನಿಸ್ಟರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಎರಡನೇ ಮಹಾಯುದ್ಧದ ನಂತರ ಭುಗಿಲೆದ್ದ ಪ್ರಕ್ಷೋಭೆಗಳು ಜನಗಳನ್ನು ಹೆಚ್ಚೆಚ್ಚು ಹುರಿದುಂಬಿಸಿದವು. ನೌಕಾ ಸೈನಿಕರು ತಮ್ಮ ಬ್ರಿಟಿಶ್ ಯಜಮಾನರಿಗೆ ತಮ್ಮ ಬಂದೂಕುಗಳನ್ನು ಗುರಿಯಿಟ್ಟಿದ್ದು, ಅದಕ್ಕೆ ಮುಂಬೈ ಕಾರ್ಮಿಕರ ಬೆಂಬಲದ, ಸೌಹಾರ್ದದ ಕಾರ್ಯಾಚರಣೆ ಒಂದು ಹೃದಯಂಗಮ ಘಟನೆ. ಬಂಡೆದ್ದ ನಾವಿಕರು ಎತ್ತಿ ಹಿಡಿದಿದ್ದ ಕಾಂಗ್ರೆಸ್, ಮುಸ್ಲಿಂ ಲೀಗ್ ಬಾವುಟಗಳು ಮತ್ತು ಕೆಂಬಾವುಟ ರಾಷ್ಟ್ರೀಯ ಆಂದೋಲನದ ಪ್ರಮುಖ ಪ್ರವಾಹಗಳ ಸಂಕೇತವೂ ಆಗಿತ್ತು. ಈ ಎಲ್ಲಾ ಆಂದೋಲನಗಳ ಆಕಾಂಕ್ಷೆಗಳು, ತುಡಿತಗಳು ಐವತ್ತು ವರ್ಷಗಳ ಹಿಂದೆ ಈ ಸಂವಿಧಾನದಲ್ಲಿ ಅಭಿವ್ಯಕ್ತಗೊಂಡದ್ದು ಸಹಜವೇ ಆಗಿತ್ತು.


ಸಂವಿಧಾನದ ಕಣ್ಣೋಟ ಅದರ ನಿರ್ದೇಶಕ ಸೂತ್ರಗಳಲ್ಲಿ ಮೂಡಿದೆ. (ಬಾಕ್ಸ್ ನೋಡಿ) ಇವಲ್ಲದೆ, ಸಂವಿಧಾನ ಮೂಲಭೂತ, ಹಕ್ಕುಗಳ, ವಯಸ್ಕ ಮತದಾನದ ಒಂದು ಚುನಾಯಿತ ಸಂಸತ್ತಿನ, ಮನಸ್ಸಾಕ್ಷಿಯ ಸ್ವಾತಂತ್ರ್ಯದ ಹಕ್ಕುಗಳನ್ನು ನೀಡಿವೆ. ಸಂವಿಧಾನ ಸಭೆಯನ್ನು ಅದರ ಮೊದಲಿದ್ದ ಬ್ರಿಟಿಷ್ ಸಂವಿಧಾನದ ಆಧಾರದಲ್ಲಿ ಸೀಮಿತ ಮತದಾನದ ಮೂಲಕ ಆರಿಸಿದ್ದರೂ ಆಗಿನ ಕಾಲದಲ್ಲಿ ಅಂದರೆ ಬಂಡವಾಳಶಾಹಿ ಸಾಕಷ್ಟು ಬೆಳೆಯದಿದ್ದ, ಊಳಿಗಮಾನ್ಯ ಸಂಬಂಧಗಳ ಪ್ರಾಬಲ್ಯ ಇನ್ನೂ ಇದ್ದ ಕಾಲದಲ್ಲಿ ಇಂತಹ ಬಹಳ ತೀವ್ರಗಾಮಿ ಕ್ರಮಗಳನ್ನು ಸಂವಿಧಾನದಲ್ಲಿ ಅಳವಡಿಸಲು ಅದಕ್ಕೆ ಸಾಧ್ಯವಾಯಿತು. ಸೀಮಿತ ಮತದಾನದಿಂದ ಆರಿಸಿಬಂದಿದ್ದರೂ ಸಂವಿಧಾನ ಸಭೆಯ ಸದಸ್ಯರು ವಿಜಯಶಾಲಿಯಾದ ರಾಷ್ಟ್ರೀಯ ಆಂದೋಲನವನ್ನು ಪ್ರತಿನಿಧಿಸಿದ್ದರು. ಒಂದು ಅಭೂತಪೂರ್ವವಾದ ದೇಶವ್ಯಾಪಿ ಉತ್ಕ್ರಾಂತಿಯ ಹಿನ್ನೆಲೆಯಲ್ಲಿ ಅವರು ಸಭೆ ನಡೆಸಿದ್ದರು. ಆದ್ದರಿಂದ ಸ್ವತಂತ್ರ ಬಂಡವಾಳಶಾಹಿ ಅಭಿವೃದ್ಧಿಯ ದಾರಿಯನ್ನು ಹಾಗು ಸ್ವತಃ ತಾವೇ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಪ್ರತಿಪಾದಿಸಿದ ಪ್ರಜಾಪ್ರಭುತ್ವ ಕಣ್ಣೋಟವನ್ನು ಉಪೇಕ್ಷಿಸುವುದು ಸಾಧ್ಯವಿರಲಿಲ್ಲ.

ವ್ಯಕ್ತಿಪೂಜೆ ಪ್ರಜಾಪ್ರಭುತ್ವಕ್ಕೆ ತದ್ವಿರುದ್ಧವಾದದ್ದು ಎಂದ ಡಾ. ಅಂಬೇಡ್ಕರ್ ಧರ್ಮದಲ್ಲಿ ಭಕ್ತಿಯ ಪಥ ಆತ್ಮದ ವಿಮುಕ್ತಿಯ ಹಾದಿಯಾಗಿರಬಹುದು, ಆದರೆ ರಾಜಕೀಯದಲ್ಲಿ ಮಾತ್ರ ಅದು ಅವನತಿಯತ್ತ ಸರ್ವಾಧಿಕಾರದತ್ತ ಒಯ್ಯುತ್ತದೆ ಸಂವಿಧಾನ ಸಭೆಯ ಸದಸ್ಯರನ್ನು ಎಚ್ಚರಿಸಿದ್ದರು.

ಒಕ್ಕೂಟ ತತ್ವ

ಒಕ್ಕೂಟ ತತ್ವ ಮತ್ತು ಧರ್ಮನಿರಪೇಕ್ಷ ತತ್ವಗಳು ಕೂಡಾ ಸಂವಿಧಾನ ಮೂಲ ತತ್ವಗಳಾದವು. ಈ ಮೂಲಕ ಅದು ದೇಶದ ಅಸಾಮಾನ್ಯವಾದ ವೈವಿಧ್ಯಮಯ ಸ್ವರೂಪವನ್ನು ಒಂದು ಭಾರತ ಸಂಘದಲ್ಲಿ ಒಟ್ಟುಗೂಡಿಸುವ ಪ್ರಯತ್ನದ ಪ್ರತಿಬಿಂಬವಾಯಿತು. ಕಳೆದ 50 ವರ್ಷಗಳಲ್ಲಿ ಈ ಎರಡೂ ತತ್ವಗಳ ಮೇಲೆ ಹೆಚ್ಚೆಚ್ಚು ಧಾಳಿಗಳು ಬಂದಿವೆ ಎಂಬುದು ಬೇರೆ ಮಾತು.

ಒಕ್ಕೂಟ ತತ್ವದ ಉಲ್ಲಂಘನೆಯಂತೂ ಸಂವಿಧಾನ ಅಂಗೀಕರಿಸಿದ ನಂತರ 1952 ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲೇ ಕಂಡುಬಂತು. ಆಗಿನ ತಿರುವಾಂಕೂರು-ಕೊಚ್ಚಿನ್ ಹಾಗೂ ಮದ್ರಾಸ್ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳು



ಸಂವಿಧಾನದ ಆಶಯಗಳನ್ನು ಸಾಕಾರಗೊಳಿಸಬೇಕೇ ಅಥವಾ ಮರುವಿಮರ್ಶೆಗೊಳಪಡಿಸಬೇಕೇ?

ಪ್ರಭುತ್ವವು ನಿರ್ದಿಷ್ಟವಾಗಿ ತನ್ನ ಧೋರಣೆಯನ್ನು

ಅ) ನಾಗರಿಕರಿಗೆ ಪುರುಷರು ಮತ್ತು ಮಹಿಳೆಯರಿಗೆ ಸಮಾನವಾಗಿ, ಜೀವನೋಪಾಯಕ್ಕೆ ಬೇಕಾದ ಸಾಧನಗಳ ಹಕ್ಕು ಹೊಂದಿರುವಂತೆ,

ಆ) ಸಮುದಾಯದ ಭೌತಿಕ ಸಂಪನ್ಮೂಲಗಳ ಒಡೆತನ ಮತ್ತು ನಿಯಂತ್ರಣ ಎಲ್ಲರ ಸಮಾನ ಒಳಿತು ಸಾಧಿಸಲು ವಿತರಣೆಯಾಗುವಂತೆ;

ಇ). ಆರ್ಥಿಕ ವ್ಯವಸ್ಥೆಯ ಕಾರ್ಯಾಚರಣೆಯಿಂದ ಸಂಪತ್ತಿನ ಮತ್ತು ಉತ್ಪಾದನಾ ಸಾಧನಗಳ ಕೇಂದ್ರೀಕರಣ ವಾಗಿ ಎಲ್ಲರಿಗೂ ಕೆಡುಕಾಗದಂತೆ;

ಈ) ಮಹಿಳೆಯರಿಗೂ ಮತ್ತು ಪುರುಷರಿಗೂ ಸಮಾನ ಕೆಲಸಕ್ಕೆ ಸಮಾನ ವೇತನವಿರುವಂತೆ;

ಉ) ಕಾರ್ಮಿಕರ, ಪುರುಷರ ಮತ್ತು ಮಹಿಳೆಯರ ಆರೋಗ್ಯ ಮತ್ತು ಶಕ್ತಿಯ ಹಾಗೂ ಮಕ್ಕಳ ಎಳೆ ವಯಸ್ಸಿನ ದುರುಪಯೋಗವಾಗದಂತೆ ತಮ್ಮ ವಯಸ್ಸು ಹಾಗೂ ಶಕ್ತಿಗೆ ಸೂಕ್ತವಲ್ಲದ ವೃತ್ತಿಗಳಿಯಬೇಕಾಗುವ ಬಲವಂತ ಬಾರದಂತೆ;

ಊ) ಮಕ್ಕಳಿಗೆ ಒಂದು ಆರೋಗ್ಯಕರ ರೀತಿಯಲ್ಲಿ ಸ್ವಾತಂತ್ರ್ಯ ಮತ್ತು ಘನತೆಯ ಪರಿಸ್ಥಿತಿಗಳಲ್ಲಿ ಬೆಳೆಯಲು ಅವಕಾಶ ಮತ್ತು ಸೌಲಭ್ಯಗಳನ್ನು ಕೊಡುವಂತೆ ಹಾಗೂ ಬಾಲ್ಯ ಹಾಗೂ ಯೌವನಕ್ಕೆ ಶೋಷಣೆಯಿಂದ ಮತ್ತು ನೈತಿಕ ಹಾಗೂ ಭೌತಿಕ ನಿರ್ಲಕ್ಷ್ಯದಿಂದ ರಕ್ಷಣೆ ದೊರೆಯುವಂತೆ ಮಾಡುವ ದಿಕ್ಕಿನಲ್ಲಿ ತನ್ನ ಧೋರಣೆಯನ್ನು ನಿರ್ದೇಶಿಸಬೇಕು.

★ ★ ★

ಕೆಲಸದ, ಶಿಕ್ಷಣದ ಹಾಗೂ ಕೆಲವು ಸಂದರ್ಭಗಳಲ್ಲಿ ಸಾರ್ವಜನಿಕ ಸಹಾಯದ ಹಕ್ಕು - ಪ್ರಭುತ್ವ, ತನ್ನ ಆರ್ಥಿಕ ಸಾಮರ್ಥ್ಯ ಮತ್ತು ಬೆಳವಣಿಗೆಯ ಮಿತಿಯೊಳಗೆ ಕೆಲಸದ, ಶಿಕ್ಷಣದ ಮತ್ತು ನಿರುದ್ಯೋಗ, ಮುದಿ ವಯಸ್ಸು, ಕಾಯಿಲೆ ಹಾಗೂ ಅಂಗವಿಕಲತೆಯ ಸಂದರ್ಭಗಳಲ್ಲಿ, ಸಾರ್ವಜನಿಕ ಸಹಾಯದ ಹಕ್ಕು ಪಡೆಯುವಂತೆ ಪರಿಣಾಮಕಾರಿ ಅವಕಾಶ ಒದಗಿಸಬೇಕು.

★ ★ ★

ಕಾರ್ಮಿಕರಿಗೆ ಬದುಕುವ ಕೂಲಿ ಇತ್ಯಾದಿ - ಪ್ರಭುತ್ವ, ಸೂಕ್ತವಾದ ಶಾಸನ ಅಥವಾ ಬೇರೆ ಯಾವುದೇ ರೀತಿಯಲ್ಲಿ ಎಲ್ಲಾ ಕಾರ್ಮಿಕರಿಗೆ ಕೃಷಿ ಕಾರ್ಮಿಕರಾಗಲೀ, ಕೈಗಾರಿಕಾ ಕಾರ್ಮಿಕರಾಗಲೀ ಅಥವಾ ಬೇರೆ ಯಾರೇ ಕಾರ್ಮಿಕರಾಗಲೀ-ಕೆಲಸ, ಒಂದು ಬದುಕಿನ ಕೂಲಿ, ಒಂದು ಶಿಷ್ಟವಾದ ಜೀವನ ಮಟ್ಟ ನೀಡುವ ಮತ್ತು ವಿಶ್ರಾಂತಿಯನ್ನು ಸಂಪೂರ್ಣವಾಗಿ ಅನುಭವಿಸಬಹುದಾದ ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವಕಾಶಗಳನ್ನು ಒದಗಿಸುವ ಕೆಲಸದ ಪರಿಸ್ಥಿತಿಗಳನ್ನು ಪಡೆಯಲು ಪ್ರಯತ್ನಿಸುತ್ತದೆ, ನಿರ್ದಿಷ್ಟವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವೈಯಕ್ತಿಕ ಅಥವಾ ಸಹಕಾರೀ ಆಧಾರದಲ್ಲಿ ಕುಟೀರ ಉದ್ದಿಮೆಗಳಿಗೆ ಉತ್ತೇಜನ ನೀಡಲು ಪ್ರಯತ್ನಿಸುತ್ತದೆ.

★ ★ ★

ಮಕ್ಕಳಿಗೆ ಪುಕ್ಕಟೆ ಮತ್ತು ಕಡ್ಡಾಯ ಶಿಕ್ಷಣ ಒದಗಿಸುವುದು - ಪ್ರಭುತ್ವ, ಈ ಸಂವಿಧಾನ ಆರಂಭವಾದ ಹತ್ತು ವರ್ಷಗಳ ಅವಧಿಯೊಳಗೆ ಎಲ್ಲಾ ಮಕ್ಕಳಿಗೆ ಅವರು ಹದಿನಾಲ್ಕು ವರ್ಷಗಳನ್ನು ಪೂರೈಸುವವರೆಗೆ ಪುಕ್ಕಟೆ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಪ್ರಯತ್ನಿಸುತ್ತದೆ.

★ ★ ★

ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು ಹಾಗೂ ಇತರ ದುರ್ಬಲ ವಿಭಾಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳಿಗೆ ಉತ್ತೇಜನೆ- ಪ್ರಭುತ್ವ ವಿಶೇಷ ಜಾಗರೂಕತೆ ವಹಿಸಿ ದುರ್ಬಲ ಜನ ವಿಭಾಗಗಳ, ನಿರ್ದಿಷ್ಟವಾಗಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಗಳಿಗೆ ಉತ್ತೇಜನೆ ನೀಡುತ್ತದೆ, ಹಾಗೂ ಎಲ್ಲಾ ರೀತಿಯ ಶೋಷಣೆಗಳಿಂದ ಮತ್ತು ಸಾಮಾಜಿಕ ಅನ್ಯಾಯದಿಂದ ರಕ್ಷಿಸುತ್ತದೆ.

- ಸಂವಿಧಾನದ 'ನಿರ್ದೇಶಕ ಸೂತ್ರ' ಗಳಿಂದ

ಇವನ್ನೆಲ್ಲಾ ಸಾಕಾರಗೊಳಿಸಲು ಒಂದು ಒಗ್ಗಟ್ಟಿನ ಪ್ರಯತ್ನ ಈಗಿನ ಅವಶ್ಯಕತೆಯೇ ಅಥವಾ ಇವುಗಳ ಮರು ವಿಮರ್ಶೆಯೇ?

…ಧಾನ …ಶಯಗಳು

…ಸಿದ್ದೇವೆ. ಸಹಜವಾಗಿಯೇ ಹಿಂದಿರುಗಿ …ಹ ವಿಮರ್ಶೆಯ ನೆರವಿನಿಂದ ಮುಂದೆ …ಧಾನದ ಸಂಸದೀಯ ಪ್ರಜಾಪ್ರಭುತ್ವದಲ್ಲಿ …ಂತಹ ಹಿನ್ನೋಟ, ಪ್ರಸಕ್ತ ಸವಾಲುಗಳ …ಶನ್ ಸಿಂಗ್ ಸುರ್ಜಿತ್‌ರವರ ಈ

ರಚನೆಯಾಗದಂತೆ (ಇವುಗಳಲ್ಲಿ ಕಮ್ಯುನಿಸ್ಟರು ಪ್ರಮುಖ ಪಾತ್ರ ವಹಿಸುವ ಸಾಧ್ಯತೆಗಳಿದ್ದವು) ತಡೆಯಲು ಆಗಲೇ ರಾಜಪ್ರಮುಖರು, ಗವರ್ನರುಗಳ ಹುದ್ದೆಯನ್ನು ದುರುಪಯೋಗಪಡಿಸಿಕೊಳ್ಳಲಾಯಿತು. ಅಲ್ಪಮತದ ಕಾಂಗ್ರೆಸ್ ಪಕ್ಷವನ್ನು ಸರಕಾರ ರಚಿಸಲು ಆಹ್ವಾನಿಸಿ, ಆ ಮೂಲಕ ಪಕ್ಷಾಂತರದ ಪ್ರವೃತ್ತಿ ಆರಂಭಿಸಿತು. ಇನ್ನೊಂದು ರಾಜ್ಯ ಪಂಜಾಬ್‌ನಲ್ಲಿ ಬಹುಮತ ಪಡೆದ ಅಕಾಲಿ ಪಕ್ಷಕ್ಕೆ ಸರಕಾರ ರಚಿಸಲು ಅನುಮತಿ ನೀಡಿದರೂ ಕೆಲವೇ ತಿಂಗಳಲ್ಲಿ ಅದನ್ನು ಕೇಂದ್ರ ಸರಕಾರ ವಜಾ ಮಾಡಿ ಮಧ್ಯಾವಧಿ ಚುನಾವಣೆಗಳ ನಂತರ ಅಕಾಲಿ ಪಕ್ಷವನ್ನು ಮುರಿದು ಹಲವು ಅಕಾಲಿಗಳನ್ನು ಕಾಂಗ್ರೆಸ್ಸಿನಲ್ಲಿ ಸೇರಿಸಿಕೊಳ್ಳಲಾಯಿತು. 1959 ರಲ್ಲಿ ಕೇರಳದಲ್ಲಿ 356ನೇ ಕಲಮು ಬಳಸಿ ಇದರ ಪುನರಾವರ್ತನೆಯ ನಂತರ ಅಸಂಖ್ಯಾತ ಸಂದರ್ಭಗಳಲ್ಲಿ ಈ ಕಲಮಿನ ದುರುಪಯೋಗ ಮುಂದುವರೆಯಿತು. ಆದರೆ 1967 ರಲ್ಲಿ ಕಾಂಗ್ರೆಸ್ಸಿನ ಅಧಿಕಾರದ ಗುತ್ತೇದಾರಿಕೆ ಕೊನೆಗೊಂಡಾಗ ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳ ಪ್ರಶ್ನೆ ಮುಂಚೂಣಿಗೆ ಬಂತು.

1967 ರಲ್ಲಿ ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬಂದ ಡಿಎಂಕೆ ಸರಕಾರ ಡಾ. ರಾಜಮನ್ನಾರ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ ಈ ಸಂಬಂಧಗಳನ್ನು ಇಡಿಯಾಗಿ ಪರೀಕ್ಷಿಸಿ ರಾಜ್ಯಗಳಿಗೆ ಗರಿಷ್ಠ ಸ್ವಾಯತ್ತತೆ ದೊರೆಯುವಂತೆ ಸಂವಿಧಾನದಲ್ಲಿ ತಿದ್ದುಪಡಿಗಳನ್ನು ಸೂಚಿಸಬೇಕು ಎಂದು ಹೇಳಿತು. ಇದರೊಂದಿಗೆ ಸ್ವಲ್ಪ ಕಾಲದ ವರೆಗೆ ದಕ್ಷಿಣ ಭಾರತವನ್ನು ಪ್ರತ್ಯೇಕಿಸಿ ಒಂದು ದ್ರಾವಿಡ ಸ್ಥಾನ ರಚಿಸಬೇಕೆಂಬ ಬೇಡಿಕೆಯನ್ನು ಅದು ಮುಂದಿಟ್ಟಿತ್ತು.

ಕೇಂದ್ರ ರಾಜ್ಯ ಸಂಬಂಧಗಳಲ್ಲಿ ಒಮ್ಮತದತ್ತ

ಸಿಪಿಐ(ಎಂ) ನಿಲುವು ಇದಕ್ಕಿಂತ ಭಿನ್ನವಾಗಿತ್ತು. ಈ ಸಮಸ್ಯೆಯ ಮೂಲಕ್ಕೆ ಹೋದ ಸಿಪಿಐ(ಎಂ) ಒಂದೆಡೆ ಆಳುವ ವರ್ಗಗಳು ಸ್ವಾಯತ್ತತೆಯನ್ನು ನಿರಾಕರಿಸಿ ಕೇಂದ್ರೀಕರಣದತ್ತ ಮುಂದೊತ್ತುತ್ತಿರುವುದನ್ನು ವಿರೋಧಿಸಿತು - ಅದೇ ವೇಳೆಯಲ್ಲಿ ಪ್ರತ್ಯೇಕತಾವಾದಿ ಆಂದೋಲನಗಳನ್ನು ಕೂಡಾ ಅದು ವಿರೋಧಿಸಿತು. ಈ ದೇಶದಲ್ಲಿ ವಾಸಿಸುವ ವಿವಿಧ ದೇಶಿ ಗುಂಪುಗಳಿಗೆ ನಿಜವಾದ ಸಮಾನತೆ ಮತ್ತು ಸ್ವಾಯತ್ತತೆಯ ಆಧಾರದಲ್ಲಿ ಭಾರತ ಸಂಘ ಐಕ್ಯತೆಯನ್ನು ಕಾಪಾಡಿ ಪ್ರೋತ್ಸಾಹಿಸುವ ನೀತಿಗೆ ಪಕ್ಷ ಬದ್ಧವಾಗಿತ್ತು. ಎಲ್ಲಾ ರಂಗಗಳಲ್ಲಿ ಪರಸ್ಪರ ಸಹಕಾರ ಹಾಗೂ ಆರ್ಥಿಕವಾಗಿ ಹಿಂದುಳಿದ ಹಾಗೂ ದುರ್ಬಲ ರಾಜ್ಯಗಳಿಗೆ ಹಣಕಾಸು ಮತ್ತಿತರ ನೆರವುಗಳ ಮೂಲಕ ಅವು ತಮ್ಮ ಹಿಂದುಳಿಕೆಯನ್ನು ನಿವಾರಿಸಿಕೊಳ್ಳಲು ಸಹಾಯ ಮಾಡಬೇಕು ಎಂದು ಪಕ್ಷ ಪ್ರತಿಪಾದಿಸಿತು.

ಆದರೆ 1983 ರ ವರೆಗೂ ಈ ವಿಷಯದಲ್ಲಿ ಒಂದು ಅಖಿಲ ಭಾರತ ಕಣ್ಣೋಟವಾಗಲಿ, ಒಮ್ಮತವಾಗಲೀ ಮೂಡಿಬರಲಿಲ್ಲ, ಕೊನೆಗೂ ಆ ವರ್ಷದ ಅಕ್ಟೋಬರ್ ನಲ್ಲಿ ನಡೆದ ವಿರೋಧ ಪಕ್ಷದ ಶ್ರೀನಗರ ಸಮ್ಮೇಳನದಲ್ಲಿ ಇದು ಮೂಡಿಬಂತು. ಆರಂಭದಲ್ಲಿ ಡಿಎಂಕೆ, ಟಿಡಿಪಿ, ನ್ಯಾಶನಲ್ ಕಾನ್ಫರೆನ್ಸ್ ನಂತಹ ಪ್ರಮುಖ ಪ್ರಾದೇಶಿಕ ಪಕ್ಷಗಳು ಕೇಂದ್ರಕ್ಕೆ ಕನಿಷ್ಠ ಅಧಿಕಾರಗಳು ಕೆಲಸಗಳು …

ಪ್ರಜಾಪ್ರಭುತ್ವವಾದಿ ಶಕ್ತಿಗಳ ಮಧ್ಯಪ್ರವೇಶದಿಂದಾಗಿ ಕಾಂಗ್ರೆಸ್ಸಿನ ಅಭಿಪ್ರಾಯ ಹಾಗೂ ಮೇಲಿನ ಅಭಿಪ್ರಾಯ ಇವೆರಡನ್ನೂ ವಿರೋಧಿಸುವ ಒಂದು ಐಕ್ಯ ಅಭಿಪ್ರಾಯ ಮೂಡಿಬಂತು. ರಾಜ್ಯಗಳ ಸ್ವಾಯತ್ತತೆಯನ್ನು ಮತ್ತೆ ಸ್ಥಾಪಿಸಬೇಕು ಮತ್ತು ಬಲಪಡಿಸಬೇಕು ಹಾಗೂ ಕೇಂದ್ರ ಮತ್ತು ರಾಜ್ಯಗಳ ಅಧಿಕಾರಗಳ ನಡುವೆ ಒಂದು ಸರಿಯಾದ ಸಮತೋಲ ಸಾಧಿಸಬೇಕು, ಆ ಮೂಲಕ ದೇಶದ ಬಹು-ಧಾರ್ಮಿಕ, ಬಹು-ಭಾಷಾ ಹಾಗೂ ಬಹು ಸಾಂಸ್ಕೃತಿಕ ಸ್ವರೂಪವನ್ನು ಉಳಿಸಿಕೊಳ್ಳುವಂತಾಗಬೇಕು - ಇದೇ ಹಾಗೆ ಮೂಡಿ ಬಂದ ಒಮ್ಮತ.

ಧರ್ಮನಿರಪೇಕ್ಷತೆ

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಐಕ್ಯತೆ ವಹಿಸಿದ ಪಾತ್ರ ಹಾಗೂ ಬ್ರಿಟಿಶರು ಹೇಗೆ ಒಡೆದು ಆಳುವ ನೀತಿಯನ್ನು ಬಳಸಿದರು ಎಂಬ ಅನುಭವದ ಹಿನ್ನೆಲೆಯಲ್ಲಿ ಧರ್ಮನಿರಪೇಕ್ಷ ತತ್ವವನ್ನು ಸಂವಿಧಾನದ ಒಂದು ಮೂಲ ತತ್ವವಾಗಿ ಹೆಣೆಯುವ ಬಗ್ಗೆ ಮುಂಜಾಗ್ರತೆ ವಹಿಸಲಾಯಿತು. ಆದರೆ ಅದೇ ವೇಳೆಗೆ ಕಾಂಗ್ರೆಸ್ ಮುಖಂಡತ್ವದ ಒಂದು ವಿಭಾಗದಲ್ಲಿ ಬಲವಾಗಿದ್ದ ಹಿಂದೂ ಪುನರುತ್ಥಾನವಾದಿ ಕಣ್ಣೋಟದಿಂದಾಗಿ ಗೋರಕ್ಷಣೆಯ ವಿಷಯವನ್ನು ಕೂಡಾ ಸಂವಿಧಾನದ ನಿರ್ದೇಶಕ ಸೂತ್ರಗಳಲ್ಲಿ ಬಲವಂತದಿಂದ ಸೇರಿಸಲಾಯಿತು. ಕುರುಡು ಕಂದಾಚಾರದ ಶಕ್ತಿಗಳೊಂದಿಗೆ ಆರಂಭದಲ್ಲೇ ಮಾಡಿಕೊಂಡ ಈ ರಾಜಿ ಮುಂದಿನ ವರ್ಷಗಳಲ್ಲಿ ಅಪಾಯಕಾರಿ ಮಟ್ಟಕ್ಕೆ ಹೋಯಿತು. ರಾಜೀವ್ ಗಾಂಧಿ ಸರಕಾರ ಅಯೋಧ್ಯೆಯಲ್ಲಿ 'ಶಿಲಾನ್ಯಾಸ' ಕ್ಕೆ ಅನುಮತಿ ಕೊಟ್ಟಾಗ ಹಾಗೂ ನಂತರ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸುವಾಗ ನರಸಿಂಹರಾವ್ ಕೇಂದ್ರ ಸರಕಾರ ಮೂಕಪ್ರೇಕ್ಷಕನಾದಾಗ ಈ ರಾಜಿ ಅತ್ಯಂತ ವಿಕಟ ರೂಪ ಪಡೆಯಿತು. ಇದಲ್ಲದೆ ಪೋಲೀಸ್ ಮತ್ತು ಆಡಳಿತದಲ್ಲೂ ಮುಸ್ಲಿಂ-ವಿರೋಧಿ ಪಕ್ಷಪಾತವನ್ನು ಸಹಿಸಿಕೊಳ್ಳಲಾಗುತ್ತಿತ್ತು. ಈ ಎಲ್ಲಾ ರಾಜಿಗಳ ಸಹಜ ದುಷ್ಫಲವೆಂದರೆ ಬಿಜೆಪಿಯಂತಹ ಅತ್ಯಂತ ಕೋಮುವಾದಿ ಪಕ್ಷ ಕೇಂದ್ರದಲ್ಲಿ ಅಧಿಕಾರ ಪೀಠಕ್ಕೇರುವಂತಾಯಿತು.

ಇದಕ್ಕೆ ಹೊಂದಿಕೊಂಡಂತೆ ಇರುವ ಇನ್ನೊಂದು ಸಂಗತಿಯೆಂದರೆ ವಿಭಿನ್ನ ವಿಚ್ಛಿದ್ರಕಾರಿ, ವಿಭಜನಕಾರಿ ಹಾಗೂ ಪ್ರತ್ಯೇಕತಾವಾದಿ ಚಳುವಳಿಗಳ ಹುಟ್ಟು ಮತ್ತು ಬೆಳವಣಿಗೆ. ಇದು ಧಾರ್ಮಿಕ, ಜನಾಂಗೀಯ ಆಕಾಂಕ್ಷೆಗಳನ್ನು ಒಟ್ಟು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಒಳಗೊಳ್ಳುವಲ್ಲಿನ ವಿಫಲತೆ ಅದರೊಂದಿಗೆ ಪ್ರಾದೇಶಿಕ ಆಕಾಂಕ್ಷೆಗಳ ಉಪೇಕ್ಷೆಯ ನೇರ ಫಲ. ಪ್ರತ್ಯೇಕ ಖಾಲಿಸ್ತಾನ, ಮುಸ್ಲಿಂ ಮೂಲಭೂತವಾದ ಹಾಗೂ ಕಾಶ್ಮೀರ ಮತ್ತು ಈಶಾನ್ಯ ಭಾರತದಲ್ಲಿ ಪ್ರತ್ಯೇಕತಾವಾದಿ ಚಳುವಳಿಗಳು - ಇವೆಲ್ಲಾ ಈ ವಿಫಲತೆಯ, ಉಪೇಕ್ಷೆಯ ಫಲಿತಾಂಶಗಳು. ಅದೇ ರೀತಿ ತಮ್ಮದೇ ವಿಶಿಷ್ಟ ಭಾಷೆಗಳು, ಸಂಸ್ಕೃತಿ, ಪರಂಪರೆಗಳನ್ನು ಹೊಂದಿದ್ದು ಅವಕ್ಕೆ ಬಲವಾಗಿ ಅಂಟಿಕೊಂಡಿರುವ ಬುಡಕಟ್ಟು ಜನಗಳು ವಾಸಿಸುತ್ತಿದ್ದ ಕೆಲವು ಪ್ರದೇಶಗಳ ಪರಿವರ್ತನೆ ಮತ್ತು ವಿನಾಶದ ಫಲವಾಗಿ ಝಾರ್ಖಂಡ್, ಛತ್ತೀಸ್ ಘಡ್ ಇತ್ಯಾದಿ ಚಳುವಳಿಗಳು ಮೂಡಿಬಂದವು. ಈ ಮೇಲಿನ ಚಳುವಳಿಗಳು ಅವರಲ್ಲಿ ಉತ್ಪನ್ನವಾದ ಹೊಸ ಪ್ರಜ್ಞೆಯ ಅಭಿವ್ಯಕ್ತಿಗಳು.

ಪ್ರಸಕ್ತ ಸವಾಲುಗಳು

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೇರಿರುವುದು ಹೊಸ ಸವಾಲುಗಳನ್ನು ಒಡ್ಡಿದೆ. ಬಿಜೆಪಿ ಸಂವಿಧಾನದ ಕೆಲವು ತತ್ವಗಳಿಗಷ್ಟೇ ವಿರುದ್ಧವಾಗಿಲ್ಲ, ಸ್ವಾತಂತ್ರ್ಯ ಹೋರಾಟದಲ್ಲಿ ಮೂಡಿಬಂದ ಜನಗಳ ಆಕಾಂಕ್ಷೆಗಳಿಗೇ ಅದು ವಿರುದ್ಧವಾಗಿದೆ. ಅದರ ಇಡೀ ಕಣ್ಣೋಟವೇ ಒಂದು ಮತೀಯ ಪ್ರಭುತ್ವ ಹಾಗೂ ಹೆಚ್ಚೆಚ್ಚು ಅಧಿಕಾರಗಳ ಕೇಂದ್ರೀಕರಣದ ಪರಿಕಲ್ಪನೆಯ ಮೇಲೆ ನಿಂತಿದೆ. ಧರ್ಮನಿರಪೇಕ್ಷತೆಯ ಬಗ್ಗೆ ಅದರ ನಿಲುವೇನು ಎಂದು ಬೇರೆ ಹೇಳಬೇಕಾಗಿಲ್ಲ.

ಆದ್ದರಿಂದ ಬಿಜೆಪಿ ಸಂವಿಧಾನದ ವಿಮರ್ಶೆಯ ಮಾತಾಡುವಾಗ ಸಹಜವಾಗಿಯೇ ಸಂದೇಹಗಳು, ಭಯಗಳು ಮೂಡುತ್ತವೆ. ಸಿಪಿಐ(ಎಂ) ಸಂವಿಧಾನದ ಪ್ರಗತಿಪರ ಸ್ವರೂಪವನ್ನು ಗುರುತಿಸುತ್ತದೆ. ಏಕೆಂದರೆ ಅದು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಅಂಗೀಕರಿಸಿದ ಸಂವಿಧಾನ. ಬಿಜೆಪಿ ಬಯಸುವ ಪರಿಷ್ಕರಣೆಯನ್ನು ನಾವು ವಿರೋಧಿಸುತ್ತೇವೆ. ಏಕೆಂದರೆ ಅದು ಈ ಸಂವಿಧಾನದ ಪ್ರಗತಿಪರ ಆಶಯಗಳನ್ನೇ ನಾಶ ಮಾಡಬಯಸುತ್ತದೆ.

… ವರ್ಷಗಳಲ್ಲಿ ಸಂವಿಧಾನವನ್ನು 84 ಬಾರಿ ತಿದ್ದುಪಡಿ ಮಾಡಲಾಗಿದೆ. ಆದರೆ ಈಗ ಬಿಜೆಪಿಯ ಏಕೈಕ ಗುರಿಯೆಂದರೆ ಅಧಿಕಾರಕ್ಕೆ ಅಂಟಿಕೊಳ್ಳುವುದು.


ಸರ್ವಾಧಿಕಾರೀ ಪ್ರವೃತ್ತಿ ಇಂದು ನಿನ್ನೆಯದಲ್ಲ. ಅದಕ್ಕೆ ದೀರ್ಘ ಇತಿಹಾಸವಿದೆ. ಶ್ರೀಮತಿ ಇಂದಿರಾಗಾಂಧಿ 1975 ರಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಹೇರಿ ಮೊದಲ ಪ್ರಯತ್ನ ನಡೆಸಿದರು. ನಂತರ ರಾಜೀವ್ ಗಾಂಧಿ ಆಡಳಿತದಲ್ಲಿ ವಸಂತ ಸಾಠೆ ಹಾಗೂ ನರಸಿಂಹರಾವ್ ಆಡಳಿತದಲ್ಲಿ ಲೋಕಸಭಾಧ್ಯಕ್ಷರಾಗಿದ್ದ ಶಿವರಾಜ್ ಪಾಟೀಲ್ ಅಧ್ಯಕ್ಷೀಯ ಮಾದರಿ ಸರಕಾರ ತರಬೇಕು ಎಂಬ ಬಗ್ಗೆ ಚರ್ಚೆ ಆರಂಭಿಸಿದರು. ಮಾಜಿ ರಾಷ್ಟ್ರಪತಿ ಆರ್.ವೆಂಕಟರಾಮನ್ ಕೂಡಾ ರಾಷ್ಟ್ರೀಯ ಸರ್ಕಾರ ಇತ್ಯಾದಿ ಪ್ರಸ್ತಾವನೆಗಳ ಪ್ರತಿಪಾದಕರು. ಇವು ಪ್ರತಿಯೊಂದು ನಿರ್ದಿಷ್ಟ ಸನ್ನಿವೇಶದಲ್ಲಿನ ಪ್ರತಿಕ್ರಿಯೆಗಳು ಶ್ರೀಮತಿ ಇಂದಿರಾಗಾಂಧಿ ಅಲಹಾಬಾದ್ ಹೈಕೋರ್ಟ್‌ನ ತೀರ್ಪಿನಿಂದಾಗಿ ತನ್ನ ಆಡಳಿತಕ್ಕೆ ಬೆದರಿಕೆ ಬಂದಾಗ ಆಂತರಿಕ ತುರ್ತು ಪರಿಸ್ಥಿತಿ ಹೇರಿದರು. ರಾಜೀವ್ ಗಾಂಧಿಯವರ ಅಡಿಯಲ್ಲಿ ಕಾಂಗ್ರೆಸ್ ತನ್ನ ಹಿಡಿತ ಕಳಕೊಳ್ಳುವುದನ್ನು ಕಂಡ ವಸಂತ ಸಾಠೆ, ಅದೇ ರೀತಿ ನರಸಿಂಹ ರಾವ್ ಕಾಲದಲ್ಲಿ ಶಿವರಾಜ್ ಪಾಟೀಲ್ ಅಧ್ಯಕ್ಷೀಯ ಮಾದರಿಯ ಚರ್ಚೆ ಆರಂಭಿಸಿದರು. ಜನಗಳು ಅಪೂರ್ಣ ತೀರ್ಪುಗಳನ್ನು ನೀಡುತ್ತಿರುವ ಸಂದರ್ಭದಲ್ಲಿ ಆರ್.ವೆಂಕಟರಾಮನ್ ರವರ ಪ್ರಸ್ತಾವಗಳು ಬಂದವು. ಇವೆಲ್ಲಾ ಸರಕಾರಗಳು ಅನುಸರಿಸಿದ ನೀತಿಗಳಿಂದಾಗಿ ಜನಗಳು ಹೆಚ್ಚೆಚ್ಚು ಭ್ರಮನಿರಸನ ಗೊಳ್ಳುತ್ತಿರುವುದರಿಂದಾಗಿ ಹುಟ್ಟಿ ಬಂದ ಅಸ್ಥಿರತೆಯ ಫಲಿತಾಂಶಗಳು.

ಏಕೆ ರಾಜಕೀಯ ಅಸ್ಥಿರತೆ?

ಜನಗಳ ಭ್ರಮನಿರಸನವನ್ನು ಈ ರೀತಿ ಅಧ್ಯಕ್ಷೀಯ

ಪುಟ 9 ಕ್ಕೆ

ತರ್ಕಗಳೂ, ಕುತರ್ಕಗಳೂ



ಗಣತಂತ್ರವೆಂಬ ಪದ ಸಾಮಾನ್ಯ ಪದವೇನಲ್ಲ. ನಮ್ಮ ಪ್ರಭುತ್ವದಲ್ಲಿ ಪರಮಾಧಿಕಾರವನ್ನು ಎಲ್ಲೋ ದೂರದಲ್ಲಿರುವ ಸಾಮ್ರಾಟ ಚಲಾಯಿಸುವುದಿಲ್ಲ, ಜನತೆ ಚಲಾಯಿಸುತ್ತಾರೆ ಎಂಬುದಕ್ಕೆ ಬದ್ಧವಾಗಿರುವ ಪದ ಅದು. ಭಾರತದಲ್ಲಿ ಅಧಿಕಾರ ನಡೆಸುವವರು - ಅಧಿನಾಯಕ - ನಮ್ಮ ಇಡೀ ಜನತೆಯ ಮಹಾನ್ ಸಮೂಹ ಎಂಬುದನ್ನು ಒತ್ತಿ ಹೇಳುವ ಪದ ಅದು. ಇವರನ್ನೇ ರವೀಂದ್ರನಾಥ್ ಟಾಗೋರರು ಜನ-ಗಣ ಎಂದು ಅಮರಗೊಳಿಸಿದರು. ಈ ವಾರ್ಷಿಕೋತ್ಸವದಂದು ಈ ಘೋಷಣೆಗೆ, ಬದ್ಧತೆಗೆ ಜಯಕಾರ ಹಾಕೋಣ. ನಾವು ಅನುಭವಿಸುತ್ತಿರುವ ಅಪರೂಪದ ಸ್ಥಾನಮಾನವನ್ನು, ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವೆಂಬ ಸ್ಥಾನಮಾನವನ್ನು ಆಚರಿಸೋಣ. ಇತರೆಡೆಗಳಲ್ಲಿ ಪ್ರಜಾಪ್ರಭುತ್ವಗಳು ವಿವಿಧ ಅವಸ್ಥೆಗಳನ್ನು ಕಂಡಿರುವಾಗ, ನಾವು ಈ ಗಣತಂತ್ರದ ನಾಗರೀಕರಾಗಿರಲು ಕೃತಜ್ಞರಾಗಿರಬೇಕು. ಏಕೆಂದರೆ ಇಲ್ಲಿ ಒಬ್ಬ ವ್ಯಕ್ತಿ, ಎಷ್ಟೇ ದೊಡ್ಡವನಾಗಿದ್ದರೂ ಸಂವಿಧಾನ ಮತ್ತು ಜನತೆ ಮಾಡಿದ ಕಾನೂನುಗಳು ಅವನಿಗಿಂತಲೂ ದೊಡ್ಡದಾಗಿ ಉಳಿಯುತ್ತವೆ, ಕಾರ್ಯಾಂಗ ಸಂಸತ್ತಿಗೆ ಜವಾಬುದಾರಿಯಾಗಿರುತ್ತದೆ.

- ರಾಷ್ಟ್ರಪತಿ ಕೆ.ಆರ್.ನಾರಾಯಣನ್

(ಜನವರಿ 25, 2000 ರಂದು ದೇಶವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣದಲ್ಲಿ.)

★ ★ ★

ಕೇಂದ್ರ ಮತ್ತು ರಾಜ್ಯಗಳಲ್ಲಿ ಸ್ಥಿರತೆ ಹಾಗೂ ಅಭಿವೃದ್ಧಿ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ಒತ್ತಡದ ಸವಾಲುಗಳಿವೆ. ಈ ಉದ್ದೇಶಕ್ಕಾಗಿಯೇ ಸಂವಿಧಾನದ ಮರುವಿಮರ್ಶೆಗಾಗಿ ಒಂದು ಆಯೋಗವನ್ನು ನೇಮಿಸಲಾಗುತ್ತಿದೆ.

- ಪ್ರಧಾನ ಮಂತ್ರಿ **ವಾಜಪೇಯಿ**

(27.1.2000 ರಂದು ಸಂವಿಧಾನ ಅಂಗೀಕಾರದ 50ನೇ ವಾರ್ಷಿಕೋತ್ಸವದ ನೆನಪಿನ ವಿಶೇಷ ಸಭೆಯಲ್ಲಿ)

★ ★ ★

ಸಂವಿಧಾನವನ್ನು ಪರಿಷ್ಕರಿಸುವ ಅಥವಾ ಹೊಸದೊಂದು ಸಂವಿಧಾನವನ್ನೇ ಬರೆಯುವ ಬಗ್ಗೆ ಬಹಳ ಮಾತುಗಳು ಕೇಳಬರುತ್ತಿರುವ ಇಂದು ಸಂವಿಧಾನ ನಮ್ಮನ್ನು ವಿಫಲರನ್ನಾಗಿಸಿತೇ ಅಥವಾ ಸಂವಿಧಾನವನ್ನು ವಿಫಲಗೊಳಿಸಿದವರು ನಾವೆಯೇ ಎಂದು ನಾವು ಪರಿಶೀಲಿಸಬೇಕಾಗಿದೆ. ಡಾ.ರಾಜೇಂದ್ರ ಪ್ರಸಾದ್, ಸಂವಿಧಾನ ಸಭೆಯ ಅಧ್ಯಕ್ಷರಾಗಿ "ಚುನಾಯಿತರಾದ ಜನ ಸಚ್ಚಾರಿತ್ರ್ಯದ ಸಮರ್ಥರಾಗಿದ್ದಾರೆ ಒಂದು ದೋಷಯುಕ್ತ ಸಂವಿಧಾನದಿಂದಲೂ ಉತ್ತಮ ಕೆಲಸ ಪಡೆಯಲು ಸಮರ್ಥರಾಗಬೇಕು. ಇದು ಅವರಲ್ಲಿ ಇಲ್ಲವಾದರೆ ಸಂವಿಧಾನದಿಂದ ದೇಶಕ್ಕೇನೂ ಸಹಾಯ ಮಾಡರು" ಎಂದಿದ್ದರು. ಇವು ನಾವು ಲಕ್ಷಿಸಬೇಕಾದ ವಿವೇಚನಾಪೂರ್ಣ ಪದಗಳು ಎಂದು ನನ್ನ ನಂಬಿಕೆ............

............ಸರಕಾರದ ಸ್ವರೂಪವನ್ನು, ಸಂಸದೀಯ ಪ್ರಜಾಪ್ರಭುತ್ವ ಸ್ವರೂಪದಲ್ಲಿ ಸಂವಿಧಾನ ಕರ್ತೃಗಳು ಆಳವಾದ ವಿಚಾರ ಮತ್ತು ಚರ್ಚೆಯ ನಂತರವೇ ಆರಿಸಿದರು. ಭಾರತಕ್ಕೆ ಸಂಸದೀಯ ವ್ಯವಸ್ಥೆಯನ್ನು ಆರಿಸುವಲ್ಲಿ ಕರಡು ತಯಾರಿಕೆಯ ಸಮಿತಿ ಸ್ಥಿರತೆಗಿಂತ ಹೆಚ್ಚಾಗಿ ಹೊಣೆಗಾರಿಕೆಗೆ ಆದ್ಯತೆ ನೀಡಿತು, ಪ್ರತಿದಿನವೂ ಸರಕಾರ ಒರೆಗಲ್ಲಿಗೆ ಒಡ್ಡಲ್ಪಟ್ಟಿರುವಂತಹ ಒಂದು ವ್ಯವಸ್ಥೆಗೆ ಆದ್ಯತೆ ನೀಡಿತು ಎಂದು ಸಂವಿಧಾನ ಸಭೆಗೆ ಡಾ. ಅಂಬೇಡ್ಕರ್ ವಿವರಿಸಿದ್ದರು. ಸರಕಾರದಲ್ಲಿ ಅಸ್ಥಿರತೆಯ ನಮ್ಮ ಇತ್ತೀಚಿನ ಅನುಭವವಷ್ಟೇ ಸಂಸದೀಯ ವ್ಯವಸ್ಥೆಯನ್ನು ತ್ಯಜಿಸಿ ಅಧ್ಯಕ್ಷೀಯ ಅಥವಾ ಬೇರೆ ಯಾವುದೇ ವ್ಯವಸ್ಥೆ ಅಂಗೀಕರಿಸಬೇಕೆನ್ನುವುದಕ್ಕೆ ಸಾಕಷ್ಟು ಕಾರಣವಾಗಲಾರದು......................

.........ಒಂದು ಸರಕಾರವನ್ನು ಬದಲಿಸುವ ಸಾಧ್ಯತೆ ಮತ್ತು ಅವಕಾಶವೇ ದೀರ್ಘಾವಧಿಯಲ್ಲಿ ರಾಜಕೀಯ ವ್ಯವಸ್ಥೆಯ ಸ್ಥಿರತೆಗೆ ಪೂರಕವಾದ ಒಂದು ಅಂಶವಾಗಬಲ್ಲದು. ಏಕೆಂದರೆ ಆಗ ಜನ ತಾವು ಒಪ್ಪದ ಅಥವಾ ಸಹಿಸಲು ಕಷ್ಟವೆನಿಸುವ ಒಂದು ರಾಜಕೀಯ ಸನ್ನಿವೇಶವನ್ನು ಸಹಿಸಿಕೊಳ್ಳಲು ಮುಂದಾಗುತ್ತಾರೆ...

- ರಾಷ್ಟ್ರಪತಿ ನಾರಾಯಣನ್

(27.1.2000 ರ ಮೇಲೆ ಹೇಳಿದ ಸಭೆಯಲ್ಲಿ)

★ ★ ★

ನನ್ನ ಪ್ರಕಾರ ರಾಷ್ಟ್ರಪತಿಗಳು ತಮ್ಮ ಭಾಷಣದಲ್ಲಿ ಸಂವಿಧಾನದ ಮರುವಿಮರ್ಶೆಯ ಹಾಗೂ ಎಲ್ಲಿ ಅಗತ್ಯವೋ ಅಲ್ಲಿ ಬದಲಾವಣೆಗಳನ್ನು ಮಾಡುವ ಪ್ರಕ್ರಿಯೆಗೆ ಮಂಜೂರಾತಿ ನೀಡಿದ್ದಾರೆ.

- ಕಾನೂನು ಮಂತ್ರಿ **ರಾಮ್ ಜೇಠ್ಮಲಾನಿ,**

(28.1.2000 ರಂದು ರಾಷ್ಟ್ರಪತಿಗಳೊಂದಿಗೆ ಸರಕಾರಕ್ಕೆ ಭಿನ್ನಾಭಿಪ್ರಾಯವಿಲ್ಲ ಎಂದು ಸಾಧಿಸಲು ಪ್ರಯತ್ನಿಸುತ್ತಾ)

ನೀವೇ ನಿರ್ಧರಿಸಿ - ಬಿಜೆಪಿ ಮುಖಂಡರು ಸಂವಿಧಾನದ ಮರು ವಿಮರ್ಶೆಗಾಗಿ ತರ್ಕ ನೀಡುತ್ತಿದ್ದಾರೆಯೇ? ಅಥವಾ ಕುತರ್ಕಗಳನ್ನೋ? ಇನ್ನು ಹತ್ತು ದಿನದೊಳಗೆ ವಾಜಪೇಯಿ ಸರಕಾರ ಸಂವಿಧಾನ ಮರುವಿಮರ್ಶೆಯ ಆಯೋಗವನ್ನು ನೇಮಿಸಿಯೇ ನೇಮಿಸುತ್ತಾರಂತೆ!

❋❋

"..............ಹೋರಾಟ ಹಳ್ಳಿಗಳಿಂದ ಬೆಳೆದು ಬರಲಿ" - ಚೋಪ್ರಾ

ಪುಟ 3 ರಿಂದ

ಭೂ ಸುಧಾರಣೆಗಾಗಿ ಮತ್ತು ಅಸ್ಪೃಶ್ಯತೆ ವಿರುದ್ಧ ಏಕಕಾಲಕ್ಕೆ ಹೋರಾಟ ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಮಾತ್ರ. **ಜಾತಿ ವ್ಯವಸ್ಥೆ ವಿರುದ್ಧ ಹೋರಾಟವೆಂದರೆ.... ಹಳ್ಳಿಗಳಲ್ಲಿರುವ ಭೂಮಾಲೀಕರನ್ನು ಸೋಲಿಸಲು ಇರುವ ಹೋರಾಟ, ಭೂಮಾಲಿಕ ವ್ಯವಸ್ಥೆಯನ್ನು ನಾಶಪಡಿಸದೆ, ಭೂ ಹೋರಾಟವನ್ನು ಯಶಸ್ವಿಗೊಳಿಸದೆ, ಜಾತಿ ವಿರುದ್ಧದ ಹೋರಾಟ ಯಶಸ್ವಿಯಾಗಲಾರದು.**

ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ವಿರುದ್ಧ ಚಳುವಳಿಗಳನ್ನು ನಡೆಸಿ, ಭಾರತದ ಸಂವಿಧಾನವನ್ನು ರಚಿಸಿ, ಅಸ್ಪೃಶ್ಯತೆ ಮತ್ತು ಜಾತಿಬೇಧವನ್ನು ನಿಷೇಧಿಸಲು ಶ್ರಮಿಸಿದ ಡಾ|| ಅಂಬೇಡ್ಕರ್ ಕೂಡ ಇಂತಹ ಸಾಮಾಜಿಕ ಪಿಡುಗಿನ ವಿರುದ್ಧ ಪ್ರತ್ಯೇಕ ಹೋರಾಟ ನಡೆಸುವುದರಿಂದ ಬದಲಾವಣೆ ಸಾಧ್ಯವಿಲ್ಲವೆಂದು ಅರ್ಥಮಾಡಿಕೊಂಡರು. ಕಾನೂನುಗಳಿಂದ ಮಾತ್ರವೇ ಬದಲಾವಣೆ ಬರದು ಎಂಬುದನ್ನು ತಿಳಿದು ಈ ಕಾನೂನುಗಳ ಜಾರಿಗಾಗಿ ದೊಡ್ಡ ಹೋರಾಟ ಬೇಕಾಗುತ್ತದೆ ಎಂಬ ಅಂಶವನ್ನು ಮನಗಂಡರು. ಆದರೂ ಈ ವ್ಯವಸ್ಥೆ ಬದಲಾವಣೆಯ ಹೋರಾಟವನ್ನು ಮುಂದು ವರೆಸದೆ-1956 ರಲ್ಲಿ ಬೌದ್ಧ ಧರ್ಮಕ್ಕೆ ಮತಾಂತರ ಗೊಂಡರು. ಅನಂತರದಲ್ಲಿ **ಡಾ. ಲೋಹಿಯಾ, ಬಿಎಸ್‌ಪಿ ಚಳುವಳಿಗಳೂ ಜಾತಿ ವಿರುದ್ಧ ದನಿ ಎತ್ತಿ ಬಂದರೂ ಜಾತಿ ವ್ಯವಸ್ಥೆ ಬದಲಾವಣೆಗಾಗಿ ಹೋರಾಡದೆ ಜಾತಿ ಆಧಾರಿತ ಹೋರಾಟಗಳನ್ನು ಬೆಳೆಸಲು ಪ್ರಯತ್ನಿಸಿದ್ದಾರೆ. ಮಂಡಲದ ಹೆಸರಿನಲ್ಲಿ ಬೀದಿಗಿಳಿದ ಅವರು ಈಗ 'ಕಮಂಡಲ' ಆಗಿ ಪರಿವರ್ತಿತರಾಗಿದ್ದಾರೆ** ಎಂದು ಸುನೀತ್ ಚೋಪ್ರಾ ವಿಶ್ಲೇಷಿಸಿದರು.

ಆದ್ದರಿಂದ ಜಾತಿ ವ್ಯವಸ್ಥೆ ಆಳವಾಗಿ ಬೇರಿರುವ ಭೂಮಾಲಿಕ ವ್ಯವಸ್ಥೆಯನ್ನು ನಾಶಪಡಿಸಲೇಬೇಕು. ಅದಕ್ಕಾಗಿ ಭೂ ಹೋರಾಟಗಳು ದೊಡ್ಡ ರೀತಿಯಲ್ಲಿ ಬೆಳೆದು ಬರಬೇಕು. ಇಂತಹ ಹೋರಾಟಗಳು ಅಸ್ಪೃಶ್ಯರಿಗೆ ಉತ್ಸಾಹವನ್ನು ಮೂಡಿಸುತ್ತವೆ. ಯಾಕೆಂದರೆ ನಮ್ಮ ಸಮಾಜದಲ್ಲಿ ಅನಾದಿ ಕಾಲ ದಿಂದಲೂ ಭೂರಹಿತರು ಹರಿಜನರೇ ಆಗಿದ್ದಾರೆ.

ಆದ್ದರಿಂದ ಅಖಿಲ ಭಾರತ ಕೃಷಿಕೂಲಿಕಾರರ ಸಂಘ ಮತ್ತು ಅಖಿಲ ಭಾರತ ಕಿಸಾನ್ ಸಭಾ ಜಂಟಿಯಾಗಿ ಭೂ ಹೋರಾಟದೊಂದಿಗೆ, ಕೂಲಿ ಪ್ರಶ್ನೆ, ಹಳ್ಳಿಯ ಕೆಳವರ್ಗದ ಜನರಿಗೆ, ವಿದ್ಯುತ್, ನೀರು, ರಸ್ತೆ, ಮನೆಗಳಿಗೆ, ಕರ್ನಾಟಕದಲ್ಲಿ ವ್ಯಾಪಕ ಹೋರಾಟಗಳನ್ನು ಅಣಿನೆರಸಿ ಕೆಳವರ್ಗದ ಜನತೆ ಈ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕಿದೆ ಎಂದರು.

ಅಸ್ಪೃಶ್ಯತೆ ವಿರುದ್ಧ ಸಮರ

'ಅಮಾನವೀಯ ಪದ್ಧತಿಯ ವಿರುದ್ಧ ವಿಶಾಲ ಹೋರಾಟದ ಅಗತ್ಯ'

- ಜಿ.ಎನ್.ನಾಗರಾಜ್

ಭಾರತದ ಸಂವಿಧಾನ ರಚನೆಗೊಂಡು 50 ವರ್ಷಗಳು ತಲುಪುತ್ತಿದ್ದರೂ, ಸಂವಿಧಾನದ 17ನೇ ವಿಧಿ ದೇಶದಲ್ಲಿ ಜಾತಿಬೇಧ ಮತ್ತು ಅಸ್ಪೃಶ್ಯತೆ ನಿಷೇಧಿಸಲ್ಪಟ್ಟಿದೆ ಎಂದು ಘೋಷಿಸಿ 50 ವರ್ಷಗಳನ್ನು ಪೂರೈಸುತ್ತಿದ್ದರೂ ಕರ್ನಾಟಕದ 28 ಸಾವಿರ ಹಳ್ಳಿಗಳಲ್ಲಿ 'ಅಸ್ಪೃಶ್ಯತೆ' ಇಂದಿಗೂ ಶಾಪವಾಗಿ ಕಾಡುತ್ತಿದೆ.

ಕಳೆದ 50 ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ಹತ್ತು ಹಲವು ಸರ್ಕಾರಗಳು 'ಸಂವಿಧಾನ ಬದ್ಧವಾಗಿ' ಆಡಳಿತ ಮಾಡಿದ್ದರೂ 'ಅಸ್ಪೃಶ್ಯತೆ' ನಿವಾರಣೆಗೆ ಏನು ಮಾಡಿವೆ ಎಂಬುದನ್ನು ವಿಶ್ಲೇಷಿಸಬೇಕಿದೆ. ಎರಡು ಸಹಸ್ರಮಾನಗಳನ್ನು ಪೂರೈಸಿ 3ನೇ ಸಹಸ್ರಮಾನಕ್ಕೆ ದೊಡ್ಡ ಕಳಂಕವನ್ನು ಹೊತ್ತು ಮುನ್ನಡೆಯುತ್ತಿರುವುದು ಅತ್ಯಂತ ದುರ್ದೈವದ ಸಂಗತಿ.

ಆದಿಕವಿ ನಾಡೋಜ ಪಂಪನಿಂದ ಹಿಡಿದು ವೀರಶೈವ ಚಳುವಳಿಯ ಶಿವಶರಣರೆಲ್ಲರೂ ಈ ಜಾತಿಪದ್ಧತಿ ವಿರುದ್ಧ ದೃಢನಿಲುವು ತಳೆದು ಕರ್ನಾಟಕದಾದ್ಯಂತ ಪ್ರಚಾರ ನೀಡಿ 12ನೇ ಶತಮಾನದಲ್ಲಿ 'ಕಲ್ಯಾಣ'ದಲ್ಲಿ ಮಧುವರಸ-ಹರಳಯ್ಯ ಮಕ್ಕಳ ಮದುವೆ ಮಾಡುವ ಮೂಲಕ ಜಾತಿ ವಿರೋಧಿ ಹೋರಾಟದ ತಳಹದಿ ಹಾಕಿದ್ದಾರೆ.

ಕುಲ-ಕುಲ-ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯೇನಾದರೂ ಬಲ್ಲಿರಾ? ಎಂದ ಕನಕದಾಸರು, ಆತ್ಮ ಯಾವ ಕುಲ-ಜೀವ ಯಾವ ಕುಲ - ಎಂದ ಹರಿದಾಸ ಪರಂಪರೆ ನಮ್ಮದು. ಇಂತಹ ಎಲ್ಲ ಜಾತಿ ವಿರೋಧಿ ಹೋರಾಟದ ಪರಂಪರೆಯನ್ನು ಮುಂದುವರೆಸಲು ಎಲ್ಲಾ ಪ್ರಗತಿಪರರು ಒಂದಾಗಲು ಈ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಈ ಮೂಲಕ ಅಮಾನವೀಯ ಜಾತಿ ಪದ್ಧತಿಯ ವಿರುದ್ಧ ವಿಶಾಲ ಹೋರಾಟದ ಅಗತ್ಯ ಮತ್ತು ಅನಿವಾರ್ಯತೆ ನಮ್ಮೆದುರಿದೆ.

ಪ್ರತಿನಿಧಿ ಅಧಿವೇಶನದಲ್ಲಿನ ಅಭಿಪ್ರಾಯಗಳು...........

● ಕಾರ್ಯಾಗಾರಕ್ಕೆ ಮಾತ್ರ 'ಅಸ್ಪೃಶ್ಯತೆ ವಿರೋಧಿ ಹೋರಾಟ' ಸೀಮಿತವಾಗಿರದೆ ಇದನ್ನು ಕಾರ್ಯಕ್ರಮದ ರೂಪದಲ್ಲಿ ಜನರೆಡೆಗೆ ಕೊಂಡೊಯ್ಯಬೇಕು. ಮತ್ತು ಇಂತಹ ಅನಿಷ್ಟ ಪದ್ಧತಿ ಹೋಗಲಾಡಿಸಲು ಪಣ ತೊಡಬೇಕು.

ಪಿ.ಜಗನ್ನಾಥ್
ಎಐಕೆಎಸ್, ರಾಜ್ಯ ಕಾರ್ಯದರ್ಶಿ

● ಶಿಕ್ಷಣದ ವಿವಿಧ ಹಂತಗಳಲ್ಲಿ ದಲಿತ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಉನ್ನತ ಶಿಕ್ಷಣದಲ್ಲಿ ಅಂಕ ನೀಡುವಲ್ಲಿ ಕೂಡ ತಾರತಮ್ಯ ನಡೆಯುತ್ತಿದೆ.

ಆರ್.ರಾಮಕೃಷ್ಣ,
ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ

● 16ಲಕ್ಷ ದಲಿತ ಕ್ರೈಸ್ತರ ಪೈಕಿ 10 ಲಕ್ಷ ಜನರು ಕೂಲಿಕಾರರಾಗಿ ಬದುಕುತ್ತಿದ್ದಾರೆ. ಇವರಿಗೆ ಸ್ವಂತ ಭೂಮಿ ಇಲ್ಲ.... ಹಸಿರು ಕಾರ್ಡುಗಳಿಂದಲೂ ವಂಚಿತರಾಗಿದ್ದಾರೆ.

ಜೋಸೆಫ್,
ದಲಿತ ಕ್ರಿಶ್ಚಿಯನ್ ಸಂಘಟನೆ ಮುಖಂಡರು.

● ನಮ್ಮ ಮಹಿಳಾ ಸಮ್ಮೇಳನಕ್ಕೆ ಬಂದಿದ್ದ ವೆಂಕಟಲಕ್ಷ್ಮಿ ಊಟ ಬಡಿಸುತ್ತಾ ಅಳ್ತಾ ಇದ್ದರು. ಯಾಕೆ ಎಂದು ಕೇಳಿದೆ. "ನಮ್ಮ ಊರಲ್ಲಿ ನನ್ನ ಕೈಯಿಂದ ಯಾರೂ ನೀರು ಕುಡಿಯುವುದಿಲ್ಲ, ಇಂದು ನನ್ನ ಕೈಯಿಂದ ಇಷ್ಟೊಂದು ಜನ ಊಟ ಮಾಡಿದ್ದಕ್ಕೆ ಸಂತೋಷ ತಡೆಯಲಾರದೆ ಕಣ್ಣೀರು ಬಂತು" ಎಂದರು. ಜನಸಮೂಹದ ಜೊತೆ ಕೆಲಸ ಮಾಡಿ ಇಂತಹ ಅನುಭವ ಕಂಡುಕೊಳ್ಳಲು ಸಾಧ್ಯ.

ಎನ್.ಪ್ರಭಾ,
ಎಐಜೆಎಂಎಸ್ ಜಿಲ್ಲಾ ಕಾರ್ಯದರ್ಶಿ

● ಕರ್ನಾಟಕದಲ್ಲಿ 16 ಸಾವಿರ ದೇವದಾಸಿ ಮಹಿಳೆಯರಿದ್ದು ಅದರಲ್ಲಿ ಶೇ 90 ಕ್ಕಿಂತ ಹೆಚ್ಚು ಹೊಲೆಯರು ಮತ್ತು ಮಾದಿಗ ಜನಾಂಗಕ್ಕೆ ಸೇರಿದ ಮಹಿಳೆಯರಿದ್ದಾರೆ. ಅತ್ಯಾಚಾರ, ಬಲತ್ಕಾರ ಇವರ ಮೇಲೆ ಹೆಚ್ಚು.

- ಎಸ್.ವರಲಕ್ಷ್ಮಿ,
ಅಂಗನವಾಡಿ ನೌಕರರ ಸಂಘದ ರಾಜ್ಯ ಮುಖಂಡರು.

● ಅಸ್ಪೃಶ್ಯತೆ ವಿರುದ್ಧದ ಹೋರಾಟಕ್ಕಿಂತ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ಮುಖ್ಯವಾಗಬೇಕು. ಯಾಕೆಂದರೆ ಜಾತಿ ವ್ಯವಸ್ಥೆ ಸಮಾಜಕ್ಕಂಟಿದ ರೋಗ, ಅಸ್ಪೃಶ್ಯತೆ ರೋಗದ ಲಕ್ಷಣ ಮಾತ್ರ.

ಮಂಗ್ಳೂರು ವಿಜಯ
ಸಾಹಿತಿ, ಡಿ.ಎಸ್.ಎಸ್. ಕಾರ್ಯಕರ್ತರು.

● ಲಕ್ಕುಂಡಿಯಲ್ಲಿ ದಲಿತ ಮಹಿಳೆಯರನ್ನು ದೇಹ ಮಾರಾಟಕ್ಕೆ ದೂಡಿದಾಗ ನಾವು ಪ್ರತಿಭಟನೆ ಮಾಡಿದ್ದೇವೆ.

- ಭೀಮಸಿ ಕಲಾದಗಿ,
ರೈತಮುಖಂಡರು, ಬಿಜಾಪುರ

● ಅಸ್ಪೃಶ್ಯತೆ ನಿವಾರಣೆಗೆ ಜಾತಿ ನಿರ್ಮೂಲನೆ ಒಂದೇ ಮಾರ್ಗ.

ಲಕ್ಷ್ಮಿ ನಾರಾಯಣ,
ಡಿ.ಎಸ್.ಎಸ್. ಮುಖಂಡರು.

● ವಿವಿಧ ರಾಜಕೀಯ ಪಕ್ಷಗಳು ಗೊಂಡ, ಕುರುಬ, ಕೋಲಿ ಇತ್ಯಾದಿ ಜಾತಿ ಸಂಘಟನೆಗಳನ್ನು ಹುಟ್ಟುಹಾಕಿ ಸಮಾಜದ ಶಾಂತಿಯನ್ನು ಕದಡಿಸುತ್ತಿವೆ. ಇಂತಹ ಸಂದರ್ಭದಲ್ಲಿ ಎಲ್ಲಾ ಜಾತೀಯ ರೈತರನ್ನು ಒಗ್ಗೂಡಿಸಿ ರೈತ ಸಂಘವನ್ನು ಕಟ್ಟಬೇಕು.

- ಎಲ್.ಎಸ್.ನಾಯಕ್,
ರೈತಮುಖಂಡರು, ಬೆಳಗಾಂ.

● ಉ.ಕನ್ನಡ ಜಿಲ್ಲೆಯಲ್ಲಿ ದಲಿತರ ಮೇಲಿನ ದೌರ್ಜನ್ಯ ಕಡಿಮೆಯಿದ್ದರೂ, 'ಕರ್ಣನ ಹುಟ್ಟು' - 'ಶಂಬುಕನ ತಪಸ್ಸು' ಪರಂಪರೆ ಇದೆ.

ವಿಠ್ಠಲ ಭಂಡಾರಿ, ಹೊನ್ನಾವರ

● ಪ್ರಗತಿಪರ ಸಂಘಟನೆಗಳ ಶಕ್ತಿ ಕಡಿಮೆಯಾದಾಗ ದೌರ್ಜನ್ಯಗಳು ಇನ್ನೂ ಹೆಚ್ಚಾಗುತ್ತವೆ.

ಶರ್ಫುದ್ದೀನ್.ಹೆಚ್.
ಡಿವೈಎಫ್‌ಐ ಅಧ್ಯಕ್ಷ, ರಾಯಚೂರು.

ಪುಟ 9 ಕ್ಕೆ

'ಅಸ್ಪೃಶ್ಯತೆ ಮತ್ತು ದೌರ್ಜನ್ಯ ವಿರೋಧಿ' ಹೋರಾಟ ಸಮಿತಿ ರಚನೆ

ಸಮಾಜದಲ್ಲಿ ಬೇರುಬಿಟ್ಟಿರುವ ಅಸ್ಪೃಶ್ಯತೆ ಮತ್ತು ಜಾತಿ ವ್ಯವಸ್ಥೆಯ ವಿರುದ್ಧದ ಹೋರಾಟವನ್ನು ಕರ್ನಾಟಕ ರಾಜ್ಯದಾದ್ಯಂತ ವಿಶಾಲ ತಳಹದಿಯಲ್ಲಿ ಕೊಂಡೊಯ್ಯಲು ಸಹಾಯಕವಾಗುವಂತೆ ಮತ್ತು ರಾಜ್ಯ ಕಾರ್ಯಾಗಾರ ಅಂಗೀಕರಿಸಿರುವ ಅಸ್ಪೃಶ್ಯತೆ ವಿರೋಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ನಾಡಿನ ಪ್ರಗತಿಪರ ಚಿಂತಕರು, ವಿವಿಧ ಜನವಿಭಾಗದ ಮಧ್ಯೆ ಕೆಲಸಮಾಡುತ್ತಿರುವ ಪ್ರತಿನಿಧಿಗಳನ್ನೊಳಗೊಂಡು 'ಹೋರಾಟ ಸಮಿತಿಯನ್ನು ಸಮಾವೇಶ ಆಯ್ಕೆ ಮಾಡಿದ್ದು, ಸಂಚಾಲಕರಾಗಿ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಎನ್.ನಾಗರಾಜ್ ಆಯ್ಕೆಯಾದರು.

ಸಮಿತಿಯಲ್ಲಿರುವ ಇತರರೆಂದರೆ......

ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ್ ಪಾಟೀಲ್, ಎಲ್.ಹನುಮಂತಯ್ಯ, ಮಂಗ್ಳೂರು ವಿಜಯ, ಲಕ್ಷ್ಮಿ ನಾರಾಯಣ (ಡಿಎಸ್‌ಎಸ್), ಜೋಸೆಫ್(ದಲಿತ ಕ್ರಿಶ್ಚಿಯನ್), ಚಂದ್ರಪ್ಪ ಹೊಸ್ಕೇರಾ(ಎಐಎಡಬ್ಲುಎ), ಮಾರುತಿ ಮಾನ್ಪಡೆ, ಪಿ.ಜಗನ್ನಾಥ್, ಜಿ.ಸಿ.ಬಯ್ಯಾರೆಡ್ಡಿ(ಎಐಕೆಎಸ್), ಎಸ್.ವೈ.ಗುರುಶಾಂತ್, ಶಾಂತಾರಾಂ ನಾಯಕ್, ಕೆ.ಮಹಾಂತೇಶ್ (ಡಿವೈಎಫ್ಐ), ಕೆ.ಎನ್.ಉಮೇಶ್, ಆರ್.ರಾಮಕೃಷ್ಣ, ಕೆ.ಎಸ್.ಲಕ್ಷ್ಮಿ (ಎಸ್‌ಎಫ್‌ಐ), ಕೆ.ನೀಲಾ, ವರಲಕ್ಷ್ಮಿ, ಎನ್.ಪ್ರಭಾ(ಎಐಜೆಎಂಎಸ್), ಹೆಚ್.ಎನ್.ನಾಗಮೋಹನ ದಾಸ್, ಶಿವಾರೆಡ್ಡಿ (ವಕೀಲ ಸಂಘ) ವಿಠ್ಠಲ ಭಂಡಾರಿ(ಚಿಂತನ ಪ್ರಕಾಶನ) ಹಾಗೂ ಕೆ.ಪ್ರಕಾಶ್. ಇನ್ನೂ ಸಮಿತಿಯನ್ನು ವಿಶಾಲಗೊಳಿಸುವುದು ಮತ್ತು ಇತರೆ ಸಂಚಾಲಕರನ್ನು ಆಯ್ಕೆ ಮಾಡಲು ನಿರ್ಧರಿಸಲಾಗಿದೆ.

ಭಾರತೀಯ ವಿಜ್ಞಾನಿಗಳ ಮೇಲೆ ಅಮೆರಿಕದ ದೌರ್ಜನ್ಯ: ಖಂಡನಾ ನಿರ್ಣಯ

ಅಮೆರಿಕಾದ 'ಚಿಕಾಗೋ' ನಗರದಲ್ಲಿ ಇತ್ತೀಚೆಗೆ ಭಾರತದಿಂದ ಕಾರ್ಯನಿಮಿತ್ತ ಹೋಗಿದ್ದ, ಸುಮಾರು 40 ಜನ ಭಾರತೀಯ ಕಂಪ್ಯೂಟರ್ ಸಾಫ್ಟ್‌ವೇರ್ ತಂತ್ರಜ್ಞರು ಮತ್ತು ವಿಜ್ಞಾನಿಗಳ ಮೇಲೆ ಅಮೆರಿಕನ್ ಪೋಲೀಸರು ಕೈಕೋಳ ತೊಡಿಸಿ, ಅವರೆಲ್ಲರನ್ನು ಬೀದಿಯಲ್ಲಿ ಮೆರವಣಿಗೆ ಮಾಡಿರುವ ಅಮಾನವೀಯ ಕೃತ್ಯವನ್ನು 'ಅಸ್ಪೃಶ್ಯತೆ ಮತ್ತು ದೌರ್ಜನ್ಯ ವಿರುದ್ಧದ ಸಮಾವೇಶ' ವು ತೀವ್ರವಾಗಿ ಖಂಡಿಸಿದೆ.

ಸುನೀತ್ ಚೋಪ್ರಾರವರು ಮಂಡಿಸಿದ ಈ ನಿರ್ಣಯವನ್ನು ಸಮಾವೇಶವು ಒಕ್ಕೊರಲಿನಿಂದ ಅಂಗೀಕರಿಸಿ, ಭಾರತ ಸರ್ಕಾರ, ಅಮೆರಿಕದ ಈ ಹೇಯ ಘಟನೆಯನ್ನು ಖಂಡಿಸಿ ತೀವ್ರ ಪ್ರತಿಕ್ರಿಯೆ ನೀಡಬೇಕೆಂದು ಸಮಾವೇಶವು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿತು. ಪೋಲೀಸ್ ದೌರ್ಜನ್ಯಕ್ಕೆ ಒಳಗಾಗಿರುವ ವಿಜ್ಞಾನಿಗಳಲ್ಲಿ ಇಬ್ಬರು ಗರ್ಭಿಣಿ ಸ್ತ್ರೀಯರಿದ್ದಾರೆ ಮತ್ತು ಹಲವು ಜನರು ಬೆಂಗಳೂರಿನವರಾಗಿದ್ದಾರೆ.

ಅಧಿವೇಶನದಲ್ಲಿನ ಅಭಿಪ್ರಾಯಗಳು...........

● ಕಮ್ಯುನಿಸ್ಟರು ಮತ್ತು ದಲಿತ ಸಂಘಟನೆಗಳು ಸೇರಿ ಜಾತಿ, ಅಸ್ಪೃಶ್ಯತೆ ವಿರುದ್ಧ ಹೋರಾಡಬೇಕು.

- ನಾಗರಾಜ್, ಕೃಷಿ ಕೂಲಿಕಾರರ ಮುಖಂಡ, ಬಾಗೇಪಲ್ಲಿ, ಕೋಲಾರ

● ದ.ಕ. ಜಿಲ್ಲೆಯಲ್ಲಿ ಶಿಕ್ಷಣದ ಪ್ರಭಾವ ಹೆಚ್ಚಾಗಿರುವುದರಿಂದ ಅಸ್ಪೃಶ್ಯತೆ ಆಚರಣೆ ಕಡಿಮೆ ಇದೆ.

- ಚಂದ್ರಶೇಖರ್ ಸಿ., ಡಿವೈಎಫ್‌ಐ ಅಧ್ಯಕ್ಷರು, ಕುಂದಾಪುರ

● ಅಸ್ಪೃಶ್ಯತೆ ವಿರುದ್ಧ ನೇರ ಸಂಘರ್ಷಕ್ಕಿಳಿಯಲು ಸಂಘಟನೆ, ಬಲಗೊಳಿಸಬೇಕು.

ಡಿ.ಪ್ರಕಾಶ್, ಮಳವಳ್ಳಿ

● ದಲಿತ ಯುವಕರ ಮಧ್ಯದಲ್ಲಿ ಪುಟಿದೇಳುವ ಜಾಗೃತಿಯನ್ನು ಪ್ರಗತಿಪರ ಚಿಂತನೆಯತ್ತ ಕೊಂಡೊಯ್ಯಬೇಕು.

- ಕೆ. ಮಹಾಂತೇಶ್, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ.

● ಶೋಷಿತ ಜನರು ಸಂಘಟನೆಗೊಂಡಾಗ ಜಾತಿ ವ್ಯವಸ್ಥೆ ನಿರ್ಮೂಲನೆಗೊಳ್ಳಲು ಸಾಧ್ಯ.

ಲಿಂಗಪ್ಪ ಹಣವಾಳ್ ಕೃಷಿ ಕೂಲಿಕಾರರ ಸಂಘ.

● ದುಡ್ಡು ತೆಗೆದು ಕೊಳ್ಳುವಾಗ ಜಾತಿ ಇಲ್ಲ. ಆದರೆ ಕೃಷಿಕೂಲಿಕಾರರ ಸಂಘ ಹೋಟೆಲ್ ಗ್ಲಾಸು ಮುಟ್ಟಿದರೆ ಅಸ್ಪೃಶ್ಯತೆ ಬರುವುದು.

- ಹಕ್ಕಲಗೌಡ ಪಾಟೀಲ್ ಕೂಲಿಕಾರರ ಸಂಘದ ಅಧ್ಯಕ್ಷರು, ಹಾನಗಲ್

ಸಮಾವೇಶ ಅಂಗೀಕರಿಸಿದ ಮುಂದಿನ ಕಾರ್ಯಯೋಜನೆ

- ಜನವರಿ 26 ಗಣರಾಜ್ಯೋತ್ಸವ ದಿನದಿಂದ ಮಾರ್ಚ್ 31 ವರೆಗೆ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಸಮಾವೇಶಗಳನ್ನು ಸಂಘಟಿಸುವುದು.
- ಏಪ್ರಿಲ್ ತಿಂಗಳಿಂದ ಆಗಸ್ಟ್ ವರೆಗೆ ಪ್ರಚಾರಾಂದೋಲನ, ಪ್ರಾಂತ ರೈತ ಸಂಘ ಮತ್ತು ಕೃಷಿ ಕೂಲಿಕಾರರ ಸಂಘ ನೇತೃತ್ವದಲ್ಲಿ ಹಳ್ಳಿಗಳಲ್ಲಿ ಸೈಕಲ್ ಜಾಥಾ ಮತ್ತು ಕಾಲು ಜಾಥಾಗಳನ್ನು ನಡೆಸುವುದು.
- ವಿದ್ಯಾರ್ಥಿ - ಯುವಜನರಿಂದ ಸಾಂಸ್ಕೃತಿಕ ಜಾಥಾಗಳನ್ನು ನಡೆಸುವುದು, ವಿದ್ಯಾರ್ಥಿಗಳ ಮಧ್ಯೆ ಹಾಡುಗಳು, ಪ್ರಬಂಧ ಸ್ಪರ್ಧೆ, ಕಾಲೇಜುಗಳಲ್ಲಿ/ಹಾಸ್ಟಲ್‌ಗಳಲ್ಲಿ ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು. ಅಸ್ಪೃಶ್ಯತೆ ಕುರಿತು - ಉಪನ್ಯಾಸ ಸಂಘಟಿಸುವುದು.
- ಎಲ್ಲಾ ಸಾಮೂಹಿಕ ಸಂಘಟನೆಗಳು ಜಾಥಾಗಳ ಸಂದರ್ಭಗಳಲ್ಲಿ ಸಮೀಕ್ಷೆ ನಡೆಸುವುದು.
- ದಲಿತ ಕಾಲೋನಿಗಳಲ್ಲಿ ಸಭೆಗಳನ್ನು ನಡೆಸುವುದು.
- ಜಾತಿ ವಿರೋಧಿ, ಅಸ್ಪೃಶ್ಯತೆ ಕುರಿತು ಹಾಡುಗಳು, ಸಂಗ್ರಹ.
- ಅಸ್ಪೃಶ್ಯತೆ ಬೆಳವಣಿಗೆ, ಆಚರಣೆ ಕುರಿತಂತೆ ಕರಪತ್ರ, ಸಾಹಿತ್ಯ ಪ್ರಕಟಣೆ.

ಅಸ್ಪೃಶ್ಯತೆಯ ಕಟ್ಟುಪಾಡುಗಳು-ಹಾಗೂ ಆಚರಣೆಗೂ ಮತ್ತು ಭೂಮಿಯ ಒಡೆತನದಿಂದ ಅವರನ್ನು ದೂರವಿಡುವುದಕ್ಕು ನಿಕಟಸಂಬಂಧವಿದೆ. ಮನುಸ್ಮೃತಿಯ ಶ್ಲೋಕಗಳು ಇದನ್ನು ಬಯಲುಗೊಳಿಸುತ್ತವೆ. ಇಂತಹ ಸ್ಮೃತಿಯನ್ನು ಸಂವಿಧಾನದ ಸ್ಥಾನದಲ್ಲಿ ತರಲು ಸಂಘ ಪರಿವಾರದ ಹವಣಿಸುತ್ತಿದೆ. ಜಾಗತೀಕರಣ-ಉದಾರೀಕರಣವು ತುಳಿತಕ್ಕೊಳಗಾದ ಜನತೆಗೆ ಇನ್ನೂ ಅಧಿಕ ಸಂಕಷ್ಟ ತರುತ್ತಿದ್ದು, ಅಸ್ಪೃಶ್ಯತೆ ಹೊಸ ಸ್ವರೂಪ ಪಡೆಯುತ್ತಿದೆ. ದಲಿತರ ಮೇಲೆ ದೌರ್ಜನ್ಯ ನಡೆದಾಗಲೆಲ್ಲ - ಕರ್ನಾಟಕದ ಪ್ರಜಾಸತ್ತಾತ್ಮಕ ಜನತೆ ಸುಮ್ಮನೆ ಕುಳಿತಿಲ್ಲ ತೀವ್ರ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ಹಲವು ಉದಾಹರಣೆಗಳಿವೆ. ಆದರೂ ಇದು ಸಾಲದು. ಜಾತಿಯ ದಬ್ಬಾಳಿಕೆಗಳಿಂದ ತುಳಿತಕ್ಕೊಳಗಾದ ದಲಿತರಿಗೆ ರಕ್ಷಣೆಗಾಗಿ ಚಳುವಳಿ ಮಾಡಬೇಕಾಗಿದೆ. ಅದಕ್ಕೆ ಸಿದ್ಧತೆಯಾಗಿ ಈ ಸಮಾವೇಶ ನಡೆದಿದೆ. ಎಲ್ಲಾ ಜನವಿಭಾಗಗಳನ್ನು ಒಳಗೊಂಡು ವಿಶಾಲ ನೆಲೆಯಲ್ಲಿ ಅಸ್ಪೃಶ್ಯತೆ ನಿವಾರಣೆಯೊಂದಿಗೆ ದಿನನಿತ್ಯ ಬಾಧಿಸುವ ಜೀವನದ ಜ್ವಲಂತ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಡೋಣ. ಇದು ಹಂತಹಂತವಾಗಿ ನಡೆಯಬೇಕಾದ ಚಳುವಳಿ.

- ಎಸ್.ವೈ.ಗುರುಶಾಂತ್, ಸಮಾವೇಶದ ಅಧ್ಯಕ್ಷೀಯ ಭಾಷಣ ಮಾಡುತ್ತ.

● ಗ್ರಾಮ ಪಂಚಾಯ್ತಿ ಅಧ್ಯಕ್ಷನಾಗಿದ್ದರೂ 'ದಲಿತ' ಎಂಬ ಒಂದೇ ಕಾರಣಕ್ಕಾಗಿ, ಚಹಾದಂಗಡಿಯಲ್ಲಿ ಚಹಾವನ್ನು, ಹಜಾಮತಿ ಅಂಗಡಿಯಲ್ಲಿ ಕ್ಷೌರ ಮಾಡಲು ನಿರಾಕರಿಸಿದರು, 'ಅಸ್ಪೃಶ್ಯತೆ' ಆಚರಣೆಗೆ ಸಂಬಂಧಿಸಿ ಶಾಲಾ ಪಠ್ಯಕ್ರಮದಲ್ಲಿ ಸೇರಿಸಬೇಕು.

ಅಬ್ದುಲ್ ರಜಾಕ್ ಮುಲ್ಲಾ, ಗ್ರಾಂ.ಪಂಚಾಯ್ತಿ ನೌಕರರ ಸಂಘ, ಗದಗ

● ಕೃಷಿಕೂಲಿಕಾರರ ಸಂಘವು ನಡೆಸುವ 'ಅಸ್ಪೃಶ್ಯತೆ ಮತ್ತು ದೌರ್ಜನ್ಯ' ವಿರೋಧಿ ಹೋರಾಟಕ್ಕೆ ಎಲ್ಲಾ ಪ್ರಗತಿಪರರು ಧ್ವನಿಗೂಡಿಸಬೇಕು.

- ಚಂದ್ರಪ್ಪ ಹೊಸ್ಕೇರಾ, ರಾಜ್ಯ ಪ್ರಧಾನ ಕಾರ್ಯದರ್ಶಿ, ಕೂಲಿಕಾರರ ಸಂಘ

ಸಂದೇಶ

"ಅಸ್ಪೃಶ್ಯತೆ ಎನ್ನುವುದು ಗುಲಾಮಗಿರಿಗಿಂತ ಹೆಚ್ಚು ಕ್ರೌರ್ಯವಾದುದು. ಧರ್ಮದ ಹೆಸರಿನಲ್ಲಿ ಅದು ಇಷ್ಟು ದಟ್ಟವಾಗಿ ನಡೆದುಕೊಂಡು ಬಂದ ಅಮಾನವೀಯ ಸಂಗತಿ. ಆದರೆ ಅದರ ಅಡಿಯಲ್ಲಿ ಆರ್ಥಿಕ ಕ್ರೌರ್ಯ ಇದೆ ಎಂಬುದನ್ನು ಮರೆಯುವಂತಿಲ್ಲ. ಹಾಗೆ ಕೇಳಿದರೆ ಅದು ಕೇವಲ ವರ್ಗ ಸಮರಕ್ಕೆ ಆಹುತಿಯಾಗುತ್ತದೆಂಬಷ್ಟು ಸರಳವೂ ಅಲ್ಲ, ಅದರೂ ಅದುವರ್ಗ ಸಮರದ ಒಟ್ಟೊಟ್ಟಿಗೆ ನಡೆದಾಗ ಮಾತ್ರ ಅದರಿಂದ ಬಿಡುಗಡೆ ಸಾಧ್ಯ" ಆ ದಿಸೆಯಲ್ಲಿ ಈ ಸಮಾವೇಶ ಒಂದು ಚಾರಿತ್ರಿಕ ಹೆಜ್ಜೆ ಕೂಡ ಆಗಿದೆ.

ಡಾ।। ಆರ್.ವಿ.ಭಂಡಾರಿ, ಬಂಡಾಯಿ ಸಾಹಿತಿ, ಕೆರೆಕೋಣ (ಉ.ಕ)

ಭಾರತದ ಸಂವಿಧಾನ - ಸಾಧಿಸಬೇಕಾದ ಆಶಯಗಳು

ಪುಟ 7 ರಿಂದ

ಮಾದರಿಯಲ್ಲಿರುವಂತೆ ಒಬ್ಬ ವ್ಯಕ್ತಿಯಲ್ಲಿ ಹೆಚ್ಚು ಅಧಿಕಾರಗಳನ್ನು ಪೇರಿಸುವುದರಿಂದ ನಿವಾರಿಸಲು ಸಾಧ್ಯವಿಲ್ಲ. ಅಧ್ಯಕ್ಷೀಯ ಮಾದರಿಗೆ ಬದಲಾಯಿಸಬೇಕು ಎನ್ನುವವರು ಶ್ರೀಲಂಕಾದ ಉದಾಹರಣೆ ನೋಡಬೇಕಷ್ಟೆ. ಅಲ್ಲಿ ಸಂಸದೀಯ ಮಾದರಿಯನ್ನು ಅಧ್ಯಕ್ಷ ಮಾದರಿಗೆ ಬದಲಾಯಿಸಲಾಯಿತು. ಈಗ ಶ್ರೀಮತಿ ಚಂದ್ರಿಕಾ ಕುಮಾರತುಂಗರ ನೇತೃತ್ವದ ಮೈತ್ರಿಕೂಟ ಮತ್ತೆ ಸಂಸದೀಯ ಪದ್ಧತಿಗೆ ಬದಲಾಯಿಸುವ ವಚನ ಕೊಟ್ಟಿದೆ. ಕಳೆದ 50 ವರ್ಷಗಳ ಸಂಸದೀಯ ವ್ಯವಸ್ಥೆಯ ಅನುಭವ ತೋರಿಸಿಕೊಟ್ಟಿರುವ ಸಂಗತಿಯೆಂದರೆ ಸಂಸದೀಯ ವ್ಯವಸ್ಥೆಯೇ ಅತ್ಯಂತ ಸೂಕ್ತ ವ್ಯವಸ್ಥೆ, ವಿಶೇಷವಾಗಿ ಭಾರತದಂತಹ ಬಹುಭಾಷಾ ಹಾಗೂ ವೈವಿಧ್ಯಮಯ ದೇಶಕ್ಕೆ.

ರಾಜಕೀಯ ಸ್ಥಿರತೆಯ ಮಾತಾಡುವವರು ಅದನ್ನು ಕೇವಲ ಸರಕಾರಗಳ ಸ್ಥಿರತೆಯಾಗಿ ಕಾಣುತ್ತಾರೆ. ಇದು ವಾಸ್ತವವಾಗಿ ಒಂದು ವರ್ಗ ಬೇಡಿಕೆ. ದೊಡ್ಡ ಬಂಡವಾಳಶಾಹಿಗಳು ತಮ್ಮ ಆಳ್ವಿಕೆಯನ್ನು ಶಾಶ್ವತಗೊಳಿಸಲು ಮುಂದಿಟ್ಟಿರುವ ಬೇಡಿಕೆ. ಇಂತಹ ಸ್ಥಿರತೆ ಬಯಸುವವರಿಗೆ ಜನಗಳ ಹಕ್ಕುಗಳು ಅಥವಾ ಹಿತಾಸಕ್ತಿಗಳ ಬಗ್ಗೆ ಏನೇನೂ ಕಾಳಜಿಯಿಲ್ಲ. ಇತ್ತೀಚೆಗೆ ಬಿಜೆಪಿ ಲೋಕಸಭೆಗೆ ಕಡ್ಡಾಯ ಐದು ವರ್ಷಗಳ ಅವಧಿಯಿರುವಂತೆ ಮಾಡಬೇಕುಎಂದೂ ಮಾತಾಡಲಾರಭಿಸಿದೆ. ಅಂದರೆ ಯಾವುದೇ ಪಕ್ಷ ಅಥವಾ ಮೈತ್ರಿಕೂಟ ವಿಫಲವಾದರೂ, ಬಹುಮತ ಪಡೆಯದಿದ್ದರೂ ಒಂದು ಸರಕಾರ ರಚಿಸಲೇ ಬೇಕು ಎಂದರ್ಥ. ಇದರ ಪರಿಣಾಮವೆಂದರೆ ಕೇವಲ ಲೋಕಸಭೆಯ ಅವಧಿಯನ್ನು ಪೂರೈಸುವುದಕ್ಕಾಗಿಯೇ ಪರಸ್ಪರ ಏನೇನೂ ಹೊಂದಾಣಿಕೆಯಿಲ್ಲದ ಪಕ್ಷಗಳು ಹೇಗೋ ಒಂದು ಸಮಿಶ್ರ ಸರಕಾರ ರಚಿಸಬೇಕು. ಸೈದ್ಧಾಂತಿಕ ಸಾಮ್ಯತೆ, ಸಮಾನ ಕಾರ್ಯಕ್ರಮ ಅಥವಾ ಯಾವುದೇ ರಾಜಕೀಯ ನೈತಿಕತೆಯೂ ಇಲ್ಲದ ಇಂತಹ ಸರಕಾರಗಳಿಂದ ಸಮಯಸಾಧಕರಿಗೆ, ಅಧಿಕಾರದಾಹಿಗಳಿಗೆ ಮಾತ್ರ ಪ್ರಯೋಜನ. ಜನಗಳನ್ನು ಬದಿಗೊತ್ತಿ ಅವರು ತಮ್ಮ ಆಸೆಗಳನ್ನು ಪೂರೈಸಿಕೊಳ್ಳಬಹುದು.

ಇದರ ಬದಲು ಎಡಪಕ್ಷಗಳು ಅನುಪಾತಿಕ

ಹಕ್ಕುಗಳಿಂದ ಜನರನ್ನು ವಂಚಿಲಾಗದು.

ಅಧ್ಯಕ್ಷೀಯ ಮಾದರಿ ಸಂವಿಧಾನದ ವಿಮರ್ಶೆ ಅಥವಾ ಸಂಸತ್ತಿಗೆ ಐದು ವರ್ಷಗಳ ನಿಗದಿತ ಅವಧಿ ಇತ್ಯಾದಿಗಳನ್ನು ಪ್ರತಿಪಾದಿಸುವವರೆಲ್ಲರ ಮನಸ್ಸಿನಲ್ಲಿರುವುದು ಒಂದೇ ಸಂಗತಿ - ಬೂರ್ಜ್ವಾ-ಭೂಮಾಲಕ ವರ್ಗದ ಆಳ್ವಿಕೆಯನ್ನು ಶಾಶ್ವತಗೊಳಿಸುವುದು ಹೇಗೆ ಎಂದು. ಆದರೆ ಜನತೆ ವ್ಯವಸ್ಥೆಯ ಬಗ್ಗೆ ಭ್ರಮನಿರಸನವನ್ನು ವ್ಯಕ್ತಗೊಳಿಸಿಲ್ಲ, ಆಳುವ ವರ್ಗಗಳು ಅನುಸರಿಸುತ್ತಿರುವ ಧೋರಣೆಗಳ ವಿರುದ್ಧವಷ್ಟೇ ತಮ್ಮ ಕ್ರೋಧವನ್ನು ಅಭಿವ್ಯಕ್ತಗೊಳಿಸಿದ್ದಾರೆ. ಚುನಾವಣೆಗಳು ಐದು ವರ್ಷಗಳಿಗೊಮ್ಮೆಯಾಗಲಿ ಅಥವಾ ಮೊದಲಾಗಲೀ ನಡೆದರೂ ದುಡಿಯುವ ಮತ್ತು ಶ್ರಮಜೀವಿ ಜನಸಮೂಹಗಳು ಸದಾ ದೊಡ್ಡ ಸಂಖ್ಯೆಯಲ್ಲಿ ಬಂದು ಮತ ಚಲಾಯಿಸಿದ್ದಾರೆ. ಇದು ಸಂಸದೀಯ ವ್ಯವಸ್ಥೆಯಲ್ಲಿ ಜನಗಳ ನಂಬಿಕೆಯನ್ನು ಸೂಚಿಸುತ್ತದೆ.

ಈಗಿನ ಅಸ್ಥಿರತೆ ಈಗಿನ ಸನ್ನಿವೇಶ ಹಾಗೂ ಆಡಳಿತದ ಬಗ್ಗೆ ಜನಗಳಲ್ಲಿ ಹೆಚ್ಚುತ್ತಿರುವ ಭ್ರಮನಿರಸನವನ್ನು ಬಿಂಬಿಸುತ್ತದಷ್ಟೆ. ಸರಕಾರವನ್ನು ಸಂಸದೀಯ ಹತೋಟಿಯಿಂದ 'ಮುಕ್ತ' ಗೊಳಿಸಿ ಸರಕಾರದ ಸ್ಥಿರತೆಯನ್ನು ಹೇರಿದರೆ ಅದರ ಫಲಿತಾಂಶ ವಿನಾಶಕಾರಿಯಾಗಿರುತ್ತದೆ. ಇದರರ್ಥ ಸರಕಾರವನ್ನು ಜನಗಳ ಅಶಯದಿಂದ 'ಮುಕ್ತ'ಗೊಳಿಸುವುದು ಎಂದು. ಅಂದರೆ ಒಂದು ಸರ್ವಾಧಿಕಾರಿ ವ್ಯವಸ್ಥೆಯನ್ನು ಹೇರುವುದೆಂದು ಅರ್ಥ. ಇದೇ ಸಂವಿಧಾನ ನಿಜವಾಗಿ ಭಾರತದಲ್ಲಿ ಒಂದು ದೀರ್ಘ ಅವಧಿಯ ರಾಜಕೀಯ ಸ್ಥಿರತೆಯಿರುವಂತೆ ಮಾಡಿತ್ತು ಎಂಬುದನ್ನು ಗಮನದಲ್ಲಿಟ್ಟುಕೊಳ್ಳುವುದು ಅಗತ್ಯ.

ನಮ್ಮ ಸಂವಿಧಾನ ಕರ್ತೃಗಳು ನೇರವಾಗಿ ಅಧ್ಯಕ್ಷರನ್ನು ಚುನಾಯಿಸುವ ಅಮೆರಿಕನ್ ವ್ಯವಸ್ಥೆಯನ್ನು, ಮಧ್ಯಮ ಮಾರ್ಗವಾದ ಫ್ರೆಂಚ್ ವ್ಯವಸ್ಥೆಯನ್ನು ವಿವರವಾಗಿ ಪರಿಶೀಲಿಸಿದ ನಂತರವೇ ಸ್ವತಂತ್ರ ಭಾರತಕ್ಕೆ ಸಂಸದೀಯ ವ್ಯವಸ್ಥೆಯೇ ಒಳ್ಳೆಯದು ಎಂದು ತೀರ್ಮಾನಿಸಿದರು. ಅಧ್ಯಕ್ಷೀಯ ಮಾದರಿಗೆ ಬದಲಿಸಬೇಕೆಂದು ವಾದಿಸುವವರು ನಾವು ಈ ಸಂಗತಿಯನ್ನು ಮರೆಯಬೇಕು ಎಂದು ಬಯಸುತ್ತಾರೆ. ಏಕೆ ಸಂವಿಧಾನ ರಚನಕಾರರು ಈ ತೀರ್ಮಾನಕ್ಕೆ ಬಂದರು? ಏಕೆಂದರೆ

ರಾಷ್ಟ್ರಪ್ರಭುತ್ವದ ಸಂಘಟನೆಯೊಂದಿಗೆ ತಕ್ಕ ಮಟ್ಟಿನ ಸ್ವಯಂ-ಆಡಳಿತದ ಹತೋಟಿ ಚಲಾಯಿಸಿಲು ಚುನಾಯಿತ ಸರಕಾರ ಏಕಮಾತ್ರ ಸಾರ್ವಜನಿಕ ಸಾಧನ" ಎಂದು ಅವರು ಯೋಚಿಸಿದರು. ಸಂಸದೀಯ ಪ್ರಜಾಪ್ರಭುತ್ವ ಅಧಿಕಾರದ ದುರುಪಯೋಗದ ಮೇಲೆ ಹಲವೆಡೆ ನಿಯಂತ್ರಣಗಳನ್ನು ಇಟ್ಟು ಜವಾಬುದಾರಿಕೆ ಇರುವಂತೆ ಮಾಡುತ್ತದೆ; ಆದರೆ ಅಧ್ಯಕ್ಷೀಯ ಮಾದರಿ ಅಧ್ಯಕ್ಷೀಯ ಸರ್ವಾಧಿಕಾರದತ್ತ ಸಾಗುತ್ತದೆ ಎಂಬುದು ಈಗ ಎಲ್ಲರಿಗೂ ತಿಳಿದಿರುವ ಸಂಗತಿ. ಒಬ್ಬ ಅಧ್ಯಕ್ಷ ಏನೇನು ಮಾಡಲು ಸಾಧ್ಯ ಎಂಬುದಕ್ಕೆ ನಿಕ್ಸನ್‌ರ ವಾಟರ್‌ಗೇಟ್ ಹಗರಣ ಒಂದು ಉದಾಹರಣೆ.

ವಸಾಹತುಶಾಹಿಯಿಂದ ವಿಮೋಚನೆಯ ನಂತರ ಅಧ್ಯಕ್ಷೀಯ ಮಾದರಿ ಅನುಸರಿಸಿದ ಇತರ ದೇಶಗಳ ಅನುಭವವೇನು? ಪೆರೋನ್, ಬಾಟಿಸ್ಟಾ, ಮಾರ್ಕೋಸ್, ಬಾವೋ ದಾಯ್, ಅಥವಾ ನಮ್ಮನೆರೆ ದೇಶಗಳಲ್ಲಿನ ಅಯ್ಯೂಬ್, ಭುಟ್ಟೋ, ಝಿಯಾ, ಎರ್ಷಾದ್, ಜಯವರ್ಧನೆ ಇತ್ಯಾದಿಗಳು ಅಧ್ಯಕ್ಷೀಯ ಮಾದರಿಯ ಕೆಲವು ಉದಾಹರಣೆಗಳು. ಈ ಹಿಂದೆಯೇ ಹೇಳಿದಂತೆ ಶ್ರೀಲಂಕಾ ಈ ಎರಡು ವ್ಯವಸ್ಥೆಗಳ ನಡುವೆ ಅಲೆದಾಡುತ್ತಿದೆ. ಆದರೆ ಅದರ ಪ್ರಮುಖ ಸಮಸ್ಯೆಗಳಿಗೆ ಇದರಿಂದ ಪರಿಹಾರ ಸಿಕ್ಕಿಲ್ಲ.

ಒಂದು ಪರಿಣಾಮಕಾರಿ, ಬಲಿಷ್ಠ ಪ್ರಭುತ್ವ ಬೇಕು ಎನ್ನುವ ಮಾತನ್ನು ಜನಗಳಲ್ಲಿ ಗೊಂದಲ ಹುಟ್ಟಿಸಲೆಂದೇ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ವಾಸ್ತವ ಸಂಗತಿಯೆಂದರೆ ಭಾರತದಲ್ಲಿ ಪ್ರಧಾನಮಂತ್ರಿಗಳಿಗೆ ಅಧಿಕಾರಗಳ ಅಭಾವವೇನೂ ಇಲ್ಲ. ಅವರು ಹೆಚ್ಚೆಚ್ಚು ಅಧಿಕಾರಗಳನ್ನು ಕೇಂದ್ರೀಕರಿಸಿಕೊಂಡಿದ್ದಾರೆ. ನಿಜವಾಗಿ ಇದು ನಮ್ಮ ಸಂವಿಧಾನದ ಯೋಜನೆಯಲ್ಲಿಯೇ ಅಡಕವಾಗಿರುವ ಕೇಂದ್ರೀಕರಣವನ್ನು ಇನ್ನಷ್ಟು ಹೆಚ್ಚಿಸಿದೆ. ನೇರವಾಗಿ ಚುನಾಯಿತ ಅಧ್ಯಕ್ಷನಿಂದ ಅಧ್ಯಕ್ಷೀಯ ವ್ಯವಸ್ಥೆ ಒಟ್ಟುಗೂಡಿರುವ ಘಟಕಗಳ ಸ್ವಂತಿಕೆ ಮತ್ತು ಸಮಾನತೆಯನ್ನು ಮಾನ್ಯ ಮಾಡುವ ನಮ್ಮ ರೀತಿಯ ಒಕ್ಕೂಟ ರಚನೆಯ ಬುಡಕ್ಕೇ ಕೊಡಲಿಯೇಟು ಹಾಕುತ್ತದೆ.

ಬಿಜೆಪಿಯ ಮಾತೃ ಸಂಸ್ಥೆ ಆರ್.ಎಸ್.ಎಸ್. ನ ಸಂಘಟನಾ ವ್ಯವಸ್ಥೆಯೂ "ಒಬ್ಬ ಮುಖಂಡ", ಇತರರೆಲ್ಲರೂ ಆತನ ಅನುಯಾಯಿಗಳು ಎಂಬ

ಇರಬೇಕೆಂಬುದು ಸದಾ ಆರ್.ಎಸ್.ಎಸ್. ನ ಬಯಕೆ. ಆದ್ದರಿಂದ ಅಧ್ಯಕ್ಷೀಯ ವ್ಯವಸ್ಥೆ ಹಾಗೂ ಸಂಸತ್ತಿನ ನಿಯಂತ್ರಣಗಳನ್ನು ಕಡಿಮೆ ಮಾಡುವುದು ಆ ದಿಕ್ಕಿನಲ್ಲಿರುವ ಕ್ರಮಗಳು ಎಂದು ಅದು ಪರಿಗಣಿಸುತ್ತದೆ. ಈಗಿನ ಅಸ್ಥಿರತೆಯಿಂದ ಆಳುವ ವರ್ಗಗಳಿಗೆ ಆಗಿರುವ ಭಯದ ಪ್ರಯೋಜನ ಪಡೆದು ಈ ಅಜೆಂಡಾವನ್ನು ತೂರಿಸಬೇಕು ಎಂಬುದು ಬಿಜೆಪಿಯ ಹುನ್ನಾರ. ಆದರೆ ಇಷ್ಟಕ್ಕೇ ಇದು ಕೊನೆಗೊಳುವುದಿಲ್ಲ. ಅಲ್ಪಸಂಖ್ಯಾತರನ್ನು ಅಲ್ಪಸಂಖ್ಯಾತರೆಂದು ಗುರುತಿಸಬಾರದೆಂಬ ತನ್ನ ಮಾತೃ ಸಂಸ್ಥೆಯ ಬೇಡಿಕೆಗೆ ಬಿಜೆಪಿ ಕೂಡಾ ದನಿಗೂಡಿಸುತ್ತದೆ. ಇವೆಲ್ಲಾ ಈಗಲೇ ಎನ್.ಡಿ.ಎ.ದ ಅಜೆಂಡಾದಲ್ಲಿ ಬರಲಿಕ್ಕಿಲ್ಲ. ಆದರೆ ಆ ದಿಕ್ಕಿನಲ್ಲಿ ಚಲಿಸಲು ಕೂಡಾ ಬಾಗಿಲು ತೆರೆಯುತ್ತದೆ. ಇದು ನಮ್ಮ ಒಕ್ಕೂಟ ರಚನೆಗೆ ಒಂದು ಗಂಭೀರ ಬೆದರಿಕೆ. ಭಾರತೀಯ ಸಂವಿಧಾನದ ಮರು ವಿಮರ್ಶೆಗೆ ಒಂದು ಸಮಿತಿಯನ್ನು ಹೇರುವ ಬಿಜೆಪಿಯ ಪ್ರಯತ್ನಗಳನ್ನು ನೋಡಿದರೆ ಅದು ಬಹಳ ತರಾತುರಿಯಲ್ಲಿದ್ದಂತಿದೆ. ಈ ಮರುವಿಮರ್ಶೆ ಸಮಿತಿಯಲ್ಲಿ ಆರ್.ಎಸ್.ಎಸ್. ಕಣ್ಣೋಟಕ್ಕೆ ಬದ್ಧರಾದವರನ್ನೇ ತುಂಬಿಸಲು ಅವರು ವಿಶೇಷ ನಿಗಾ ವಹಿಸುತ್ತಿದ್ದಾರೆ.

ಆದರೆ ಈಗ ಆಗಬೇಕಾದ್ದು ಸಂವಿಧಾನದ ವಿಮರ್ಶೆಯಲ್ಲ, ಅಧಿಕಾರಗಳ ವಿಕೇಂದ್ರೀಕರಣ - ಕೇಂದ್ರದಿಂದ ರಾಜ್ಯಗಳಿಗೆ ಮತ್ತು ರಾಜ್ಯಗಳಿಂದ ಕೆಳಗೆ ಪಂಚಾಯತು ಮಟ್ಟದವರೆಗೂ. ಆದರೆ ಧರ್ಮನಿರಪೇಕ್ಷ ಆಧಾರವನ್ನು ಹಾಗೂ ಒಕ್ಕೂಟ ರಚನೆಯನ್ನು ಬಲಪಡಿಸಲು, ಅಲ್ಪಸಂಖ್ಯಾತರ ಹಕ್ಕುಗಳ ಹಾಗೂ ಅವರ ಸಂಸ್ಥೆಗಳ ರಕ್ಷಣೆಗೆ, ರಾಜ್ಯಗಳಿಗೆ ಹೆಚ್ಚು ಅಧಿಕಾರಗಳ ವಿಕೇಂದ್ರೀಕರಣಕ್ಕೆ ಹಾಗೂ ಕೇಂದ್ರದ ನಿಧಿಗಳ ಹೆಚ್ಚು ನ್ಯಾಯಪೂರ್ಣ ವಿತರಣೆಗೆ ಬದಲಾವಣೆಗಳೂ ಬೇಕು.

"ಸಂವಿಧಾನ ಎಷ್ಟೇ ಉತ್ತಮವಾಗಿರಲಿ, ಅದನ್ನು ನಿರ್ವಹಿಸುವವರು ಕೆಟ್ಟವರಾಗಿದ್ದರೆ ಅದೂ ಕೆಟ್ಟದಾಗಿ ಬಿಡುವುದು ಖಂಡಿತ" ಇದು ಸಂವಿಧಾನ ಸಭೆಯಲ್ಲಿ ಕರಡು ಸಂವಿಧಾನವನ್ನು ಅಂಗೀಕಾರಕ್ಕೆ ಮಂಡಿಸುತ್ತಾ ಡಾ. ಅಂಬೇಡ್ಕರ್ ನೀಡಿದ್ದ ಎಚ್ಚರಿಕೆ.

ನಮ್ಮ ಗಣತಂತ್ರದ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಾವು ಈ ಎಚ್ಚರಿಕೆಯನ್ನು ನೆನಪಿಸಿಕೊಳ್ಳಬೇಕು. ಈಗ ಆಗಬೇಕಾಗಿರುವುದು ಸಂವಿಧಾನದ ನಿರ್ದೇಶಕ ಸೂತ್ರಗಳಲ್ಲಿ ಪ್ರತಿಷ್ಠಾಪಿಸಿದ್ದನ್ನು ಈಡೇರಿಸಲು, ಪಡೆಯಲು ಒಂದು ನಿರಂತರವಾದ ಒಟ್ಟು ಪ್ರಯತ್ನ.

ಅವಸಾನದ ಅಂಚಿನಲ್ಲಿ ಕೋಲಾರ ಚಿನ್ನದ ಗಣಿ



ಚಿತ್ರ-ಲೇಖನ: ಬಿ.ರಾಜಶೇಖರ ಮೂರ್ತಿ

ರಾಜ್ಯದ ಪ್ರಮುಖ ಸಾರ್ವಜನಿಕ ವಲಯ ಗಳಲ್ಲೊಂದಾದ ಕೆ.ಜಿ.ಎಫ್. ಚಿನ್ನದ ಗಣಿಯನ್ನು (ಯೂರೋಪಿಯನ್ನರ ಅಧೀನದಲ್ಲಿದ್ದಾಗ) ಗುಲಾಮರ ರೀತಿಯಲ್ಲಿ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿದ್ದವರಾಗಿದ್ದರೂ ಯಾವ ಅಡೆ-ತಡೆ ಇಲ್ಲದೆ ಕಾರ್ಖಾನೆಯನ್ನು ನಡೆಸುತ್ತಿದ್ದರು. ಲಂಡನ್ನಿನಿಂದ ಬಂದು 1880ರಲ್ಲಿ "ಜಾನ್ ಟೈಲರ್" ಕಂಪನಿ ಎಂಬ ಹೆಸರಿನಲ್ಲಿ ಪ್ರಾರಂಭಿಸಿದ್ದ ಕಾರ್ಖಾನೆ 1956ರವರೆಗೂ ಅವರ ಅಧೀನದಲ್ಲೇ ಇತ್ತು. ಆಗಿನಿಂದ ಕಾರ್ಮಿಕರು ಸಾವಿರಾರು ಟನ್ನುಗಟ್ಟಲೇ ಚಿನ್ನ ತೆಗೆಯುತ್ತಿದ್ದರು. ಒಂದು ಶತಮಾನಕ್ಕಿಂತ ಹೆಚ್ಚಿನ ಕಾಲ ಲಕ್ಷಾಂತರ ಜನರ ಜೀವನ ಸಾಗಿಸುತ್ತಿದ್ದ ಚಿನ್ನದ ಗಣಿ ಕಾರ್ಖಾನೆ. ಅಧಿಕಾರಿಗಳು, ಕಛೇರಿಯ ಸಿಬ್ಬಂಧಿಗಳು ಅಲ್ಲದೇ ಬರೀ ಕಾರ್ಮಿಕರೇ 28 ಸಾವಿರವಿದ್ದ ಕಾರ್ಖಾನೆ ಇಂದು ಕೇವಲ 4270 ಕಾರ್ಮಿಕರನ್ನು ಉಳಿಸಿಕೊಳ್ಳಲಾಗದೆ ಸಂಪೂರ್ಣವಾಗಿ ಮುಚ್ಚಲು ಕೇಂದ್ರ, ರಾಜ್ಯ ಸರ್ಕಾರಗಳು ತೀರ್ಮಾನಿಸುತ್ತಿರುವುದು ದುರಂತಮಯವಾಗಿದೆ.

ಯುರೋಪಿಯನ್ನರು ಪ್ರಾರಂಭದಲ್ಲಿ ಕಾರ್ಮಿಕರನ್ನು ಗುಲಾಮಗಿರಿಯ ರೀತಿಯಲ್ಲಿ ದಿನಕ್ಕೆ 12 ರಿಂದ 15 ಘಂಟೆಗಳ ಕಾಲ ದುಡಿಸಿಕೊಳ್ಳುತ್ತಿದ್ದರು. ಯಾವುದೇ ರೀತಿಯ ರಕ್ಷಾ ಕವಚಗಳಿಲ್ಲದೆ ವೈಜ್ಞಾನಿಕ ತಂತ್ರಜ್ಞಾನಗಳಿಲ್ಲದೆ, ಸಾವಿರಾರು ಅಡಿಗಳಷ್ಟು ಆಳದ ಭೂಗರ್ಭಕ್ಕಿಳಿದು ಚಿನ್ನ ತೆಗೆಯುತ್ತಿದ್ದರು. ಕಾರ್ಮಿಕರು ದುಡಿಯಲು ನಿರಾಕರಿಸಿದರೆ ಅವರನ್ನು ಶಿಕ್ಷಿಸಿ ದುಡಿಸುತ್ತಿದ್ದರು. ಹಲವು ದಶಕಗಳ ಕಾಲ ದುಡಿಮೆಗೆ ತಕ್ಕ ಕೂಲಿ ಕೊಡದೆ ಕೋಟಿಗಟ್ಟಲೆ ಹಣ ಲೂಟಿ ಮಾಡ ತೊಡಗಿದರು. 28 ಸಾವಿರ ಕಾರ್ಮಿಕರ ನಿತ್ಯ ದುಡಿಮೆಗೆ ತಕ್ಕ ಕೂಲಿ ಇಲ್ಲದೆ ಕುಟುಂಬಗಳೆಲ್ಲಾ ಹಸಿವಿನಿಂದ ಬಳಲುತ್ತಿದ್ದರು. ಒಟ್ಟಾರೆ 4000ಕ್ಕಿಂತ ಹೆಚ್ಚಿನ ಕಾರ್ಮಿಕರು ಅಪಘಾತಗಳಿಂದ ಸಿಲಿಕಾನ್ ಎಂಬ ಮಣ್ಣಿನ ಗಾಳಿಯಿಂದ ಶ್ವಾಸಕೋಶದಲ್ಲಿ ರಂಧ್ರಗಳಾಗಿ ಪ್ರಾಣನೀಗಿದ್ದಾರೆ.

ಕೆಳಗೆ ಹೋದರೆ ಹೆಣ ಮೇಲೆ ಬಂದರೆ ಹಣ

ಭೂಮಿಯೊಳಗೆ ಗಾಳಿ ಹೊಗುತ್ತಿದ್ದುದರಿಂದ ಭೂಮಿಯ ಆಳದ ಬಂಡೆಗಳು ಸಿಡಿದು ಕಾರ್ಮಿಕರ ಪ್ರಾಣ, ಕೈಕಾಲು, ಕಣ್ಣು, ಅಗಾಂಗಗಳನ್ನು ಕಳೆದುಕೊಳ್ಳುತ್ತಿದ್ದರು. ಹೀಗೆ ಹಲವಾರು ಕಾರ್ಮಿಕರ ಸಾವು ನೋವುಗಳಿಂದ ಬಲಿತ ಆಡಳಿತವರ್ಗ ಲಾಭಗಳಿಸ ತೊಡಗಿತು. ಆಳುವ ವರ್ಗದ ಶೋಷಣೆಯಲ್ಲಿ 1880 ರಿಂದ 1932ವರೆಗೆ, ಗುಲಾಮಗಿರಿಯಲ್ಲಿ, ಸಾಯುತ್ತಾ ದುಡಿಯುತ್ತಾ, ಶೋಚನೀಯ ಸ್ಥಿತಿಯಲ್ಲಿ ಬಂದ ಕಾರ್ಮಿಕರು 1932ರ ನಂತರದಲ್ಲಿ ಪ್ರತಿಭಟಿಸ ತೊಡಗಿದರು. ಕಾರ್ಮಿಕರು ತಮ್ಮ ಮೂಲಭೂತ ಸೌಕರ್ಯಗಳ ಬೇಡಿಕೆಗಳಿಗಾಗಿ ಒತ್ತಾಯಿಸ ತೊಡಗಿದರು. ದಬ್ಬಾಳಿಕೆ ಸಹಿಸಲಾಗದೆ ಪ್ರತಿಭಟಿಸಿದ ಕಾರ್ಮಿಕರನ್ನು ಕೆಲಸದಿಂದ ವಜಾಮಾಡುತ್ತಿದ್ದರು. ಸ್ವಾತಂತ್ರ್ಯ ಚಳುವಳಿಯ ಪ್ರಭಾವಿತರಾಗಿ ಕಾರ್ಮಿಕರು ಸಂಘಟನೆಗೊಳ್ಳುತ್ತಾ ಪ್ರತಿರೋಧಿಸುತ್ತಿದ್ದರು. ಈ ಎಲ್ಲಾ ಶೋಷಣೆಗಳ ವಿರುದ್ಧ ಸಿಡಿದೆದ್ದ ಕಾರ್ಮಿಕ ವರ್ಗ ಸಂಘಟನೆಯಾಗಿ ಬೆಳೆದು ಆಡಳಿತವರ್ಗದ ವಿರುದ್ಧ ತೀವ್ರತರ ಮುಷ್ಕರ ಹೂಡಲು ಪ್ರಾರಂಭಿಸಿದರು. ಕಾರ್ಮಿಕರ ಕನಿಷ್ಟ ಕೂಲಿಯನ್ನು ನಿಗದಿಪಡಿಸದೆ



ಪ್ರಪಂಚದಲ್ಲೇ ಮೊದಲಸ್ಥಾನ ಪಡೆದಿದ್ದ, 15 ಸಾವಿರಕ್ಕಿಂತಲೂ ಆಳವಾದ 'ಚಾಂಪಿಯನ್ ಶಾಫ್ಟ್'(ಗಣಿ) ಇಂದು ಸ್ಥಗಿತಗೊಂಡಿದೆ)

ಆಡಳಿತವರ್ಗ ಕಾರ್ಖಾನೆ ನಷ್ಟದಿಂದ ನಡೆಯುತ್ತಿದೆಯೆಂದು ಮೊದಲ ಬಾರಿಗೆ ಉರಿಗಾಂ ಚಿನ್ನದ ಗಣಿಯನ್ನು (ಶಾಫ್ಟ್) ಯುರೋಪಿಯನ್ನರು ಮುಚ್ಚಿದರು.

ಹಂತ ಹಂತವಾಗಿ ಪ್ರತಿಭಟಿಸಿದ ಕಾರ್ಮಿಕರನ್ನು ಅವಮಾನತ್ತು ಮಾಡುವುದು, ಶಾಫ್ಟ್‌ಗಳನ್ನು ಮುಚ್ಚುವುದನ್ನು ಮುಂದುವರೆಸಿಕೊಂಡು ಬಂದರು. ಕಾರ್ಮಿಕ ಸಂಘಟನೆಗಳು ಶಾಫ್ಟ್‌ಗಳನ್ನು ಮುಚ್ಚುವುದರ ವಿರುದ್ಧ ಪ್ರತಿಭಟನೆ ಮಾಡಿದರು. ಈ ಹಂತದಲ್ಲಿ ಗಣಿಯನ್ನು ಕೇಂದ್ರ ಸರ್ಕಾರ ಯುರೋಪಿಯನ್ನರಿಂದ ತನ್ನ ವಶಕ್ಕೆ ತೆಗೆದುಕೊಂಡಿತು. (1953ರಲ್ಲಿ) ಆದರೆ [illegible]

ಬಹು ಭಾಗದ ಚಿನ್ನವನ್ನು ವಿದೇಶಿ ಕಂಪನಿ ಲೂಟಿ ಹೊಡೆದಾಗಿತ್ತು.

ಕೇಂದ್ರ ಸರ್ಕಾರಿ ವಲಯಕ್ಕೆ ಸೇರಿದ ಮೇಲೆ ಯುರೋಪಿಯನ್ನರು ಪ್ರಾರಂಭಿಸಿದ್ದ ಕೆಲವು ಗಣಿಗಳಲ್ಲಿ, ಚಿನ್ನ ಸಿಗದೆ ಇದ್ದಾಗ ಬೇರೆ ಗಣಿಗಳನ್ನು (ಶಾಫ್ಟ್) ಪ್ರಾರಂಭಿಸಲಿಲ್ಲ. 1986ರಲ್ಲಿ ರಾಜೀವ್ ಗಾಂಧಿ ಪ್ರಧಾನ ಮಂತ್ರಿಯಾಗಿದ್ದಾಗ ಮಂತ್ರಿಮಂಡಲದಲ್ಲಿ ನಿರ್ಣಯಿಸಿ ನಷ್ಟದಲ್ಲಿರುವ ಕಂಪನಿಗಳನ್ನು ಮುಚ್ಚಬೇಕು ಎಂದು ಘೋಷಿಸಿದರು. ಹೀಗೆ ಆಡಳಿತಕ್ಕೆ ಬಂದ ಯಾವ ಸರ್ಕಾರವೂ ಚಿನ್ನದ ಗಣಿ ಕೈಗಾರಿಕೆಯ ಉಳಿವಿನ ಕಡೆ ಗಮನ ಹರಿಸಲಿಲ್ಲ. ಪಿ.ವಿ. ನರಸಿಂಹರಾವ್ ಪ್ರಧಾನಿಯಾಗಿದ್ದಾಗ ಕೈಗಾರಿಕಾ ಮಂತ್ರಿ ಶಾಖೆಗೆ ಸಂಬಂಧಿಸಿದ ಸಂಸದೀಯ ಸಮಿತಿಯಲ್ಲಿ ಚರ್ಚಿಸಿ ಕಾರ್ಖಾನೆಯ ಒಟ್ಟು ಮೌಲ್ಯ ತೀರಿಹೋಗಿದೆ. ಆದ್ದರಿಂದ ಮುಚ್ಚುವುದರ ಬಗ್ಗೆ ಪರಿಶೀಲಿಸಲೆಂದು ಬಿ.ಐ.ಎಫ್.ಆರ್. (Bord of Industrial & financial Reconstruction) ಗೆ ಒಪ್ಪಿಸಲಾಯಿತು. ಬಿ.ಐ.ಎಫ್.ಆರ್. ಪರಿಶೀಲಿಸಿ ಮೈಸೂರು ಮೈನ್ಸ್ (ಚಿನ್ನದಗಣಿ) ಒಂದರಲ್ಲಿ ಮಾತ್ರ ಉತ್ಪನ್ನ ಕಡಿಮೆಯಾಗಿದೆ. ಉಳಿದ ಶಾಫ್ಟ್‌ಗಳನ್ನು ಲಾಭದಾಯಕವಾಗಿ ನಡೆಸಬಹುದು ಮತ್ತು ಹೊಸ ಶಾಫ್ಟ್‌ಗಳನ್ನು ಪ್ರಾರಂಭಿಸಬಹುದೆಂಬ ಅಭಿಪ್ರಾಯಗಳು ಬಂದರೂ ಸರ್ಕಾರ ಗಮನ ಹರಿಸಲಿಲ್ಲ. ಕೇಂದ್ರ ಸರ್ಕಾರ ಕೆ.ಜಿ.ಎಫ್. ಕಾರ್ಖಾನೆಯನ್ನು ಮುಂದುವರೆಸಿಕೊಂಡು ಹೋಗಲು ಬಂಡವಾಳವನ್ನು ಒದಗಿಸುತ್ತಿಲ್ಲ.

ಚಿನ್ನದ ಗಣಿಗಳಲ್ಲಿ ಚಿನ್ನ ತೆಗೆಯುವ ಕೆಲಸ ಸ್ಥಗಿತವಾಗತೊಡಗಿದಾಗ ಗಣಿಗಳಲ್ಲಿ ನೀರು ತುಂಬತೊಡಗುತ್ತದೆ. ನೀರನ್ನು ಗಣಿಗಳಲ್ಲಿ ತುಂಬಲು ಬಿಡಬಾರದು. ಆದರೆ ಆಡಳಿತ ವರ್ಗ ಗಣಿಗಳು ಉಪಯೋಗವಿಲ್ಲವೆಂದು ಸಾಬೀತು ಪಡಿಸಲು ಗಣಿಗಳಲ್ಲಿ ನೀರು ತುಂಬುತ್ತಿದ್ದರೂ ಬೇಜವಾಬ್ದಾರಿಯುತವಾಗಿ ವರ್ತಿಸಿ ಇಂದು ಹಲವಾರು ಗಣಿಗಳಲ್ಲಿ ನೀರು ತುಂಬಿ ನಿರುಪಯುಕ್ತಗೊಳಿಸಿದ್ದಾರೆ.

ತಡೆಯಿಲ್ಲದೆ ಭ್ರಷ್ಟಾಚಾರ

ನಂದಿದುರ್ಗ ಗಣಿಯಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕ ಹೇಳುತ್ತಾನೆ. "ನಮ್ಮ ಚಿನ್ನದ ಗಣಿ ಮುಳಗಲು ಮ್ಯಾನೇಜ್‌ಮೆಂಟ್‌ನವರೇ ಕಾರಣರಾಗಿದ್ದಾರೆ. ತಮಗೆ ಇಷ್ಟ ಬಂದವರಿಗೆ ಕಾಂಟ್ರಕ್ಟ್ ಕೆಲಸ ಕೊಡುತ್ತಾರೆ ಸರ್ಕಾರಕ್ಕೆ ಸುಳ್ಳು ಬಿಲ್ ಪಾಸ್ ಮಾಡುವುದು, ಲಕ್ಷಗಟ್ಟಲೆ ಲಂಚ ಹೊಡೆಯುವುದು ಪರಿಪಾಠವಾಗಿದೆ." ಎಂದು ಕಾರ್ಖಾನೆಯಲ್ಲಿನ ಭ್ರಷ್ಟತೆಯ ವಿವರ ನೀಡುತ್ತಾನೆ. ಕಾರ್ಖಾನೆಯ ಕಾನೂನು ಪ್ರಕಾರ 20 ಕಾರ್ಮಿಕರಿಗೆ ಒಬ್ಬ ಫೋರ್‌ಮೆನ್ ಇರಬೇಕು. ಆದರೆ 4 ಜನಕ್ಕೆ ಒಬ್ಬ ಫೋರ್ ಮೆನ್ ಇದ್ದಾನೆ. ಕಾರ್ಖಾನೆ ರೋಗಗ್ರಸ್ತವಾಗತೊಡಗಿದಂತೆ ಕಾರ್ಮಿಕರನ್ನು ತೆಗೆಯುತ್ತಾ ಬಂದರು. ಆದರೆ ಸಿಬ್ಬಂದಿ ವರ್ಗದವರನ್ನು ಮಾತ್ರ ಕೆಲಸದಿಂದ ತೆಗೆಯಲಿಲ್ಲ. ಆಡಳಿತವರ್ಗದ ಅಧಿಕಾರಿಗಳೇ ತುಂಬಿದ್ದಾರೆಂದು ಕಾರ್ಮಿಕರ ಉವಾಚ. ಜೊತೆಗೆ ಆಡಳಿತವರ್ಗ ಹಳೆಯ ಸಾಮಾಗ್ರಿಗಳನ್ನು 7 ವರ್ಷದಿಂದ ನಿರಂತರವಾಗಿ ಮಾರುತ್ತಿದ್ದಾರೆ. ಸರ್ಕಾರಕ್ಕೆ ಇವರು ಕೊಟ್ಟಷ್ಟೇ ಲೆಕ್ಕ ಅಂತಿಮ ತೀರ್ಮಾನವಾಗಿ ಇದರಿಂದ ಹಣ ಪೋಲಾಗುತ್ತಿದೆ.

ಕಾರ್ಖಾನೆಗಳಲ್ಲಿ ರಕ್ಷಣಾ ದಿನಾಚರಣೆಗಳಿಗಾಗಿ ಲಕ್ಷಾಂತರ ಹಣವನ್ನು ವಿನಿಯೋಗಿಸಿದ್ದೇವೆಂದು ಸರ್ಕಾರಕ್ಕೆ ಅಂಕಿ ಅಂಶ ನೀಡುತ್ತಾರೆ. ಬರೀ ಗುರುತಿನ ಚೀಟಿ, ಗೋಡೆ ಬರಹ ಮತ್ತು ವಾಲ್ ಪೋಸ್ಟರ್‌ಗೆ 10 ಲಕ್ಷದವರೆಗೂ ಹಣ ವೆಚ್ಚ ತೋರಿಸುತ್ತಿದ್ದಾರೆ. (ಉದಾ: ಗಣಿ ಸುರಕ್ಷಾ ದಿನಾಚರಣೆ ಒಟ್ಟಾರೆ ಆಡಳಿತ ವರ್ಗದವರು ನೆಪಗಳನ್ನು ಒಡ್ಡಿ ಹಣವನ್ನು ಲೂಟಿ ಮಾಡುತ್ತಿದ್ದಾರೆ.

ಕಾರ್ಯಾಚರಣೆಯಲ್ಲಿರುವ ಚಿನ್ನದ ಗಣಿಗಳು

ಕೆ.ಜಿ.ಎಫ್. ಚಿನ್ನದ ಗಣಿಗಳಲ್ಲಿ ಪ್ರಮುಖ್ಯತೆ ಪಡೆದಿದ್ದ ಛಾಂಪಿಯನ್ ಮತ್ತು ಮೈಸೂರು ಮೈನ್ಸ್ ಸ್ಥಗಿತಗೊಂಡಿದ್ದರೂ, 4270 ಕಾರ್ಮಿಕರ ನಿರಂತರ ಕೆಲಸದಿಂದ ಗೋಲುಗುಂಡಾ ಶಾಫ್ಟ್ (ಗಣಿ), ಬಿಸಾನಾಥಮ್ ಶಾಫ್ಟ್, ಚಿಗರು ಗುಂಟ ಶಾಫ್ಟ್, ನಂದಿ ದುರ್ಗ ಶಾಫ್ಟ್ ಗಳಲ್ಲಿ ಗಣಿ ಕೆಲಸ ನಡೆಯುತ್ತಿದೆ. ಜೊತೆಗೆ ರೈಲ್ವೆ ವ್ಯಾಗನ್‌ಗಳನ್ನು ತಯಾರಿಸಿ ಅದರಲ್ಲಿ ತಮ್ಮ ಪರಿಣತಿಯನ್ನು ತೋರಿಸಿದ್ದಾರೆ. ಇದರಿಂದಾಗಿ ಸರ್ಕಾರ ಮತ್ತು ಆಡಳಿತ ವರ್ಗ ಚಿನ್ನದಗಣಿ ನಿರುಪಯೋಗಿ ಎಂದು ಸಾರುತ್ತಾ ಬಂದಿದ್ದಕ್ಕೆ ಇದೊಂದು ಸವಾಲಾಗಿ ಕಾಣತೊಡಗಿದೆ.

ಸರ್ಕಾರ ಚಿನ್ನದ ಗಣಿಯ ಬಗ್ಗೆ ಕಳ್ಳೆಚ್ಚರ ವಹಿಸಬೇಕಿದೆ

ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಹಾಗೂ ಹೊಸ ಆರ್ಥಿಕ ನೀತಿಗಳಿಂದ ಹೊಸ ಕಾರ್ಖಾನೆಗಳನ್ನು ನಿರ್ಮಿಸುವ ಪರಿಸ್ಥಿತಿಯಲ್ಲಿ ಆಳುವ ಸರ್ಕಾರಗಳು ತಮ್ಮ ಶಕ್ತಿಯನ್ನು ಕಳೆದುಕೊಂಡು ಬಲಹೀನವಾಗಿವೆ. ಕೋಟಿಗಟ್ಟಲೆ ಜನರು ನಿರುದ್ಯೋಗ, ಬಡತನದಿಂದ ಬೇಯುತ್ತಿರುವಾಗ, ಇರುವ ಕಾರ್ಖಾನೆಗಳನ್ನು ಮುಚ್ಚಿ ಇನ್ನಷ್ಟು ದರಿದ್ರರನ್ನಾಗಿ ಮಾಡುವ ಬದಲು ಹಲವಾರು ವರ್ಷಗಳ ಕಾಲ ಸಾಗಿಸಿದ ಸಾರ್ವಜನಿಕ ಕಾರ್ಖಾನೆಗಳನ್ನು ಉಳಿಸಿಕೊಳ್ಳಲು ಸರ್ವ ಪ್ರಯತ್ನ ಮಾಡುವ ಅವಶ್ಯಕತೆ ಇದೆ. ಮನ ಬಂದಂತೆ ತೀರ್ಮಾನಗಳನ್ನು ತೆಗೆದುಕೊಂಡು ಕಾರ್ಖಾನೆಯನ್ನು ಏಪ್ರಿಲ್ ತಿಂಗಳಲ್ಲಿ ಮುಚ್ಚಲಾಗುತ್ತದೆ, ಸ್ವಯಂ ನಿವೃತ್ತಿಗೆ 70 ಕೋಟಿ ಹಣ ಭರಿಸಬೇಕಾಗುತ್ತದೆ ಎಂದು ಹೇಳಿಕೆಗಳನ್ನು ನೀಡುತ್ತಿದೆ.

ಪೂರ್ಣ ಪ್ರಮಾಣದ ಪ್ರಯತ್ನದಿಂದ ಇತಿಹಾಸ ಪ್ರಸಿದ್ಧ ಚಿನ್ನದ ಗಣಿ ಕೈಗಾರಿಕೆಯನ್ನು ಉಳಿಸಿಕೊಳ್ಳಲು ಎಲ್ಲರೂ ಪ್ರಯತ್ನ ಮಾಡಬೇಕಾಗಿದೆ. ಕಾರ್ಮಿಕರು, ನಾಡ ಜನರೆಲ್ಲರೂ ಐಕ್ಯತೆಯಿಂದ ಒಗ್ಗೂಡಿ ಕಾರ್ಖಾನೆಯನ್ನು ರಕ್ಷಿಸಿಕೊಳ್ಳಲು ಹೋರಾಟದ ಮಾರ್ಗ ಹಿಡಿಯಬೇಕಿದೆ. ○

ಪರಿಹಾರೋಪಾಯಗಳು

- *ಲಕ್ಷಗಟ್ಟಲೆ ಟನ್‌ಗಳಷ್ಟು ರಾಶಿ ಬಿದ್ದಿರುವ ಚಿನ್ನ ತೆಗೆದು ಉಳಿದ ಮಣ್ಣಿನಿಂದ ಮತ್ತೆ ಚಿನ್ನ ತೆಗೆಯಲು ಉತ್ತಮ ಸಂಸ್ಕರಣೆಗೆ ಒಳಪಡಿಸಿದರೆ ಚಿನ್ನ ಸಿಗುತ್ತದೆ. ಆದ್ದರಿಂದ CIP(Corbon in pulp) ಅಳವಡಿಸಬೇಕು. ಈ ಸಿಐಪಿಯನ್ನು ಅಳವಡಿಸಲು 70 ಕೋಟಿ ಮಾತ್ರ ಬೇಕಾಗುತ್ತದೆ. ಇದರಿಂದ ಒಂದು ವರ್ಷಕ್ಕೆ 800ಕೆಜಿ ಚಿನ್ನವನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಗಣಿ ಆಡಳಿತ ವರ್ಗವೇ ಹೇಳಿದೆ.*
- *ಹಳೆಯ ಚಿನ್ನದ ಗಣಿಗಳನ್ನು (ಶಾಫ್ಟ್) ಬಿಟ್ಟು ಹೊಸ ಹೊಸ ಶಾಫ್ಟ್‌ಗಳನ್ನು ಚಿನ್ನ ಸಿಗುವ ಕಡೆ ಪ್ರಾರಂಭಿಸುವುದು.*
- *ಹಳೆಯ ಶಾಫ್ಟ್‌ಗಳನ್ನು ರೈಲ್ವೆ ವ್ಯಾಗನ್ಸ್ ತಯಾರಿಸಲು ಪರಿವರ್ತಿಸುವುದು. ಈಗಾಗಲೇ ಒಂದೆರಡು ಶಾಫ್ಟ್‌ಗಳಲ್ಲಿ ಇದು ಯಶಸ್ವಿಯಾಗಿದೆ.*
- *ಕೆ.ಜಿ.ಎಫ್.ನಲ್ಲಿ ತೆಗೆಯುತ್ತಿದ್ದ ಚಿನ್ನಕ್ಕೆ ಭಾರತದ ಮಾರುಕಟ್ಟೆಯ ಚಿನ್ನದ ಬೆಲೆಯನ್ನು ಕೊಡದೆ (Gold Control order ಎಂಬ ಕಾಯಿದೆ ಅನುಸಾರ ಕೊಡದೆ) ಲಂಡನ್ ಬೆಲೆ ಕೊಡುತ್ತಿದ್ದರು. ಉದಾ: ಭಾರತದಲ್ಲಿ 5 ಸಾವಿರ ಇದ್ದರೆ ಲಂಡನ್ ಬೆಲೆ 2 ಸಾವಿರ ಬೆಲೆಗೆ ಕೊಡುತ್ತಿದ್ದರು. ಇದನ್ನು ವಾಪಾಸು ಕೊಟ್ಟು ಕಾರ್ಖಾನೆಯ ಪುನಶ್ಚೇತನಕ್ಕೆ ಅನುಕೂಲ ಮಾಡಿಕೊಡುವುದು. ಇದನ್ನು ಕೇಂದ್ರ ಸರ್ಕಾರ ಭರಿಸಬೇಕು.*
- *ಕರ್ನಾಟಕದಲ್ಲಿ ಚಿನ್ನದ ಸಮೀಕ್ಷೆಯ ಪ್ರಕಾರ, ತಜ್ಞರ ವೈಜ್ಞಾನಿಕ ಸಂಶೋಧನಾ ಆಧಾರದ ಮೇಲೆ ಪ್ರತಿ ವರ್ಷ ಕರ್ನಾಟಕದ ಮಣ್ಣಿನಿಂದ 100 ಟನ್ [illegible] ಕಡೆಗಳಲ್ಲಿ ಗಣಿ (ಶಾಫ್ಟ್)ಗಳನ್ನು ಪ್ರಾರಂಭಿಸುವುದು.*
- *ಕೆ.ಜಿ.ಎಫ್ ಗಣಿ ಕೈಗಾರಿಕೆಗೆಂದೇ ಶಿವನ ಸಮುದ್ರ ಜಲ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಿದ್ದು, ಗಣಿ ಕೈಗಾರಿಕೆಯಿಂದ ಕೋಟಿಗಟ್ಟಲೆ ಹಣ ಕಟ್ಟಿಸಿಕೊಂಡಿದೆ. ಶಿವನ ಸಮುದ್ರ ವಿದ್ಯುತ್ ಸ್ಥಾವರವನ್ನು 25 ಸೈಕಲ್ (ಆವರ್ತ) ವಿದ್ಯುತ್‌ನ್ನು ತಯಾರಿಸುತ್ತಿತ್ತು. ಕೆ.ಜಿ.ಎಫ್.ನ ಎಲ್ಲಾ ಯಂತ್ರೋಪಕರಣಗಳನ್ನು 25 ಸೈಕಲ್ ವಿದ್ಯುತ್ ಬಳಕೆಯ ಅನುಗುಣವಾಗಿ ಬಳಸುತ್ತಿತ್ತು. ಆದರೆ ಈಗ ಶಿವನ ಸಮುದ್ರ ವಿದ್ಯುತ್ ಸ್ಥಾವರವನ್ನು 50 ಸೈಕಲ್ ವಿದ್ಯುತ್ ತಯಾರಿಸಲು ಬದಲಿಸುತ್ತೇವೆ. ಆದ್ದರಿಂದ ಕೆ.ಜಿ.ಎಫ್ ಎಲ್ಲಾ ಯಂತ್ರೋಪಕರಣಗಳನ್ನು 20002 ಇಸ್ವಿಯೊಳಗೆ 50 ಸೈಕಲ್ ವಿದ್ಯುತ್ ಬಳಕೆಯ ಉಪಕರಣಗಳನ್ನು ಅಳವಡಿಸಿ ಎಂದು ಕರ್ನಾಟಕ ಸರ್ಕಾರ ಎಚ್ಚರಿಕೆ ನೀಡಿದೆ. ಇದರಿಂದ ಹಳೆಯ ಯಂತ್ರೋಪಕರಣಗಳು ಉಪಯೋಗಕ್ಕೆ ಬರದಂತೆ ಆಗುತ್ತವೆ. ಅಲ್ಲದೆ ಹೊಸ ಯಂತ್ರಗಳನ್ನು ಅಳವಡಿಸಲು ಕೋಟಿಗಟ್ಟಲೆ ಹಣವನ್ನು ವ್ಯಯ ಮಾಡಬೇಕಾಗುತ್ತದೆ. ಆದ್ದರಿಂದ ಕರ್ನಾಟಕ ಸರ್ಕಾರದ ಒತ್ತಾಯ ಸಮಂಜಸವಲ್ಲ. ಸಮಸ್ಯೆಯನ್ನು ಗಣಿ ಹಾಗೂ ವಿದ್ಯುತ್ ತಯಾರಿಕಾ ಘಟಕ ಎರಡೂ ಕಡೆಯ ಆರೋಗ್ಯ ದೃಷ್ಟಿಯಿಂದ ಪರಿಶೀಲಿಸಬೇಕು.*
- *ಆಡಳಿತ ವರ್ಗ ಮತ್ತು ಸರ್ಕಾರಗಳೇ ಶಾಫ್ಟ್ (ಗಣಿ)ಗಳಲ್ಲಿ ನೀರು ತುಂಬಲು ಕಾರಣರಾಗಿದ್ದಾರೆ. ತಕ್ಷಣದಿಂದಲೇ ಶಾಫ್ಟ್‌ಗಳಲ್ಲಿ ತುಂಬಿರುವ ನೀರನ್ನು ಹೊರ ತೆಗೆಯುವುದು ಹಾಗೂ ಇನ್ನು ಮುಂದೆ ಶಾಫ್ಟ್‌ಗಳಲ್ಲಿ ನೀರು ತುಂಬಿಕೊಳ್ಳದಂತೆ ಎಚ್ಚರ*

ಡಿಸೆಂಬರ್‌ನಲ್ಲಿ ಕೊಜೆಂಟ್ರಿಕ್ಸ್ ಇದ್ದಕ್ಕಿದ್ದ ಹಾಗೆ ಸುಪ್ರೀಂ ಕೋರ್ಟ್ ಅದರ ಮೇಲಿನ ಭ್ರಷ್ಟಾಚಾರ ಕೇಸ್ ತೀರ್ಮಾನ ಬರುವ ಹಿಂದಿನ ದಿನ ತಾನು ಮಂಗಳೂರು ಥರ್ಮಲ್ ವಿದ್ಯುತ್ ಪ್ರಾಜೆಕ್ಟಿನಿಂದ ಹಿಂತೆಗೆಯುವುದಾಗಿ ಪ್ರಕಟಿಸಿತು. ಕೋರ್ಟು ಕೇಸುಗಳಲ್ಲಿ ಭಾರೀ ವಿಳಂಬ ಇದಕ್ಕೆ ಕಾರಣ ಎಂದೂ ದೂರಿತು. ಈ 'ಬ್ಲಾಕ್ ಮೇಲ್'ಗೆ ಬಲಿ ಯಾಯಿತೋ ಎನ್ನುವಂತೆ ಸುಪ್ರೀಂ ಕೋರ್ಟ್ ಕೊಜೆಂಟ್ರಿಕ್ ಹಗರಣದಲ್ಲಿ ಸಿಬಿಐ ತನಿಖೆ ನಡೆಸಬೇಕು ಎಂಬ ಕರ್ನಾಟಕ ಹೈಕೋರ್ಟಿನ ತೀರ್ಪನ್ನು ತಳ್ಳಿ ಹಾಕಿತು. ಆದರ ನಂತರ ಕರ್ನಾಟಕ ಮತ್ತು ಕೇಂದ್ರ ಸರ್ಕಾರಗಳು ಕೊಜೆಂಟ್ರಿಕ್ಸ್‌ದ ಮನವೊಲಿಸಲು ಒಂದು ಕಡೆ ಡೊಗ್ಗು ಸಲಾಮು ಹೊಡೆಯುತ್ತಿದ್ದ ಹಾಗೆ ಇನ್ನೊಂದು ಕಡೆ ಪರಸ್ಪರ 'ನೀನು ನಿರ್ಧರಿಸು, ನೀನು ನಿರ್ಧರಿಸು' ಎಂದು ಫುಟ್‌ಬಾಲ್ ಆಡುತ್ತಿದ್ದ ಹಾಗೆ, ಕೊಜೆಂಟ್ರಿಕ್ ಮಂಗಳೂರು ಪ್ರಾಜೆಕ್ಟ್‌ನಿಂದ ಹೊರ ನಡೆಯುವ 'ಅಂತಿಮ' ತೀರ್ಮಾನ ತೆಗೆದುಕೊಂಡಿದೆ.

ಇದರ ಬೆನ್ನ ಹಿಂದೆ 'ಮಂಗಳೂರು ಪವರ್ ಕಂಪನಿ(ಎಂ.ಪಿ.ಸಿ.) ಯಲ್ಲಿ ಕೊಜೆಂಟ್ರಿಕ್ಸ್ ಜತೆ ಸಹಭಾಗಿಯಾಗಿದ್ದ ಚೀನಾ ಲೈಟ್ ಪವರ್ ಕಂಪನಿ(ಸಿ.ಎಲ್.ಪಿ.) 'ಎಂ.ಪಿ.ಸಿ.' ಯ ಈ ಪ್ರಾಜೆಕ್ಟನ್ನು ತನಗೆ ವರ್ಗಾಯಿಸಿ ಎಂದು ರಾಜ್ಯ ಸರ್ಕಾರವನ್ನು ಕೇಳಿದೆ. ಈ ನಡುವೆ ಏನ್ರೋನ್ ರಾಜ್ಯದಲ್ಲಿ ಇನ್ನೊಂದು ಪವರ್‌ಪ್ರಾಜೆಕ್ಟ್‌ಗೆ ಲಗ್ಗೆ ಹಾಕುತ್ತಿದೆ ಎಂದು ವರದಿ ಬಂದಿದೆ. ಈ ಹಿನ್ನಲೆಯಲ್ಲಿ - ಕೊಜೆಂಟ್ರಿಕ್ಸ್ ಏಕೆ ಈ ರೀತಿ ವರ್ತಿಸಿತು? ಕೊಜೆಂಟ್ರಿಕ್ಸ್‌ಲ್ಲಿ ಭ್ರಷ್ಟಾಚಾರ ನಡೆಯಲಿಲ್ಲವೇ? ರಾಜ್ಯ ಸರ್ಕಾರ ಎಂ.ಪಿ.ಸಿ.ಯನ್ನು ಸಿ.ಎಲ್. ಪಿ.ಗೆ ವರ್ಗಾಯಿಸಬೇಕೆ? ಈ ಪ್ರಕರಣದಿಂದ ವಿದ್ಯುತ್ ಉತ್ಪಾದನೆ ಖಾಸಗೀಕರಣದ ನೀತಿ ಬಗ್ಗೆ ಏನು ಬುದ್ಧಿ ಕಲಿಯಬಹುದು? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಈ ಕೆಳಗಿದೆ.

ಅಗತ್ಯ ಎಂಬ ನಿರ್ಧಾರಕ್ಕೆ ಅದು ಬಂದಿತ್ತು. ಸುಪ್ರೀಂಕೋರ್ಟ್ ತೀರ್ಪು ಸಹ ತನಿಖೆ ಅಗತ್ಯವಾದ ಮೊದಲ ನೋಟದ ಪುರಾವೆಗಳಿಲ್ಲ ಎಂದೂ ಹೇಳಿಲ್ಲ. ಬದಲಾಗಿ ಸರಕಾರದ ಆರ್ಥಿಕ ನಿರ್ಧಾರಗಳ ಮೇಲೆ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸ್ವೀಕರಿಸುತ್ತಾ ಹೋದರೆ, ಪ್ರಮುಖ ಪ್ರಾಜೆಕ್ಟ್‌ಗಳು ನಿಂತು ಹೋಗಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ. ಸುಪ್ರೀಂ ಕೋರ್ಟ್‌ನ ತೀರ್ಪಿನಲ್ಲಿನ ವಾದ ಒಪ್ಪಿದರೆ ಸರ್ಕಾರದ ಯಾವುದೇ ಆರ್ಥಿಕ ನಿರ್ಧಾರದ ಬಗ್ಗೆ ಸಾರ್ವಜನಿಕ ಚರ್ಚೆ ನಡೆಯುವಂತಿಲ್ಲ. ಸರ್ಕಾರದ ನಿರ್ಧಾರವನ್ನು ಕಣ್ಣು ಮುಚ್ಚಿ ಒಪ್ಪಿಕೊಳ್ಳಬೇಕು ಎಂದರ್ಥ ಆದಂತಾಗುತ್ತದೆ.

ಕೊಜೆಂಟ್ರಿಕ್ಸ್‌ಗೆ ಈ ಪ್ರಾಜೆಕ್ಟ್ ನಡೆಸುವ ಯಾವ ಸಾಮರ್ಥ್ಯವೂ ಇರಲಿಲ್ಲ. ಈ ಪ್ರಾಜೆಕ್ಟ್ ಆರಂಭವಾದಾಗ ಕೊಜೆಂಟ್ರಿಕ್ಸ್‌ಗೆ ಹತ್ತಿರ ಇದ್ದ

ಖರ್ಚಾಗಿತ್ತಂತೆ. ಇದು ಹೈಕೋರ್ಟಿನೆದುರು ಪುರಾವೆ ಸಹಿತ ಸಿದ್ಧವಾಗಿತ್ತು. ಇದಲ್ಲದೆ ಎಂ.ಪಿ.ಸಿ.ಯ ಈ ಪ್ರಾಜೆಕ್ಟನ್ನು ಕೊಜೆಂಟ್ರಿಕ್ಸ್ ಮತ್ತು ಕರ್ನಾಟಕ ಸರ್ಕಾರ ಎರಡೂ ಇನ್ನು ಹಲವು ಅಕ್ರಮಗಳನ್ನು ನಡೆಸಿದ್ದರು ಎಂದು 'ಸಾರ್ವಜನಿಕ ಹಿತಾಸಕ್ತಿ ಮೊಕದಮೆ' ಹೂಡಿದ ಅರುಣ್ ಅಗರ್‌ವಾಲಾ ಕೋರ್ಟಿನೆದುರು ಸಿದ್ಧಪಡಿಸಿದ್ದರು.

ಈ ಎಲ್ಲದರ ಆಧಾರದ ಮೇಲೆ ಹೈಕೋರ್ಟ್ ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ನಿರ್ಧರಿಸಿದ್ದು. ಸುಪ್ರೀಂ ಕೋರ್ಟ್ ತೀರ್ಪು ಹೊರಬೀಳುತ್ತಿದ್ದಂತೆ, ಹೈಕೋರ್ಟು ಏನೂ ಆಧಾರವಿಲ್ಲದೆ ಇಂತಹ ತೀರ್ಪು ನೀಡಿ ಪ್ರಾಜೆಕ್ಟ್ ವಿಳಂಬ ಮಾಡಿತು ಎನ್ನುವರ್ಥದ 'ಪತ್ರಿಕಾ ಪ್ರಚಾರ'(ಕೊಜೆಂಟ್ರಿಕ್ಸ್ ಕ-ಪಾಪೋಷಿತ ಎಂದು ಬೇರೆ ಹೇಳಬೇಕಾಗಿಲ್ಲವಲ್ಲ) ನಡೆದಿತ್ತು. ಆದರೆ ಇದು ನಿರಾಧಾರ ಎನ್ನುವುದು ಸ್ಪಷ್ಟ.

ಕರ್ನಾಟಕ ಸರ್ಕಾರ ಸಿ.ಎಲ್.ಪಿ.ಗೆ ಮಂಗಳೂರು ಪ್ರಾಜೆಕ್ಟ್ ವರ್ಗಾಯಿಸಬೇಕೆ?

ಕೂಡದು ಎನ್ನುತ್ತಾರೆ ಕೊಜೆಂಟ್ರಿಕ್ಸ್ ಪ್ರಾಜೆಕ್ಟ್ ಮೊಕದ್ದಮೆ ಹೂಡಿದ ಅರುಣ್ ಅಗರ್‌ವಾಲ್. ಸೆಪ್ಟೆಂಬರ್ 94 ರಲ್ಲಿ ಆದ ಮೊದಲ ಒಪ್ಪಂದಕ್ಕೆ ಸಹಿ ಮಾಡಿದ್ದು ಸಿ.ಎಲ್.ಪಿ. ಅಲ್ಲ. 1995 ರಲ್ಲಿ ಮಂಗಳೂರು ಪವರ್ ಕಂಪನಿಯ ಶೇಕಡಾ 40 ಶೇರು ಖರೀದಿಸಿ ಸಿ.ಎಲ್.ಪಿ. ಈ ಪ್ರಾಜೆಕ್ಟ್‌ಗೆ ಬಂದಿದೆ. ಕೊಜೆಂಟ್ರಿಕ್ಸ್‌ನಂತೆ, ಸಿ.ಎಲ್.ಪಿ.ಗೂ ವಿದ್ಯುತ್ ಪ್ರಾಜೆಕ್ಟ್‌ಗಳಲ್ಲಿ ಯಾವುದೇ ಅನುಭವ ಇಲ್ಲ. ಈ ಎರಡೂ ಕಂಪನಿಗಳು ಬರಿ ದಲ್ಲಾಳಿಗಳು. ಭಾರಿ ಲಂಚ ಕೊಟ್ಟು ಪ್ರಾಜೆಕ್ಟ್ ಗಿಟ್ಟಿಸಿದ್ದಾರೆ. ಎಲ್ಲರನ್ನೂ 'ಬ್ಲಾಕ್ ಮೇಲ್' ಮಾಡಿ ಗರಿಷ್ಠ ಲಾಭ ಮಾಡಲು ಪ್ರಯತ್ನಿಸುತ್ತಿದ್ದಾರೆ.



ಮಂಗಳೂರು ವಿದ್ಯುತ್ ಪ್ರಾಜೆಕ್ಟ್‌ನಿಂದ ಕೊಜೆಂಟ್ರಿಕ್ಸ್ ನಿರ್ಗಮನ

ಪೀಡೆ ಕಳೆಯಿತು ಆದರೆ... ಕೆಟ್ಟ ಮೇಲಾದರೂ ಬುದ್ಧಿ ಬಂದೀತೆ?

ಕೊಜೆಂಟ್ರಿಕ್ಸ್ ಏಕೆ ಈ ರೀತಿ ವರ್ತಿಸಿತು?

ಒಂದನೆಯದಾಗಿ ಸುಪ್ರೀಂ ಕೋರ್ಟು ಸಿಬಿಐ ತನಿಖೆಗೆ ಒಪ್ಪಿಗೆ ಕೊಟ್ಟರೆ ತನ್ನ ಭ್ರಷ್ಟಾಚಾರವೆಲ್ಲ ಬಯಲಿಗೆ ಬಂದು ತೀವ್ರ ಕಾನೂನಿನ ಸಮಸ್ಯೆಗಳಿಗೆ ಸಿಕ್ಕಿಹಾಕಿಕೊಳ್ಳಬಹುದು. ಎರಡನೆಯದಾಗಿ ಮಹಾರಾಷ್ಟ್ರದ ಏನ್ರೋನ್ ಕಂಪನಿಗೆ ಕೇಂದ್ರ ಸರ್ಕಾರ ಕೊಟ್ಟಿರುವ ಕೌಂಟರ್-ಗ್ಯಾರಂಟಿ ಕೊಜೆಂಟ್ರಿಕ್ಸ್‌ಗೆ ಸಿಕ್ಕಿಲ್ಲ. ಕೊಜೆಂಟ್ರಿಕ್ಸ್ ಜತೆಗಿನ ಒಪ್ಪಂದದ ಪ್ರಕಾರ, ಪ್ರಾಜೆಕ್ಟನ್ನು ಮಧ್ಯದಲ್ಲಿ ನಿಲ್ಲಿಸಿದರೆ, ಬಾಕಿ ಇರುವ ವಿದೇಶಿ ಸಾಲ ಪಾವತಿ ಮಾಡುವುದಕ್ಕೆ ಮಾತ್ರ ಸೀಮಿತವಾಗಿದೆ.

ಏನ್ರೋನ್ ಪ್ರಕರಣದಲ್ಲಿ ಖಾಸಗಿ ವಿದ್ಯುತ್ ಉತ್ಪಾದಕರ ಹೂರಣವೆಲ್ಲ ಬಯಲಿಗೆ ಬಂದಿದ್ದು, ಇಂತಹ ದುಬಾರಿ ಬೆಲೆ ತೆರಲು ವಿದ್ಯುತ್ ಬೋರ್ಡ್‌ಗೆ ಆಗಲಿಕ್ಕಿಲ್ಲ. ಇಂತಹ ಬೆಲೆ ತೆರುವುದರ ವಿರುದ್ಧ ಜನರ ಭಾರಿ ಆಕ್ರೋಶ ವ್ಯಕ್ತವಾದೀತು ಎಂಬ ಭಯ ಇದೆ. ಈಗಿನ ಒಪ್ಪಂದದ ಪ್ರಕಾರ ಖಾಸಗಿ ವಿದ್ಯುತ್ ಉತ್ಪಾದಕರಿಗೆ 'ಎಸ್ಕ್ರೋ ಅಕೌಂಟ್' ಎಂಬ ವಿಧಾನದ ಮೂಲಕ ಮಾತ್ರ ದುಡ್ಡು ಪಾವತಿ ವ್ಯವಸ್ಥೆ ಇದೆ. ಇದರ ಪ್ರಕಾರ ವಿದ್ಯುತ್ ಬೋರ್ಡು ತನ್ನ ಆದಾಯದಲ್ಲಿ ಮೊದಲ ವೆಚ್ಚ 'ಖಾಸಗಿ ವಿದ್ಯುತ್ ಉತ್ಪಾದಕರ' ಬಿಲ್ ಪಾವತಿ ಮಾಡುವುದು ಆಗಿರಬೇಕು. ಇದು ಎಂತಹ ವಿಚಿತ್ರ ವ್ಯವಸ್ಥೆ. ಅಂದರೆ ಇದ್ದ ಆದಾಯದಲ್ಲಿ ಬೋರ್ಡಿಗೆ ಯಾವುದರ ಮೇಲೆ ಅದನ್ನು ವೆಚ್ಚ ಮಾಡಬೇಕು ಎನ್ನುವ ನಿರ್ಧಾರದ ಹಕ್ಕನ್ನು ಕಸಿದುಕೊಂಡಂತೆ. ಇದರಿಂದಲೂ ತೃಪ್ತವಾಗದ ಕೊಜೆಂಟ್ರಿಕ್ಸ್ ವಿದ್ಯುತ್ ಬೋರ್ಡು ದುಡ್ಡು ಪಾವತಿಗೆ ತಪ್ಪಿದರೆ ಕೇಂದ್ರ ಸರ್ಕಾರ ಅದನ್ನು ಪಾವತಿ ಮಾಡುವ ಮಾದರಿಯ 'ಕೌಂಟರ್ ಗ್ಯಾರಂಟಿ' ಯನ್ನು ಪಡೆಯಲು ಇಂತಹ ಒತ್ತಡದ ತಂತ್ರ ಬಳಸಿತು. ಅಲ್ಲದೆ ಹಲವು ಅಂಶಗಳು ಬದಲಾಗಿದ್ದರೂ ಹಳೆಯ 'ವಿದ್ಯುತ್ ಖರೀದಿ ಒಪ್ಪಂದ'ಗಳನ್ನು ಮುಂದುವರೆಸ ಬೇಕೆನ್ನುವುದು ಕೊಜೆಂಟ್ರಿಕ್ಸ್ ವಿಷಯವಾಗಿತ್ತು. ಆದರೆ ಇದು ಭಾಗಶಃ ಕೆಲಸ ಮಾಡಿದರೂ, ಕೇಂದ್ರ ಸರ್ಕಾರ 'ಏನ್ರೋನ್' ರೀತಿಯ ಗ್ಯಾರಂಟಿಗೆ ಒಪ್ಪದ್ದರಿಂದ ಕೊನೆಗೂ ನಿರ್ಗಮಿಸಲು ನಿರ್ಧರಿಸಿದೆ. ಎಂ.ಪಿ.ಸಿ.ಯಲ್ಲಿ ತನ್ನ ಬಂಡವಾಳದ ಪಾಲನ್ನು ಲಾಭಕ್ಕೆ ಸಿ.ಎಲ್.ಪಿ.ಗೆ ಮಾರಿದೆ, ಸಿ.ಎಲ್.ಪಿ. ಇಂತಹ ಒತ್ತಡ ತಂತ್ರವನ್ನು ಮುಂದುವರೆಸಲಿದೆ ಎಂದು ಹೇಳಬಹುದು.

ಕೊಜೆಂಟ್ರಿಕ್ಸ್ ಪ್ರಾಜೆಕ್ಟ್‌ನಲ್ಲಿ ಭ್ರಷ್ಟಾಚಾರ ನಡೆಯಲಿಲ್ಲವೇ?

ಕರ್ನಾಟಕ ಹೈಕೋರ್ಟಿನ ಮುಂದೆ ಮಂಡಿಸಲಾದ ಹಲವು ಮೊದಲ-ನೋಟದ ಪುರಾವೆಗಳಿಂದಲೇ ಸಿಬಿಐ ತನಿಖೆ ಈ ಪ್ರಕರಣದಲ್ಲಿ

ಬಂಡವಾಳ ಕೇವಲ ಜುಜುಬಿ 45 ಲಕ್ಷ. ಅಲ್ಲದೆ ಆ ಕಂಪನಿಯ ಸಾಲ, ಬಂಡವಾಳದ 8-9 ಪಟ್ಟು ಇತ್ತು. ಇಡೀ ಜಗತ್ತಿನನಲ್ಲಿ ಅದು ಹಾಕಿದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಆಗ ಒಟ್ಟು ಸಾವಿರ ವಾಟ್‌ಗಳಿಗಿಂತಲೂ ಕಡಿಮೆ ಎಂಬುದು ಕೋರ್ಟಿನ ಮುಂದೆ ಸಿದ್ಧವಾಗಿತ್ತು.

ಕರ್ನಾಟಕ ಸರ್ಕಾರಕ್ಕೆ ಸ್ವತಂತ್ರ ಪರಿಣತರು ಕೊಟ್ಟ ಸಲಹಾ ವರದಿಯಲ್ಲಿ 'ವಿದ್ಯುತ್-ಖರೀದಿ ಒಪ್ಪಂದ' ಕೊಜೆಂಟ್ರಿಕ್ಸ್ ಪರ ತೀರಾ ಏಕ-ಪಕ್ಷೀಯವಾಗಿತ್ತು ಎಂದು ಹೇಳಿತ್ತು ಎಂದೂ ಕೋರ್ಟಿನ ಮುಂದೆ ಇಡಲಾಗಿತ್ತು. ವಿದ್ಯುತ್ ಸ್ಥಾವರದ ಉಷ್ಣ-ದಕ್ಷತೆ ಸರಾಸರಿ ಭಾರತ ಮತ್ತು ವಿಶ್ವದ ಸರಾಸರಿಗಿಂತ ಎಷ್ಟೋ ಕಡಿಮೆ. ಅಂದರೆ ತಾಂತ್ರಿಕವಾಗಿಯೂ ಈ ವಿದ್ಯುತ್ ಪ್ರಾಜೆಕ್ಟ್ ಕಳಪೆ ಮಟ್ಟದ್ದಾಗಿತ್ತು.

ಎಂ.ಪಿ.ಸಿ. ವಿದ್ಯುತ್ ಸ್ಥಾವರಕ್ಕೆ ಒಂದು ಇಟ್ಟಿಗೆ ಇಡುವ ಮೊದಲೇ 175 ಕೋಟಿ ರೂ. ಖರ್ಚಾಗಿತ್ತಂತೆ. ಅಲ್ಲದೆ ಆಮೇಲೆ ಎಂ.ಪಿ.ಸಿ. ಯಲ್ಲಿ ಸಹಭಾಗಿಯಾದ ಸಿ.ಎಲ್.ಪಿ. ಸಹ ಪ್ರಾಜೆಕ್ಟ್ ಆರಂಭವಾಗುವ ಮೊದಲೇ 19 ಕೋಟಿ ಹಾಂಕಾಂಗ್ ಡಾಲರು ಖರ್ಚು ಮಾಡಿತ್ತಂತೆ - 'ಅಭಿವೃದ್ಧಿ'

ಅಯ್ಯೋಯ್ಯೋ! ಕೊಜೆಂಟ್ರಿಕ್ಸ್ ಹೋಗಿದ್ದರಿಂದ ಮಂಗಳೂರು ಪ್ರಾಜೆಕ್ಟ್ ನಿಂತು ಹೋಗುತ್ತಲ್ಲ. ಸಿ.ಎಲ್.ಪಿ. ಗಾದರೂ ವರ್ಗಾಯಿಸಿದರೆ ಅದು ಮುಂದಕ್ಕೆ ಹೋಗಬಹುದಲ್ಲ ಎಂದು ಕರುಬುವವರೂ ಇದ್ದಾರೆ. ಕೊಜೆಂಟ್ರಿಕ್ಸ್ ಬಿಟ್ಟು ಹೋದರೆ ಪೀಡೆ ಕಳೆಯಿತು ಎನ್ನಬೇಕು.

ಇದು ಅತ್ಯಂತ ದುಬಾರಿ ಪ್ರಾಜೆಕ್ಟ್, 1994 ರ ಡಾಲರ್ ಬೆಲೆಯಲ್ಲೇ ಪ್ರಾಜೆಕ್ಟ್ ವೆಚ್ಚ 4000 ಕೋಟಿ ರೂ.ಆಗಿತ್ತು. ಈಗಿನ ಡಾಲರ್ ಬೆಲೆಯಲ್ಲಿ ಇದು 5000 ಕೋಟಿ ರೂ.ಗೆ ಏರ್ತದೆ. ಕೆಇಬಿ ಪಾವತಿ ಮಾಡಬೇಕಾದ ಹಣವನ್ನು ಒಪ್ಪಂದದಲ್ಲಿ ಡಾಲರಿನಲ್ಲಿ ನಮೂದಿಸಿದೆ. ಪ್ರತಿಯೂನಿಟಿಗೆ ಇದು ಉತ್ಪಾದನಾ ವೆಚ್ಚವನ್ನೇ ರೂ.4 ಕೇರಿಸುತ್ತದೆ.

ಕೆ.ಇ.ಬಿ. ಒಪ್ಪಂದದ ಪ್ರಕಾರ ಮಂಗಳೂರು ಪ್ರಾಜೆಕ್ಟ್‌ನ ಕನಿಷ್ಟ ಶೇಕಡಾ 85 ರಷ್ಟು ವಿದ್ಯುತ್ ಕೊಳ್ಳಬೇಕಾದ್ದರಿಂದ ಮತ್ತು ಮಂಗಳೂರು ಸುತ್ತಮುತ್ತವೇ ಇಷ್ಟು ವಿದ್ಯುತ್‌ಗೆ ಬೇಡಿಕೆ ಇಲ್ಲದಿರುವುದರಿಂದ ಸುಮಾರು 1250 ರೂ. ಖರ್ಚು ಮಾಡಿ ಆ ವಿದ್ಯುತ್ತನ್ನು ಬೇರೆ ಕಡೆಗೆ ಸಾಗಾಣಿಕೆ ಮಾಡಬೇಕಾಗುತ್ತದೆ ಸಾಗಾಣಿಕ ವೆಚ್ಚ, ಸಾಗಾಣಿಕೆ ನಷ್ಟ ಎಲ್ಲ ಲೆಕ್ಕ ಹಾಕಿದರೆ ಯೂನಿಟಿಗೆ ಕೆಇಬಿಯ ವೆಚ್ಚವೇ 7 ರೂ. ಆಗುತ್ತದೆ.

ಕೆ.ಇ.ಬಿ. ಈಗಾಗಲೇ ಇತರ ಇದಕ್ಕಿಂತ ಎಷ್ಟೋ ಪಟ್ಟು ಅಗ್ಗದ ವಿದ್ಯುತ್ ಪ್ರಾಜೆಕ್ಟ್‌ಗಳಿಂದ ವಿದ್ಯುತ್ ಸಿಗಲಿದೆ. ಅಲ್ಲದೆ ಕೊಜೆಂಟ್ರಿಕ್ಸ್‌ನ ಈ ದರಿದ್ರ ಒಪ್ಪಂದ ಪಾಲಿಸಿದರೆ ಅದರ ಹಿಂದಿನ ಜಲವಿದ್ಯುತ್ ಕೇಂದ್ರಗಳಿಂದ (ಅದರ ಬೆಲೆ ಕೇವಲ ಯೂನಿಟಿಗೆ 20-40 ಪೈಸೆ) ವಿದ್ಯುತ್ ತೆಗೆದುಕೊಳ್ಳುವುದು ನಿಲ್ಲಿಸಬೇಕಾಗುತ್ತದೆ.

ಆದ್ದರಿಂದ ಈ ಪ್ರಾಜೆಕ್ಟನ್ನು ಮುಚ್ಚಿಬಿಡುವುದೇ? ಈಗಿನ ವಿದ್ಯುತ್ ಖರೀದಿ-ಒಪ್ಪಂದ, ಈಗಿನ ಪ್ರಾಜೆಕ್ಟ್ ವೆಚ್ಚ, ಈಗಿನ ಆಮದಾದ ಇದ್ದಿಲು ಆಧಾರಿತ ಸ್ಥಾವರ, ಈಗಿನ ಒಡೆತನದಲ್ಲಿ ಈ ಪ್ರಾಜೆಕ್ಟನ್ನು ಮುಚ್ಚಿದರೆ ರಾಜ್ಯಕ್ಕೆ ಹೆಚ್ಚು ಲಾಭ. ಈಗಿನ ಎಲ್ಲಾ ಒಪ್ಪಂದಗಳನ್ನು ಗಾಳಿಗೆ ತೂರಿ ದೇಶಿಯ ಕಂಪನಿಗಳಿಗೆ ಈ ಕಂಪನಿಯಲ್ಲಿ ಬಂಡವಾಳ ಹೂಡಿ, ಉತ್ತಮವಾಗಿ ಅಗ್ಗದಲ್ಲಿ ನಡೆಸಲು ಸಾಧ್ಯವಾದರೆ ಅದನ್ನು ಪ್ರಯತ್ನಿಸಬಹುದು.

ವಿದ್ಯುತ್ ಉತ್ಪಾದನೆ ಖಾಸಗೀಕರಣದ ಬಗ್ಗೆ ಏನು ಬುದ್ಧಿ ಕಲಿಯಬಹುದು?

ಈಗಾಗಲೇ ಕೇಂದ್ರ ವಿದ್ಯುತ್ ಮಂತ್ರಿ ಕುಮಾರಮಂಗಳಂ ಒಪ್ಪಿಕೊಂಡಿರುವಂತೆ ಕಳೆದ 10 ವರ್ಷಗಳಿಂದ ಕಾಂಗ್ರೆಸ್-ಬಿಜೆಪಿ ಸರ್ಕಾರಗಳು ಅನುಸರಿಸುತ್ತಾ ಬಂದಿರುವ ವಿದೇಶಿ ಖಾಸಗಿ ಬಂಡವಾಳದ ಮೇಲೆ ಆಧಾರಿತ ವಿದ್ಯುತ್ ನೀತಿ 'ಫ್ಲಾಪ್ ಆಗಿದೆ' ಈ ನೀತಿಯಿಂದ ದೇಶಕ್ಕೆ ಭಾರೀ ನಷ್ಟ ಆಗಿದೆ. ವಿದ್ಯುತ್ ಉತ್ಪಾದನೆಯಲ್ಲಿ ನಿರೀಕ್ಷಿತ ಹೆಚ್ಚಳ ಆಗಿಲ್ಲ.

'ಏನ್ರೋನ್' ಬಗ್ಗೆ ಕೇಂದ್ರ ಸರ್ಕಾರದ ನೀತಿಯನ್ನು ಟೀಕಿಸಿದವರ ಎಲ್ಲಾ 'ಆತಂಕ'ಗಳು ನಿಜವಾಗಿವೆ. ಈ ಬಗ್ಗೆ ಸರ್ಕಾರ 'ಹಾಗಾಗಿಲ್ಲ' ಎಂಬ ಭರವಸೆಗಳೆಲ್ಲಾ ಹುಸಿಯಾಗಿವೆ.

- *ಏನ್ರೋನ್‌ನ ವಿದ್ಯುತ್ ಬೆಲೆ ಯೂನಿಟಿಗೆ 4.50 ರೂ. ಆಗಿದೆ.*
- *ಏನ್ರೋನ್ 'ಗ್ಯಾರಂಟಿ' ಒಪ್ಪಂದದಿಂದ ಕೈಕಟ್ಟಿ ಹಾಕಿಕೊಂಡ ಮಹಾರಾಷ್ಟ್ರ ವಿದ್ಯುತ್ ಬೋರ್ಡ್ ಅದಕ್ಕೆ ಈಗಾಗಲೇ ಲಭ್ಯವಿರುವ ಇತರ ಅಗ್ಗದ (ಯೂನಿಟಿಗೆ ರೂ. 1.40 ರಿಂದ 2.00) ಮೂಲಗಳನ್ನು*
- *ತೈಲದ ಬೆಲೆ ಪುನಃ ಏರಲು ಆರಂಭಿಸಿದ್ದರಿಂದ ಇನ್ನೂ ಏನ್ರೋನ್ ವಿದ್ಯುತ್ ಬೆಲೆ ಏರಬಹುದು. ಆದರೆ 'ಗ್ಯಾರಂಟಿ' ಯಿಂದಾಗಿ ಅದರ ಬೆಲೆ ತೆರಲೇಬೇಕು.*
- *ಗ್ರಾಹಕ ಯೂನಿಟಿಗೆ ರೂ. 5.00 ರಿಂದ 5.50 ಬೆಲೆ ತೆರುವ ದಿನಗಳು ತೀರಾ ಹತ್ತಿರ ಬಂದಿವೆ.*

ಹುಚ್ಚರು ಇಂತಹ ಅನುಭವಗಳಿಂದ ಪಾಠ ಕಲಿಯಬೇಕಾಗುತ್ತದೆ. ಆದರೆ ಏನ್ರೋನ್‌ನಲ್ಲಿ ಕೆಟ್ಟ ಮೇಲೂ, ಕೊಜೆಂಟ್ರಿಕ್ಸ್ ನಲ್ಲಿ ಬುದ್ಧಿ ಬಂದಿಲ್ಲ. ಕೊಜೆಂಟ್ರಿಕ್ಸ್ ಮತ್ತು ಅದರ ಸಹವರ್ತಿ ಸಿ.ಎಲ್.ಪಿ.ಯನ್ನು ಕೈ ಬಿಟ್ಟು ದೇಶಿ ಬಂಡವಾಳ ದೇಶಿ ವಿದ್ಯುತ್ ಸ್ಥಾವರ ಆಧಾರಿತ ವಿದ್ಯುತ್ ಬೆಳವಣಿಗೆಗೆ ಸರ್ಕಾರ ಅನುವಾಗಬೇಕು. ಇದಕ್ಕೆ ಸರ್ಕಾರದ ಮೇಲೆ ಒತ್ತಡ ತರಬೇಕು.

ಇಲ್ಲದಿದ್ದರೆ ಇತ್ತಾರು ಕೊಜೆಂಟ್ರಿಕ್ಸ್ ನಂತಹ ಹಗರಣಗಳು ಪುನಃ ನಡೆಯುತ್ತಲೇ ಇರುತ್ತವೆ

ವ್ಯವಸ್ಥೆಯನ್ನು ತಮ್ಮ ಹರಿತ ನಾಲಗೆಯ ಟೀಕೆಗೊಳಪಡಿಸಿದ

ಲಂಕೇಶ್ ಇನ್ನಿಲ್ಲ



ಜಿ.ಎನ್.ನಾಗರಾಜ್

ಜನವರಿ 25 ರ ಮಂಗಳವಾರ ಲಂಕೇಶ್‌ರವರ ನಿಧನದ ವಾರ್ತೆ ತಲುಪಿದಾಗ ಒಂದು ಶೂನ್ಯಭಾವ, ವಿಷಾದ ಮನಸ್ಸನ್ನಾವರಿಸಿತು. ಕರ್ನಾಟಕದ ರಾಜಕೀಯದ ಎರಡು ದಶಕಗಳ ಹಲವು ಪದರುಗಳು, ಸಾಂಸ್ಕೃತಿಕ ಲೋಕದ ನಾಲ್ಕು ದಶಕಗಳ ಇತಿಹಾಸ ಕಣ್ಣೆದುರು ಬಿಟ್ಟುಕೊಳ್ಳಲಾರಂಭಿಸಿತು. ಹೀಗೆ ಕರ್ನಾಟಕದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ ಮೇಲೆ ತಮ್ಮ ವ್ಯಕ್ತಿತ್ವದ ಅಚ್ಚೊತ್ತಿದ ಲಂಕೇಶ್ ಇನ್ನಿಲ್ಲ. ತಮ್ಮ ಆರೋಗ್ಯ ಸ್ಥಿತಿಯನ್ನು ತಮ್ಮ ಪತ್ರಿಕೆಯ ಓದುಗರೊಂದಿಗೆ ಹಂಚಿಕೊಳ್ಳುತ್ತಾ ತಮಗೇ ಅರಿವಿಲ್ಲದಂತೆ ಸಾವಿನ ನಿರೀಕ್ಷೆಯನ್ನು ಮೂಡಿಸಿದ್ದುದರಿಂದ ಅವರ ಅಭಿಮಾನಿಗಳಿಗೆ 'ಶಾಕ್' ಆಗಲಿಲ್ಲ.

ಆದರೆ ಶಾಕ್‌ಗೆ ಹೊರತಾದ ಆಳವಾದ ದುಃಖವನ್ನು ಅನುಭವಿಸುತ್ತಿದ್ದಾರೆ.

ವ್ಯವಸ್ಥೆಯ ಭಂಜಕ

ಲಂಕೇಶರ ನಿಧನದಿಂದಾದ ನಷ್ಟ ಕೇವಲ ಒಬ್ಬ ಬರಹಗಾರ, ಒಬ್ಬ ಸಂಪಾದಕ ಅಳಿದ ನಷ್ಟ ಮಾತ್ರವಲ್ಲ, ಒಂದು ತಲೆಮಾರನ್ನು ನಿರಂತರವಾಗಿ ವ್ಯವಸ್ಥೆಯ ವಿರುದ್ಧ ಬೆಳೆಸಿದ, ವ್ಯವಸ್ಥೆ - ಮುಖ್ಯಮಂತ್ರಿ ಮೊದಲಾದ ಅಧಿಕಾರಸ್ಥರು ಮಾತ್ರವಲ್ಲದೆ ಕವಿಗಳು, ಸಾಹಿತಿಗಳು, ಮಠಾಧಿಪತಿಗಳು ಇವರ ಬಗ್ಗೆ ಮೂಡಿಸುವ ಪರಮ ಪೂಜ್ಯತೆಯ ದೃಷ್ಟಿ - ಅವರನ್ನು ಪ್ರಶ್ನಾತೀತರನ್ನಾಗಿಸುವ ದೃಷ್ಟಿಯನ್ನು ನಾಶ ಮಾಡಿದರು. ಅವರು ಕೂಡ ಸಮಾಜಕ್ಕೆ ಜವಾಬ್ದಾರರಾಗಬೇಕಾದ ವ್ಯಕ್ತಿಗಳು - ಸಮಾಜದ ಇತರ ಎಲ್ಲರಂತೆ ಎಂಬ ಭಾವನೆಯನ್ನು ಮೂಡಿಸಿದರು. ಅವರ ಬರಹಗಳ ಹರಿತವಾದ ವ್ಯಂಗ್ಯ, ಕಟಕಿಗಳು ಲೇವಡಿಗಳು. ಬೇಂದ್ರೆ, ಅಡಿಗ, ಶಿವರಾಮಕಾರಂತ ಮೊದಲಾದವರನ್ನು ತೂಗಿ ನೋಡುವಂತಹ ಮೌಲಿಕ ಬರಹಗಳು ಸಮರ್ಥವಾಗಿ ಈ ಕೆಲಸ ಮಾಡಿದವು. ಅದೇ ರೀತಿ ಅನಂತಮೂರ್ತಿಯಂತಹ ಸಾಹಿತಿಗಳ ಸೋಗಲಾಡಿತನವನ್ನು, ಭ್ರಷ್ಟತನವನ್ನು ಬಯಲಿಗೆಳೆದದ್ದು ಕೂಡ. ಅವರ ಅಭಿಪ್ರಾಯಗಳೆಲ್ಲವೂ ಅಳಿಯುತ್ತಿರುವ, ಅಳಿಯಬೇಕಾದ ಪ್ರತಿಗಾಮಿ ಪ್ರವೃತ್ತಿಗಳು ಮೊಳೆಯುತ್ತಿರುವ ಪ್ರಗತಿಪರ ಚಿಂತನೆಗಳು ಎಲ್ಲವನ್ನು ಟೀಕಿಸುವ ಕೆಲವೊಮ್ಮ ಗುಬ್ಬಿಗಳ ಮೇಲೆ ಬ್ರಹ್ಮಾಸ್ತ್ರ ಬಿಡುವ ಪ್ರವೃತ್ತಿ ಇವೆಲ್ಲವನ್ನು ಒಪ್ಪಿಕೊಳ್ಳುವ ಮಾತಲ್ಲ. ಅದರಲ್ಲಿಯೂ ಬಂಡಾಯ ಸಾಹಿತ್ಯ ಚಳುವಳಿಯ ಬಗೆಗಿನ ಅವರ ದೃಷ್ಟಿಕೋನ ಅವರು ಸಮಾಜದ ಪ್ರಗತಿಪರ ಶಕ್ತಿಗಳ ಬಗ್ಗೆ ತಳೆಯುತ್ತಿದ್ದ ವಿನಾಶಕಾರಿ ಮನೋವೃತ್ತಿಯ ಉದಾಹರಣೆ.

ರಾಜಕೀಯ ಶಕ್ತಿಯಾಗಿ

ಕರ್ನಾಟಕದ ರಾಜಕೀಯ - ಸಾಮಾಜಿಕ ಸಂದರ್ಭದಲ್ಲಿ ಅವರು ವಹಿಸಿದ ಪಾತ್ರ ಒಂದು ಪಕ್ಷವಲ್ಲದ ರಾಜಕೀಯ ಶಕ್ತಿಯ ಪಾತ್ರವಾಗಿತ್ತು. ಸ್ವಾತಂತ್ರ್ಯಾನಂತರ ಜನರ ನಿರೀಕ್ಷೆಗಳು ಆಸೆ ಆಕಾಂಕ್ಷೆಗಳು ಈಡೇರದೆ ಕಾಂಗ್ರೆಸ್ ಪಕ್ಷದ ಬಗ್ಗೆ ಅತೃಪ್ತಿಯ ಅಲೆ ಏಳಲಾರಂಭಿಸಿತು. 1967 ರ ಚುನಾವಣೆಯಲ್ಲಿ ದೇಶದ 8 ರಾಜ್ಯಗಳಲ್ಲಿ ಕಾಂಗ್ರೆಸ್ ಸೋತುಹೋಯಿತು. ಕರ್ನಾಟಕದಲ್ಲಿ ಕಾಂಗ್ರೆಸ್ ಬಹುಮತ ಪಡೆದರೂ ಕಡಿಮೆ ಮತಗಳನ್ನು ಪಡೆಯಿತು. ಸಮಾಜವಾದಿಗಳು ಕಾಂಗ್ರೆಸ್ ವಿರೋಧಿ ಅತೃಪ್ತಿಯ ಅಲೆಯ ಮೇಲೆ ಹೆಚ್ಚು ಸಂಖ್ಯೆಯಲ್ಲಿ ಆರಿಸಿಬಂದರು. ಮುಂದೆ ಕಾಂಗ್ರೆಸ್ ವಿಭಜನೆಯ ನಂತರ ಗರೀಬಿಹಟಾವೋ ಅಲೆಯಲ್ಲಿ ಸಮಾಜವಾದಿಗಳ ಒಂದು ಭಾಗವನ್ನು ಕಾಂಗ್ರೆಸ್ ಜೀರ್ಣಿಸಿಕೊಂಡರೂ, ಜನರಲ್ಲಿ - ಅದರಲ್ಲಿಯೂ ಬಡಜನರ ಬೆಂಬಲವನ್ನು ಗಳಿಸಿಕೊಂಡರೂ ದೇವರಾಜ ಅರಸರ ಹಿಂದುಳಿದ ಜಾತಿಗಳ ರಾಜಕಾರಣದ ನಡುವೆಯೂ ಜನರ ಅತೃಪ್ತಿ ಮುಂದುವರೆಯಿತು. ಅದರಲ್ಲಿಯೂ ಮಧ್ಯಮ ವರ್ಗದ ಜನರಲ್ಲಿ ಇದು ಇದೇ ಮಧ್ಯಮ ವರ್ಗಕ್ಕೆ ಸೇರಿದ ಸಾಹಿತಿ, ಬುದ್ಧಿಜೀವಿವರ್ಗದಲ್ಲಿ ತೀವ್ರವಾಗಿ ಸಮಾಜವಾದಿ ಯುವಜನ ಸಭಾ, ಜೆ.ಪಿ.ಚಳುವಳಿ, ಗುಜರಾತ್, ಬಿಹಾರಗಳಲ್ಲಿ ಜಯಪ್ರಕಾಶ್ ನಾರಾಯಣರವರ ನೇತೃತ್ವದಲ್ಲಿ ನಡೆದ ಜನಸಮುದಾಯದ ಚಳುವಳಿಗಳಿಗೆ ಸಂವಾದಿಯಾಗಿ ಕರ್ನಾಟಕದಲ್ಲಿ ಆರಂಭಗೊಂಡ ಚಟುವಟಿಕೆಗಳು, ಇವೆಲ್ಲವುಗಳಲ್ಲಿ ಈ ಬುದ್ಧಿಜೀವಿಗಳು ಗಣನೀಯ ಪಾತ್ರವಹಿಸಿದರು. ಒಟ್ಟಾರೆಯಾಗಿ ಸ್ವಾತಂತ್ರ್ಯದ ನಂತರ ಹೊಸದಾಗಿ ಶಿಕ್ಷಣ ಪಡೆದ ಯುವಸಮುದಾಯದ ಮೇಲೆ ಇದು ಪ್ರಭಾವ ಬೀರಿತು.

> **ಸಾಹಿತಿಯಾಗಿ ಲಂಕೇಶ್**
>
> ಲಂಕೇಶ್‌ರವರು ಕವಿಯಾಗಿ, ಕಥೆಗಾರನಾಗಿ, ಕಾದಂಬರಿಕಾರನಾಗಿ, ನಾಟಕಕಾರನಾಗಿ, ವಿಮರ್ಶಕನಾಗಿ, ಅನುವಾದಕನಾಗಿ ಕನ್ನಡ ಸಾಹಿತ್ಯಕ್ಕೆ ಗಣನೀಯ ಸೇವೆ ಸಲ್ಲಿಸಿದ್ದಾರೆ. ರಂಗಭೂಮಿಯಲ್ಲಿ ಅವರು ವಹಿಸಿದ ಪಾತ್ರ ಗಣನೀಯವಾದುದು. ಚಲನಚಿತ್ರರಂಗದಲ್ಲಿಯೂ ಕೈಯಾಡಿಸಿದ ಅವರು ಹಲವು ಚಿತ್ರಗಳ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಅವರ ಕಾದಂಬರಿಗಳು -ಬಿರುಕು, ಮುಸ್ಸಂಜೆಯ ಕಥಾ ಪ್ರಸಂಗಗಳು ಹಾಗೂ ಅಕ್ಕ.

ತುರ್ತು ಪರಿಸ್ಥಿತ ನಂತರದ ಚಳುವಳಿಗಳ ಅಲೆಯ ಮೇಲೆ

1975 ರಲ್ಲಿ ಇಂದಿರಾಗಾಂಧಿ ದೇಶದ ಮೇಲೆ ಹೇರಿದ ತುರ್ತು ಪರಿಸ್ಥಿತಿಯ ಫಲವಾಗಿ ಜನತೆಯಲ್ಲಿ ಮತ್ತೆ ಕಾಂಗ್ರೆಸ್ ವಿರುದ್ಧ ಭಾವನೆ ಬಲಿಯಿತು. ಅದರಲ್ಲಿಯೂ ನವಶಿಕ್ಷಿತ ಯುವಜನ ಸಮುದಾಯ ರೊಚ್ಚಿಗೆದ್ದಿತು. ಇದರ ಪರಿಣಾಮವಾಗಿ ತುರ್ತು ಪರಿಸ್ಥಿತಿಯ ನಂತರ ಪ್ರಜಾಸತ್ತಾತ್ಮಕ ಚಳುವಳಿಗಳ ಅಲೆ ಎದ್ದಿತು. ಕಾರ್ಮಿಕ ಹೋರಾಟಗಳು, ರೈತ ಚಳುವಳಿಗಳು ಇವುಗಳ ಜೊತೆಗೆ ದಲಿತ ಚಳುವಳಿ, ಬಂಡಾಯ ಸಾಹಿತ್ಯ ಚಳುವಳಿ, ಸಮುದಾಯ ಸಾಂಸ್ಕೃತಿಕ ಜಾಥಾ ಇವೆಲ್ಲವೂ ಜನಮಾನಸವನ್ನು ಆವರಿಸಿ ಅವರ ರಾಜಕೀಯ ಸಾಮಾಜಿಕ ಅರಿವನ್ನು ವಿಸ್ತರಿಸುತ್ತಿದ್ದ ಸಮಯದಲ್ಲಿ ಲಂಕೇಶ್ ರಾಜಕೀಯ ಬರಹಗಳ ಮೂಲಕ ಗ್ರಾಮೀಣ ಹಾಗೂ ಗ್ರಾಮೀಣ ಮೂಲದ ನಗರದ ಮಧ್ಯಮವರ್ಗದ ಭಾವನೆಗಳಿಗೆ ಧ್ವನಿಯಾದರು. ಸಾಹಿತ್ಯಕ-ಸಾಮಾಜಿಕ ಬರಹಗಳ ಮೂಲಕ ವ್ಯಕ್ತವಾಗುತ್ತಿದ್ದ ಅವರ ರಾಜಕೀಯ ನಿಲುವುಗಳು 'ಪ್ರಜಾವಾಣಿ'ಪತ್ರಿಕೆಯಲ್ಲಿ ರಾಜಕೀಯ ಲೇವಡಿಗಳ ಮೂಲಕ ನೇರವಾಗಿ ವ್ಯಕ್ತವಾಗತೊಡಗಿತು. ಈ ಲೇಖನಗಳು ಪಡೆದ ಜನಪ್ರಿಯತೆ 'ಲಂಕೇಶ್ ಪತ್ರಿಕೆ'ಯ ಜನನಕ್ಕೆ ಸ್ಫೂರ್ತಿ ನೀಡಿತು. ಗ್ರಾಮೀಣ ಹಾಗೂ ಗ್ರಾಮೀಣ ಮೂಲದ ಮಧ್ಯವರ್ಗದವರು ಕಾಂಗ್ರೆಸ್ ವಿರೋಧಿ ಭಾವನೆಯ ಅಲೆ ಪತ್ರಿಕೆಯ ಆಧಾರ ನೆಲೆಯಾಯಿತು. ಈ ವ್ಯವಸ್ಥೆಯ ವಿರೋಧಿ ನಿಲುವನ್ನು ತೀವ್ರಗೊಳಿಸುವಲ್ಲಿ, ಅದನ್ನು ಹಿಡಿದಿಟ್ಟುಕೊಳ್ಳುವಲ್ಲಿ 'ಲಂಕೇಷ್ ಪತ್ರಿಕೆ' ವಹಿಸಿದ ಪಾತ್ರವೇ ಅದನ್ನೊಂದು ರಾಜಕೀಯ ಶಕ್ತಿಯನ್ನಾಗಿಸಿತು.

ಕೋಮುವಾದದ ವಿರುದ್ಧದ ಹೋರಾಟಕ್ಕೆ ಕಾಣಿಕೆ

ಲಂಕೇಶ್ ಪತ್ರಿಕೆಯ ಪ್ರಭಾವವನ್ನು ಒಂದು ರಾಜಕೀಯ ಪಕ್ಷವನ್ನಾಗಿ ಪರಿವರ್ತಿಸಲು ಪಟ್ಟ ಪ್ರಯತ್ನ (ಪ್ರಯಾಸವೆಂದೇ ಕರೆಯಬಹುದು) ವಿಫಲವಾದದ್ದು, ಅವರ ರಾಜಕೀಯ ನಿಲುವುಗಳ ಮಿತಿಯ ಬಗ್ಗೆ ಕರ್ನಾಟಕದ ಜನತೆ ಹಾಗೂ ಅವರ ಅಭಿಮಾನಿಗಳೇ ನೀಡಿದ ವ್ಯಾಖ್ಯಾನ. ಆದರೆ ದೇಶದ ಹಲವು ಭಾಗಗಳಲ್ಲಿ ಕಾಂಗ್ರೆಸ್ ವಿರುದ್ಧದ ಅತೃಪ್ತಿ ಕೋಮುವಾದಿ ಶಕ್ತಿಗಳ ಬೆಳವಣಿಗೆಗೆ ಆಸರೆಯಾಗಿ ಬಿಟ್ಟ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಈ ಅತೃಪ್ತಿಯನ್ನು ಸಂಘಪರಿವಾರ ಬಳಸಿಕೊಳ್ಳಲು ಅವಕಾಶ ನೀಡಿದ ವಾತಾವರಣದ ಒಂದು ಪ್ರಮುಖ ಅಂಶ ಲಂಕೇಶ್ ಪತ್ರಿಕೆಯ ಸಂಘಪರಿವಾರ ವಿರುದ್ಧವಾದ ಸ್ಪಷ್ಟ ನಿಲುವು ಎನ್ನಬಹುದು.

ಅದೇರೀತಿ ಕರ್ನಾಟಕದ ಸಾಂಸ್ಕೃತಿಕ ರಂಗದಲ್ಲಿ ಅನಂತಮೂರ್ತಿ, ಡಿ.ಆರ್.ನಾಗರಾಜ್, ಕೆ.ವಿ. ಸುಬ್ಬಣ್ಣರವರ ಗುಂಪು 'ಸಾಂಸ್ಕೃತಿಕ ಮರೆವು' 'ಪಶ್ಚಿಮದ ಧಾಳಿ' ಎಂಬ ಹೆಸರಿನಲ್ಲಿ ಇತಿಹಾಸ, ವಿಜ್ಞಾನಗಳಿಗೆ ವಿರುದ್ಧವಾದ ಪುರಾಣ-ಕಂದಾಚಾರಗಳ ಪ್ರತಿಗಾಮಿ ಮೌಲ್ಯಗಳಿಗೆ ಇಂಬು ಕೊಡುತ್ತಿರುವಾಗ ಲಂಕೇಶ್ ತಮ್ಮ ಪತ್ರಿಕೆಯ ಬರಹಗಳ ಮೂಲಕ ಮಾಡಿದ ನಿರ್ಣಾಯಕ ಧಾಳಿ ಈ ಹಿಮ್ಮುಖಿ ಪ್ರವೃತ್ತಿಗಳನ್ನು ಕುಂಠಿತಗೊಳಿಸಿತು.

ಲಂಕೇಶರ ಮಿತಿಗಳು

ಕಾಂಗ್ರೆಸ್ ವಿರುದ್ಧದ ಅತೃಪ್ತಿಯನ್ನು ವ್ಯವಸ್ಥೆಯ ವಿರುದ್ಧದ ಅತೃಪ್ತಿಯನ್ನಾಗಿ ರೂಪಿಸಲು ಪ್ರಯತ್ನಿಸಿದರೂ ಕೂಡ ಅದೊಂದು ರಾಜಕೀಯ ಶಕ್ತಿಯಾಗಿ ರೂಪುಗೊಳ್ಳುವುದಕ್ಕೆ ಅವರ ಚಿಂತನೆಯ ಮಿತಿಗಳೇ ಕಾರಣ. ವ್ಯವಸ್ಥೆಯ ರೋಗದ ಲಕ್ಷಣಗಳನ್ನೇ ಲಂಕೇಶ್ ರೋಗವೆಂದು ಭ್ರಮಿಸಿದರು ಮತ್ತು ಭ್ರಷ್ಟಾಚಾರ ಮುಂತಾದ ಈ ಲಕ್ಷಣಗಳ ಮೇಲೆ ತಮ್ಮೆಲ್ಲ ಧಾಳಿಯನ್ನು ಹರಿಬಿಟ್ಟರು. ವ್ಯವಸ್ಥೆಯ ಕೊಳೆಯುವಿಕೆಗೆ ಕಾರಣವಾದ ಆಳದ ಕಾರಣಗಳನ್ನು ಶೋಧಿಸುವಲ್ಲಿ ವಿಫಲರಾದರು. ಈ ವಿಫಲತೆಗೆ ಪ್ರಗತಿಪರ ವಿಚಾರಗಳತ್ತ ಸಾಗಿಬಂದ ರ್‍ಯಾಡಿಕಲ್ ಮನೋಭಾವದ ಯುವಕರ ಬೆಳವಣಿಗೆಯನ್ನು ತಡೆಹಿಡಿದಿದೆ. ಲಂಕೇಶರ ಈ ಮಿತಿಗೆ ಅವರು ನೆಚ್ಚಿದ್ದ ಲೋಹಿಯಾವಾದ ಮತ್ತು ಅದರ ಕಮ್ಯುನಿಸಂ ಸಿದ್ಧಾಂತಗಳ ತೀವ್ರ ವಿರೋಧವೇ ಕಾರಣ ಎನ್ನುವುದು ಸತ್ಯ. ಕರ್ನಾಟಕದ ಲೋಹಿಯಾವಾದಿಗಳು ಹರಿಹಂಚಾಗಿರುವುದು ಅವರ ಒಟ್ಟು ವಿಫಲತೆ ಈ ಮಾತಿಗೆ ಹಿಡಿದ ಕನ್ನಡಿ. ಆದರೆ ಲಂಕೇಶ್ ಈ ಮಿತಿಯನ್ನು ಮೀರಲಾಗಲಿಲ್ಲ ಎಂಬುದು ಅವರ ವೈಯಕ್ತಿಕ ವಿಫಲತೆ. ಇದು ಅವರು ವಹಿಸಬಹುದಾಗಿದ್ದ ಪ್ರಗತಿಪರ ಪಾತ್ರವನ್ನು ಮಿತಿಗೊಳಿಸಿತು. ಆದರೂ ಕರ್ನಾಟಕದ ರಾಜಕೀಯಕ್ಕೆ, ಸಾಮಾಜಿಕ-ಸಾಂಸ್ಕೃತಿಕ ಚಿಂತನೆಗೆ ಅವರು ನೀಡಿದ ಕಾಣಿಕೆಯನ್ನು ಮರೆಯುವಂತಿಲ್ಲ.

○



'ಪ್ರೀತ್ಸೆ' ವಿಕೃತಿಗಳ ವೈಭವೀಕರಣ

ದೃಶ್ಯಮಾಧ್ಯಮ ಅತ್ಯಂತ ಪ್ರಭಾವಯುತವಾದ ಮಾಧ್ಯಮ, ಜನರನ್ನು ಆಕರ್ಷಿಸುವುದೇ ಅಲ್ಲದೆ ಗಾಢ ಪರಿಣಾಮವನ್ನು ಬೀರಬಲ್ಲಂತದ್ದು. ವಿಪರ್ಯಾಸ ವೆಂದರೆ ಈ ಮಾಧ್ಯಮಗಳ ಮೇಲೆ ಹಿಡಿತ ಹೊಂದಿರು ವವರು ಕೇವಲ 'ದುಡ್ಡು' ಮಾಡುವು ದೊಂದನ್ನೇ ಗುರಿಯಾಗಿಟ್ಟುಕೊಂಡು ಕೆಟ್ಟ 'ಮೌಲ್ಯ ಗಳನ್ನು, ಆಚರಣೆಗಳನ್ನು ಜನಸಾಮಾನ್ಯರ ಮನಸ್ಸಿನಲ್ಲಿ ತುಂಬುತ್ತಿದ್ದಾರೆ. ಅಂತಹ ನಿರ್ಲಜ್ಜ ಪ್ರಯತ್ನವೇ ಹಿಂದೀ ಚಿತ್ರವೊಂದರ ರೀಮೇಕ್ ಆದ 'ಪ್ರೀತ್ಸೆ'

'ಪ್ರೀತ್ಸೆ' ಚಿತ್ರ ಹಿಂದಿ ಚಿತ್ರಕ್ಕಿಂತ ಉತ್ತಮವೋ, ಅಲ್ಲವೋ ಅಥವಾ ಉಪೇಂದ್ರ ಮೇಲೋ, ಶಾರುಖ್ ಖಾನ್ ಮೇಲೋ ಎಂದು ತಲೆ ಕೆಡಿಸಿಕೊಳ್ಳುವುದಕ್ಕಿಂತ ಈ ಚಿತ್ರದ ಕಥಾವಸ್ತು ಮತ್ತು ಅದರ ಪರಿಣಾಮಗಳ ಬಗ್ಗೆ ಗಮನಿಸುವುದು ಮುಖ್ಯ.

ಇತ್ತೀಚಿನ ದಿನಗಳಲ್ಲಿ ಕೆಲವರು ತಮ್ಮ ಹಿಡಿತದಲ್ಲಿರುವ ಮಾಧ್ಯಮಗಳ ಮುಖಾಂತರ ತಮ್ಮ ಕುಕೃತ್ಯಗಳನ್ನು ಸಮರ್ಥಿಸಿಕೊಳ್ಳುತ್ತಾ ತಾವಿದ್ದ ಪರಿಸ್ಥಿತಿಯಲ್ಲಿ ಇದನ್ನು ಬಿಟ್ಟು ಬೇರೆ ಏನೂ ಮಾಡಲು ಸಾಧ್ಯವೇ ಇರಲಿಲ್ಲ ಎಂಬಂತೆ ಪೋಸು ಕೊಡುತ್ತಾ ಜನರಿಂದ 'ಸಿಂಪಥಿ' ಗಿಟ್ಟಿಸಲು ಪ್ರಯತ್ನಿಸುತ್ತಿದ್ದಾರೆ ಮತ್ತು ಅದನ್ನು ಸಾಧಿಸಿದ್ದಾರೆ ಕೂಡ. ಉದಾ: 'ಹಾಯ್ ಬೆಂಗಳೂರು', 'ಅಗ್ನಿ'ಯಂತಹ ಪತ್ರಿಕೆಗಳು. ಸಿನಿಮಾ ಗಳಲ್ಲಿ ಕೂಡಾ ಈಗ ಇಂಥದ್ದೇ ಪ್ರವೃತ್ತಿ ಬೆಳೆಯುತ್ತಿದೆ. ಹಿಂದೀ ಚಿತ್ರರಂಗದಲ್ಲಿ ಈಗಾಗಲೇ ಬಹಳ ದಿನ ಗಳಿಂದಲೇ ಈ 'ವಿಕೃತ ಮನಸ್ಸಿನ ಪಾತ್ರ' ಗಳ ವೈಭವೀಕರಣ ಚಾಲ್ತಿಯಲ್ಲಿದ್ದರೆ ಕನ್ನಡ ಚಿತ್ರರಂಗಕ್ಕೆ ಉಪೇಂದ್ರನ ಆಗಮನದೊಂದಿಗೆ ಈ ವೈಭವೀಕರಣ ಆರಂಭಗೊಂಡಿದೆ.

ತಾನು ಮೆಚ್ಚಿದ ಹುಡುಗಿ ತನಗೆ ದಕ್ಕಬೇಕೆಂಬ ಬಯಕೆ ಎಲ್ಲ ಹುಡುಗರಲ್ಲೂ ಸಹಜವಾದ್ದದ್ದು. ಆದರೆ ಆ ಹುಡುಗಿ ಈತನನ್ನು ಮೆಚ್ಚದೆ ತಾನು ಮೆಚ್ಚಿದ ಹುಡುಗನೊಂದಿಗೆ ಮದುವೆಯಾದ ಮೇಲೆ ಈ 'ಪ್ರೇಮಿ'ಯಾದವನು ತನ್ನ ಬಯಕೆಗಳನ್ನು 'ಮಣ್ಣು ಮಾಡಿ' ತನ್ನ ದಾರಿ ತಾನು ನೋಡಿಕೊಂಡರೆ ಅದು ಸರಿಯಾದುದು. ಆದರೆ 'ಪ್ರೀತ್ಸೆ'ಯಲ್ಲಿ ಹಾಗಾಗು ವುದಿಲ್ಲ. ಈ 'ಪ್ರೇಮಿ' ಬೆನ್ನು ಬಿಡದ ಬೇತಾಳದಂತೆ ಅವಳನ್ನು ಕಾಡುತ್ತಾನೆ, ಬೆದರಿಸುತ್ತಾನೆ, ಹಿಂಸಿಸುತ್ತಾನೆ ಮತ್ತು ತನ್ನನ್ನೇ ಮದುವೆಯಾಗುವಂತೆ ಒತ್ತಾಯಿಸುತ್ತಾ ನಲ್ಲದೆ ಆಕೆಯ ಗಂಡನನ್ನು ಕೊಲ್ಲಲು ಕೂಡ ಮುಂದಾಗುತ್ತಾನೆ.

ಚಿತ್ರದ ನಿರೂಪಣೆಯಲ್ಲಿ ಈ 'ಹುಚ್ಚುಪ್ರೇಮಿ'ಯ ಪ್ರೀತಿಯೇ ನಿಜವಾದ ಪ್ರೀತಿ, ಅವನ ಬಯಕೆ ಸರಿಯಾದುದು ಎಂಬಂತೆ ವೈಭವೀಕರಿಸಿ ನೋಡುವ ಪ್ರೇಕ್ಷಕನು ಆತನ ಬಗ್ಗೆ ಕನಿಕರಗೊಳ್ಳುವಂತೆ ಚಿತ್ರಿಸಲಾಗಿದೆ. ಕನ್ನಡ ಚಿತ್ರದಲ್ಲಾದರೆ 'ಉಪೇಂದ್ರ' ಸ್ವಲ್ಪ ಖಳನಾಯಕನಂತೆಯೇ ಕಾಣುತ್ತಾನೆ ಆದರೆ ಹಿಂದಿ ಚಿತ್ರದಲ್ಲಿ ಶಾರುಖ್ ಖಾನ್ ತನ್ನ ಭಾವನಾತ್ಮಕ ಅಭಿನಯದಿಂದ ಇಡೀ ಚಿತ್ರವನ್ನೇ ಆವರಿಸಿ ಪ್ರೇಕ್ಷಕನು ಅವನ ದುಸ್ಥಿತಿಯ ಬಗ್ಗೆ ಮರುಕ ಪಡುವಂತಹ ಪ್ರಭಾವ ಮೂಡಿಸಿದ್ದ.

ಇಲ್ಲಿ ಮಧುರ ಭಾವನೆಗಳಿಗಾಗಲಿ, ಆ ಹೆಣ್ಣಿನ ಆಸೆ, ಆಕಾಂಕ್ಷೆಗಳ ಬಗ್ಗೆ ಯಾಗಲಿ ಯಾವುದೇ ಕಾಳಜಿಯಿಲ್ಲ. ಈತ ಇಷ್ಟಪಟ್ಟಿದ್ದಾನೆ ಆದ್ದರಿಂದ ಆಕೆ ಈತನನ್ನು ಮದುವೆಯಾಗಬೇಕಷ್ಟೆ. ಅವಳ ಪ್ರೀತಿ ಪ್ರೇಮ ಅವೆಲ್ಲಾ ಲೆಕ್ಕಕ್ಕಿಲ್ಲ. ಈ 'ಪ್ರೇಮಿ'ಯ ಹುಚ್ಚಾಟ ಅತಿಯಾಯಿತು ಎಂದು ನಿಮಗನಿಸಿದರೆ ಅದಕ್ಕೂ ಇಲ್ಲಿ ಸಮಜಾಯಿಷಿ ಇದೆ. ಈತ 'ಮಾನಸಿಕ ಅಸ್ವಸ್ಥ' ಎಂದು ಹಣೆಪಟ್ಟಿ ಹಚ್ಚಿ ಅವನ ಹುಚ್ಚಾಟವನ್ನು ಸಮರ್ಥಿಸುತ್ತಾರೆ. ಆದರೆ ಕೊನೆಯಲ್ಲಿ ಮಾತ್ರ ಆಕೆಗೆ ತನ್ನ ಮೇಲಿರು ತಿರಸ್ಕಾರವನ್ನು ಒಪ್ಪಿ ನಿನ್ನ ಗಂಡನೊಂದಿಗೆ ಸುಖವಾಗಿರುವ ಎಂದು ಹೇಳುತ್ತಾ ತನ್ನನ್ನು ತಾನು 'ಶೂಟ್' ಮಾಡಿಕೊಳ್ಳುವುದು ಕೂಡಾ ಅತಿರೇಕದಿಂದ ಕೂಡಿದ್ದು, ಯುವಕರ ಮೇಲೆ ದುಷ್ಪರಿಣಾಮ ಬೀರುವಂತದ್ದು. ಈ ಜ್ಞಾನೋದಯ ಮುಂಚೆಯೇ ಯಾಕಾಗಬಾರದಿತ್ತು?

ಇಂತಹ 'ವಿಕೃತ ಪಾತ್ರ'ಗಳ ಮೂಲಕವೇ ಖ್ಯಾತಿಗೆ ಬಂದ ಶಾರುಖ್ ಖಾನ್ ಈ ಪಾತ್ರಗಳು ಬೀರುವ ಪರಿಣಾಮವನ್ನು ಮನಗಂಡು ವೈಯಕ್ತಿಕ ವಾಗಿ ತಾನು ಇಂತಹ ಪಾತ್ರಗಳನ್ನು ನಿರ್ವಹಿಸಲು ಇಚ್ಛಿಸುವುದಿಲ್ಲ ವೆಂದು ಹೇಳಿದ್ದಲ್ಲದೆ ಇತ್ತೀಚಿನ ದಿನಗಳಲ್ಲಿ ಅಂತಹ ಪಾತ್ರಗಳಲ್ಲಿ ನಟಿಸುವುದನ್ನು ನಿಲ್ಲಿಸಿದ್ದಾರೆ ಕೂಡ.

ಕನ್ನಡ ಚಿತ್ರರಂಗದವರು ಇದನ್ನು ಗಮನಿಸಬೇಕು. ಒಂದು ಚಿತ್ರವನ್ನು ನೋಡಿ ಹೊರಬಂದ ಮೇಲೆ ನಮ್ಮ ಸುತ್ತಮುತ್ತಲಿನ ಸಮಾಜವನ್ನು ಪ್ರೀತಿ ಸುವಂತಹ ಮೌಲ್ಯಗಳನ್ನು ಜನರಲ್ಲಿ ಬಿತ್ತಬೇಕೇ ಹೊರತು ದಾರಿಯಲ್ಲಿ ಹೋಗುತ್ತಿರುವ ಹುಡುಗಿ ಯನ್ನು ನೋಡಿ 'ಒಂದು ಕೈ ನೋಡುವ' ಎಂದು ಕಲ್ಲು ಹೊಡೆಯುವಂತಾಗಬಾರದು. ಈಗಾಗಲೇ ಹದಿವಯಸ್ಕ ಯುವಕರು 'ಕ್ರಿಮಿನಲ್' ಕೃತ್ಯಗಳಿಗೆ ಕೈ ಹಾಕಿದ್ದು ತಾವುಗಳು ನೋಡಿದ ಸಿನಿಮಾ ಗಳೇ ಇದಕ್ಕೆ ಸ್ಫೂರ್ತಿಯೆಂದು ಒಪ್ಪಿಕೊಂಡಿದ್ದಾರೆ.

ಕನ್ನಡದಲ್ಲಿ ಇಂತಹ ಚಿತ್ರಗಳ ಸಂಖ್ಯೆ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಚಿತ್ರ ತಯಾರಕರು ಇದನ್ನು ಗಮನದಲ್ಲಿಟ್ಟುಕೊಂಡು ಯೋಚಿಸಬೇಕು. 'ಏನೋ ಚೆನ್ನಾಗಿ ಎಸೆದ ಅಂದರೆ ಮತ್ತೆ ಮತ್ತೆ ಎಸೆದನಂತೆ ಹೇಲುಂಡೆಯ' ಎನ್ನುವಂತಾಗಬಾರದು. ಮಧುರ ಭಾವನೆಗಳಿಗೂ ಬೆಲೆಯಿರಲಿ, ಒಳ್ಳೆಯ ಚಿಂತನೆಗಳಿರಲಿ, ಉತ್ತಮ ಮೌಲ್ಯಗಳನ್ನು ಬಿತ್ತಿ ಆರೋಗ್ಯಪೂರ್ಣ ಸಮಾಜವನ್ನು ಕಟ್ಟುವ ಕನಸುಗಳಿರಲಿ. ಆಗ ಅದ್ವಿತೀಯವಾದುದನ್ನೇ ಸಾಧಿಸಬಹುದು.

○

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ